ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 9 ಭಾನುವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 292 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ದೆಹಲಿಯಲ್ಲಿ 'ಆಪ್' ಧೂಳೀಪಟ...



ಬಾಸುಮತಿ, ಸೋನಾ ಮಸೂರಿ ಸಾಲಿಗೆ ಡಾ.ಸುಜಾತ ಅಕ್ಕಿ ನಾಟಕಗಳು ಸೇರ್ಪಡೆ!

●ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ವಿಮರ್ಶೆ ●ಡಾ.ಸುಜಾತ ಅಕ್ಕಿ ನಾಟಕೋತ್ಸವಕ್ಕೆ ಚಾಲನೆ

ಮೈಸೂರು, ಫೆ.8(ಎಸ್‌ಪಿಎನ್)– ಭಾರತೀಯ ಅಕ್ಕಿಯಲ್ಲಿ ಬಾಸುಮತಿ, ಸೋನಾ ಮಸೂರಿ ಅಕ್ಕಿ ಗುಣಮಟ್ಟದಿಂದ ಕೂಡಿವೆ. ಈ ಗುಣಮಟ್ಟದ ಅಕ್ಕಿಗಳ ಸಾಲಿಗೆ ಡಾ.ಸುಜಾತ ಅಕ್ಕಿ ರಚಿತ ನಾಟಕಗಳು ಸೇರುತ್ತವೆ. ನಾಟಕಗಾರ್ತಿ ಡಾ.ಸುಜಾತ ಅಕ್ಕಿ 'ಸೋನಾ ಮಸೂರಿ ಇದ್ದಂತೆ' ಎಂದು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಬಣ್ಣಿಸಿದರು.

ಮೈಸೂರು ಕಲಾಮಂದಿರ ಆವರಣದ ಕಿರುಮಂದಿರದ ಮುಂಭಾಗದಲ್ಲಿ ರಂಗಯಾನ ಟ್ರಸ್ಟ್ ಏರ್ಪಡಿಸಿದ್ದ ಮೂರು ದಿನಗಳ 'ಡಾ.ಸುಜಾತ ಅಕ್ಕಿ ನಾಟಕೋತ್ಸವ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಡಾ.ಸುಜಾತ ಅಕ್ಕಿ ಅವರು 'ಚಾಮಚೆಲುವೆ', ಸೋಲಿಗರ ಬಾಲೆ ನಾಟಕ ಸೇರಿದಂತೆ ಒಟ್ಟು 22 ನಾಟಕಗಳನ್ನು ರಚಿಸಿದ್ದಾರೆ. ಇವರು ಆಯ್ದುಕೊಳ್ಳುವುದು 'ಕಾಯಕ' ಬಿಂಬಿಸುವ ಕಥಾವಸ್ತು. ಸತ್ಯಕ್ಕ ನಾಟಕದಲ್ಲಿ ಕಸ ಗುಡಿಸುವ ಸತ್ಯಕ್ಕನ ಪಾತ್ರದಲ್ಲಿ ವೇದ–ಮಂತ್ರ ಪಠಿಸುವಂತೆ ಮಾಡಿದ್ದಾರೆ. ಈ ಪಾತ್ರ ನಿರೂಪಣೆ ತುಂಬಾ ಸೊಗಸಾಗಿ ಮೂಡಿಬಂದಿದೆ ಎಂದರು.


ಮೂರು ದಿನಗಳ 'ಡಾ.ಸುಜಾತ ಅಕ್ಕಿ ನಾಟಕೋತ್ಸವ'ಕ್ಕೆ ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ, ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು

ಹಿರಿಯ ನಾಟಕಕಾರರಾದ ಡಾ.ಚಂದ್ರಶೇಖರ ಕಂಬಾರ, ಡಾ.ಗಿರೀಶ್ ಕಾರ್ನಾಡ್ ಅವರು ರಚಿತ ನಾಟಕಗಳು ದೇಶ–ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿವೆ. ಆ ಸಾಲಿಗೆ ಡಾ.ಸುಜಾತ ಅಕ್ಕಿ ರಚಿತ ನಾಟಕಗಳು ಸೇರುತ್ತವೆ. ಇವರು ರಚಿತ 'ಚಾಮಚೆಲುವೆ' ನಾಟಕವನ್ನು ಮಂಡ್ಯ ರಮೇಶ್ ನಿರ್ದೇಶಿಸಿದ್ದರು. ಆ ವೇಳೆ ಚಾಮಚೆಲುವೆ ನಾಟಕವನ್ನು ನೋಡಿದ್ದೆ. ಅದು ಸ್ವಲ್ಪ ಚರ್ಚೆಯ ವಿಷಯವಾಗಿತ್ತು ಎಂದರು.

ದೇಶದಲ್ಲಿ ಮೈಸೂರಿನ ರಂಗಭೂಮಿ ಚಟುವಟಿಕೆಗಳು ಕುರಿತು ಹೆಚ್ಚು ಚರ್ಚೆಯಾಗುತ್ತಿದೆ. ಉತ್ತರ ಭಾರತಕ್ಕೆ ಸೀಮಿತವಾಗಿದ್ದ ರಂಗಭೂಮಿ, ಜಾನಪದ ಚಟುವಟಿಕೆಗಳು ಇದೀಗ ಕರ್ನಾಟಕದಲ್ಲೂ ಹೆಚ್ಚು ಪ್ರದರ್ಶನಗೊಳ್ಳುತ್ತಿವೆ. ಇದಕ್ಕೆ ಹವ್ಯಾಸಿ ತಂಡಗಳ ಕೊಡುಗೆ ಅಪಾರ. ಈ ಅಂಶವೂ ಮೈಸೂರಿಗೆ ಸಾಂಸ್ಕೃತಿಕ ನಗರಿ ಎಂಬ ಬಿರುದು ಬರಲು ಕಾರಣ ಎಂದರು.

ಈ ವೇಳೆ ಜಾನಪದ ಗಾಯಕ ಹೆಚ್.ನಟರಾಜು ಅವರನ್ನು ಸನ್ಮಾನಿಸಲಾಯಿತು. ಗಹನ ಗಾಯನ ತಂಡದವರು ಜಾನಪದ ರಸಸಂಜೆ ನಡೆಸಿಕೊಟ್ಟರು. ವೇದಿಕೆಯಲ್ಲಿ ಹಿರಿಯ ನಾಟಕಗಾರ್ತಿ ಡಾ.ಸುಜಾತ ಅಕ್ಕಿ, ಶ್ರೀ ರಾಜೇಶ್ವರಿ ವಸ್ತ್ರ ವಿನ್ಯಾಸಕ ಬಿ.ಎಂ.ರಾಮಚಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಹಾಗೂ ರಂಗಯಾನ ಟ್ರಸ್ಟ್ ಕಲಾವಿದರು ಉಪಸ್ಥಿತರಿದ್ದರು. ತದನಂತರ ಡಾ.ಸುಜಾತ ಅಕ್ಕಿ ರಚಿತ ಚಾಮಚೆಲುವೆ ನಾಟಕ ಪ್ರದರ್ಶನಗೊಂಡಿತು.

ಕಲಾಮಂದಿರ ರಿಪೇರಿಗೆ ಬಜೆಟ್‌ನಲ್ಲಿ ಅನುದಾನ ಭರವಸೆ

ಮೈಸೂರು, ಫೆ.8(ಎಸ್‌ಪಿಎನ್)– ಸರಿಯಾದ ನಿರ್ವಹಣೆ ಇಲ್ಲದೆ, ಸಕಾಲಕ್ಕೆ ರಿಪೇರಿ ಆಗದೇ ಕಲಾಮಂದಿರ ಹಾಳಾಗುತ್ತಿದೆ. ಇದರ ರಿಪೇರಿಗಾಗಿ ಈ ಬಾರಿ ಬಜೆಟ್‌ನಲ್ಲಿ ಅನುದಾನ ಮೀಸಲಿಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರಲ್ಲಿ ಮನವಿ ಮಾಡಿದ್ದೇನೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮೈಸೂರಲ್ಲಿ ಜಾನಪದ, ನಾಟಕ, ರಂಗಭೂಮಿ ಚಟುವಟಿಕೆಗಳು ನಿರಂತರವಾಗಿ ನಡೆಯಬೇಕು. ಆಗಲೇ ಮೈಸೂರಿಗೆ ಒಂದು ಕಳೆ. ಮೈಸೂರಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಳೆಗಟ್ಟಲು ಮೈಸೂರು ವಿವಿಯ ಕೊಡುಗೆ ಅಪಾರ. 10 ವರ್ಷಗಳ ಹಿಂದೆ ಮೈಸೂರು ವಿವಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಕುರಿತು ಚರ್ಚೆಗಳು ನಡೆಯುತ್ತಿದ್ದವು. ಈಗ ಅಂತಹ ವಾತಾವರಣವಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನನ್ನ ತಂದೆ(ಕೃಷ್ಣಪ್ಪ) ಮೈಸೂರು ವಿವಿ ಗ್ರಂಥಾಲಯ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಅಕಾಲಿಕ ಮರಣ ಹೊಂದಿದ್ದ ಪರಿಣಾಮ ಆ ಕೆಲಸ ಅನುಕಂಪದ ಆಧಾರ ಮೇಲೆ ನನಗೆ ದೊರಯಿತು. ಆ ವೇಳೆ ಗ್ರಂಥಾಲಯದಲ್ಲಿ ಕೆಲಸ ಮಾಡುವಾಗ ಪ್ರೊ.ಅರವಿಂದ ಮಾಲಗತ್ತಿ ಸೇರಿದಂತೆ ಹಲವು ಪ್ರಾಧ್ಯಾಪಕರು ಗ್ರಂಥಾಲಯಕ್ಕೆ ಬಂದು, ಅಧ್ಯಯನ ನಡೆಸುತ್ತಿದ್ದ ಪ್ರಸಂಗವನ್ನು ಶಾಸಕರು ನೆನೆದರು. ಹಾಗಾಗಿ ಮೈಸೂರಿನ ಕಲಾ ಚಟುವಟಿಕೆಗಳ ತಾಣವಾಗಿರುವ ಕಲಾಮಂದಿರ, ಕಿರು ರಂಗಮಂದಿರ ರಿಪೇರಿಗೆ ಹೆಚ್ಚಿನ ಅನುದಾನವನ್ನು ಬಜೆಟ್‌ನಲ್ಲಿ ಮೀಸಲಿಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ. ಈ ಬಾರಿ ಕಲಾಮಂದಿರ ಸಮಗ್ರ ಅಭಿವೃದ್ಧಿಗೆ ಅನುದಾನ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಜಿ. ಕರಿಯಪ್ಪ ಅವರ ಮಾರ್ಗದರ್ಶನದಲ್ಲಿ ಸುಷ್ಮಾ ಜಿ.ಮಾಧವರಾವ್ ಅವರು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಜಮೀನು ನೀಡಿದ ರೈತರ ಕುಟುಂಬಗಳಿಗೆ ಉದ್ಯೋಗ ನೀಡದ ಕಾರ್ಖಾನೆ ವಿರುದ್ಧ ಪ್ರತಿಭಟನೆ

ಮೈಸೂರು, ಫೆ.8(ಜಿಎ)–ರೈತರ ಜಮೀನು ಪಡೆದುಕೊಂಡು ರೈತ ಕುಟುಂಬದವರು ಹಾಗೂ ಸ್ಥಳೀಯರಿಗೆ ಉದ್ಯೋಗ ನೀಡದೆ ವಂಚಿಸಿರುವ ಟಿವಿಎಸ್ ಮೋಟಾರ್ ಕಂಪೆನಿ ವಿರುದ್ಧ ಫೆ.17ರಂದು ಬೆಳಗ್ಗೆ 11 ಗಂಟೆಗೆ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಕಾರ್ಖಾನೆ ಎದುರು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ರೈತ ಪರ್ವ ಸಂಘಟನೆ ಪ್ರಧಾನ ಕಾರ್ಯದರ್ಶಿ ಡಾ.ಉಮಾಪತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ತಾಲೂಕಿನ ಜಯಪುರ ಹೋಬಳಿಯ ಸಿಂಧುವಳ್ಳಿ–ಬ್ಯಾತಹಳ್ಳಿ ಗ್ರಾಮದಲ್ಲಿ ಕಾರ್ಖಾನೆ ಸ್ಥಾಪನೆಗೆ ಟಿವಿಎಸ್ ಮೋಟಾರ್ ಕಂಪನಿಯು ರೈತರಿಂದ ಜಮೀನು ಪಡೆದುಕೊಂಡಿದೆ. ಆದರೆ, ರಾಜ್ಯ ಸರ್ಕಾರದ ಆದೇಶದಂತೆ ಕಾರ್ಖಾನೆ ಸ್ಥಾಪಿತ ಪ್ರದೇಶದ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸಿಕೊಟ್ಟಿಲ್ಲ. ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡ ರೈತ ಕುಟುಂಬದ ಸದಸ್ಯರೊಬ್ಬರಿಗೆ ಉದ್ಯೋಗ ಕಲ್ಪಿಸುವುದೂ ಸೇರಿದಂತೆ ಸರ್ಕಾರದ ಎಲ್ಲ ನಿಯಮಗಳನ್ನೂ ಈ ಕಂಪನಿಯವರು ಗಾಳಿಗೆ ತೂರಿ ದೌರ್ಜನ್ಯ ಎಸಗುತ್ತಿದ್ದಾರೆ. ಇದರ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಅಂದಿನ ಪ್ರತಿಭಟನೆಯಲ್ಲಿ ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ಮಾಜಿ ಸದಸ್ಯರು, ಮಹಿಳಾ ಸ್ವ–ಸಹಾಯ ಸಂಘಗಳ ಸದಸ್ಯರು, ರೈತರು, ಮಹಿಳೆಯರು, ನಿರುದ್ಯೋಗಿ ಯುವ ಜನರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತಪರ್ವದ ಸಂಸ್ಥಾಪಕ ಅಧ್ಯಕ್ಷ ಅರುಣ್‌ಕುಮಾರ್, ಸಿಂಧುವಳ್ಳಿ ಗ್ರಾಪಂ ಸದಸ್ಯರಾದ ಕೃಷ್ಣಯ್ಯ, ಶಿವಯ್ಯ, ಮಂಡಕಳ್ಳಿ ಚಾಮರಾಜು ಉಪಸ್ಥಿತರಿದ್ದರು.

12 ವರ್ಷಗಳ ಬಳಿಕ ಪ್ರತೀಕಾರ: ಕೇಜ್ರಿವಾಲ್ ಸೋಲಿಸಿ ತಾಯಿಯ ಸೋಲಿಗೆ ಸೇಡು ತೀರಿಸಿದ ಕಾಂಗ್ರೆಸ್ ಅಭ್ಯರ್ಥಿ ಸಂದೀಪ್ ದೀಕ್ಷಿತ್



ನವದೆಹಲಿ: ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರ ಸೋಲಿಗೆ ಕಾಂಗ್ರೆಸ್ ಅಭ್ಯರ್ಥಿ ಸಂದೀಪ್ ದೀಕ್ಷಿತ್ ಅವರೇ ಕಾರಣ. ಪ್ರವೇಶ್ ವರ್ಮಾ ನವದೆಹಲಿ ವಿಧಾನಸಭಾ ಸ್ಥಾನದಿಂದ ಚುನಾವಣೆಯಲ್ಲಿ ಗೆದ್ದಿರಬಹುದು. ಆದರೆ ಈ ಗೆಲುವಿಗೆ ಪ್ರಮುಖ ಕಾರಣ ಸಂದೀಪ್ ದೀಕ್ಷಿತ್. ಈ ಗೆಲುವಿನೊಂದಿಗೆ, ಸಂದೀಪ್ ದೀಕ್ಷಿತ್ 2013ರಲ್ಲಿ ತಮ್ಮ ತಾಯಿ ಶೀಲಾ ದೀಕ್ಷಿತ್ ಅವರ ಸೋಲಿಗೆ ಸೇಡು ತೀರಿಸಿಕೊಂಡಿದ್ದಾರೆ. 2013ರಲ್ಲಿ ಅರವಿಂದ್ ಕೇಜ್ರಿವಾಲ್ ಇದೇ ಸ್ಥಾನದಿಂದ ಶೀಲಾ ದೀಕ್ಷಿತ್ ಅವರನ್ನು ಸೋಲಿಸಿದ್ದರು.

ಸಂದೀಪ್ ದೀಕ್ಷಿತ್ ಚುನಾವಣೆಯಲ್ಲಿ ಗೆದ್ದಿಲ್ಲದಿರಬಹುದು ಆದರೆ ಕೇಜ್ರಿವಾಲ್ ಸೋಲಿಗೆ ಅವರೇ ಕಾರಣರಾಗಿದ್ದಾರೆ. ನವದೆಹಲಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರವೇಶ್ ವರ್ಮಾ 30 ಸಾವಿರದ 88 ಮತಗಳನ್ನು ಪಡೆದು 4089 ಮತಗಳಿಂದ ಗೆದ್ದರು. ಆದರೆ ಅರವಿಂದ್ ಕೇಜ್ರಿವಾಲ್ 25999 ಮತಗಳನ್ನು ಪಡೆದು 4089 ಮತಗಳಿಂದ ಸೋತರು. ಕಾಂಗ್ರೆಸ್ ಅಭ್ಯರ್ಥಿ ಸಂದೀಪ್ ದೀಕ್ಷಿತ್ 4568 ಮತಗಳನ್ನು ಪಡೆದರು. ಲೋಕಸಭಾ ಚುನಾವಣೆಯಂತೆ ಎಎಪಿ ಮತ್ತು ಕಾಂಗ್ರೆಸ್ ವಿಧಾನಸಭಾ ಚುನಾವಣೆಯಲ್ಲೂ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿದ್ದರೆ, ನವದೆಹಲಿ ಕ್ಷೇತ್ರದ ಫಲಿತಾಂಶ ಬೇರೆಯೇ ಆಗಿರುತ್ತಿತ್ತು.

ಅಭಿನಂದನೆ....


ದಿ ಮೈಸೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾಗಿರುವ ಯೋಗಾನಂದ ನರಸಿಂಹೇಗೌಡ ಅವರನ್ನು ಯುವ ಮುಖಂಡರಾದ ಶ್ರೀಕಾಂತ್, ಸಂತೋಷ್, ಮಂಜಣ್ಣ, ನಾರಾಯಣ, ದಿಲೀಪ್, ಚಂದ್ರು, ಪಾಪ, ದೊಡ್ಡ ಇತರರು ಅಭಿನಂದಿಸಿದರು.

ಪಿ.ಶೇಖರಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಸ್.ಮಹೇಂದ್ರಕುಮಾರ್ ಅವರ ಮಾರ್ಗದರ್ಶನದಲ್ಲಿ ಪಿ.ಶೇಖರ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಅಪಾಯಕಾರಿ ಸ್ವಚ್ಛತಾ ಕಾರ್ಯ ನಿಷಿದ್ಧ

ಮೈಸೂರು, ಫೆ.8(ಎಸ್‌ಪಿಎನ್)– ಸುರಕ್ಷಾ ಸಾಮಗ್ರಿಗಳಿಲ್ಲದೆ ಸೆಪ್ಟಿಕ್ ಟ್ಯಾಂಕ್ ಅಥವಾ ಒಳಚರಂಡಿ ಆಳುಗುಂಡಿಗೆ ಪೌರಕಾರ್ಮಿಕರು ಇಳಿದು ಸ್ವಚ್ಛಗೊಳಿಸುವುದನ್ನು ಸುಪ್ರೀಂಕೋರ್ಟ್ ತೀರ್ಪಿನಂತೆ ಹಾಗೂ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ನಿಷೇಧ ಕಾಯ್ದೆ 2013ರ ಪ್ರಕಾರ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಮೈಸೂರು ನಗರಪಾಲಿಕೆ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ(ಪಶ್ಚಿಮ)ದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆ ಹೊರಡಿಸಿದ್ದಾರೆ.

ಆದರೆ, ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿ 2011ರಲ್ಲಿಯೇ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಅನ್ನು ನಿಷೇಧಿಸಲಾಗಿದ್ದು, 2009ರಿಂದ ಯಂತ್ರಗಳನ್ನು ಬಳಸಿ ಒಳಚರಂಡಿ ನಿರ್ವಹಣೆ ಮಾಡಲಾಗುತ್ತಿದೆ ಎಂದಿದ್ದಾರೆ.

ಮ್ಯಾನುಯಲ್ ಸ್ಕ್ಯಾವೆಂಜಿಂಗ್ ನಿಷೇಧ ಕಾಯ್ದೆ 2013ರನ್ವಯ ಆಳುಗುಂಡಿಗಳಲ್ಲಿ ಹಸ್ತಚಾಲಿತ ಸ್ವಚ್ಛತೆ ಕಾನೂನುಬಾಹಿರ ಮತ್ತು ಜಾಮೀನು ರಹಿತ ಶಿಕ್ಷಾರ್ಹ ಅಪರಾಧ. ಯಾವುದೇ ಒಳಚರಂಡಿ ಸ್ವಚ್ಛತಾ ಕೆಲಸಗಳನ್ನು ನಗರಪಾಲಿಕೆ ನುರಿತ ಸಫಾಯಿ ಮಿತ್ರರಿಂದಲೇ ಮಾಡಿಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.


ಫೈಲ್ ಚಿತ್ರ

ಒಂದು ವೇಳೆ ಯಾವುದೇ ವ್ಯಕ್ತಿಯನ್ನು ಅನಧಿಕೃತವಾಗಿ ಆಳುಗುಂಡಿಯಲ್ಲಿ ಇಳಿಸುವುದು ಕಂಡುಬಂದಲ್ಲಿ ಸಹಾಯವಾಣಿ 14420ಕ್ಕೆ ಇಲ್ಲವೆ ಮೊ.ಸಂ: 9449841196 ಕರೆ ಮಾಡಿ ದೂರು ನೀಡಬಹುದು

ನಿಧನ



ಶ್ರೀಮತಿ ಜಯಮ್ಮ

ಮೈಸೂರು, ಫೆ.8– ಮೈಸೂರಿನ ಸರಸ್ವತಿಪುರಂನ ದಿವಂಗತ ಗೌಡೇಗೌಡರ ಪತ್ನಿ ಶ್ರೀಮತಿ ಜಯಮ್ಮ (73) ಅವರು ಶುಕ್ರವಾರ ಸಂಜೆ ನಿಧನರಾದರು. ಇವರು ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಟಿ.ಗೋವಿಂದರಾಜು



ಹುಣಸೂರು ನಗರದ ವೆಂಕಟರಮಣ ಸಾಮಿಲ್ ಮಾಲೀಕರಾದ ಹೆಚ್.ಟಿ.ಗೋವಿಂದರಾಜು (60) ಶುಕ್ರವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಕಿರಿಯ ಪುತ್ರ ಕೆನಡಾದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದು, ಅವರು ಭಾನುವಾರ ಬಂದ ನಂತರ ಅಂತ್ಯಕ್ರಿಯೆ ಅಂದೇ ಮಧ್ಯಾಹ್ನ ಮೈಸೂರಿನ ವಿಜಯನಗರದ 4ನೇ ಹಂತದಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.



ಮಂಡೇಟಿರಾ ಸುರೇಶ್ ಬೆಳ್ಳಿಯಪ್ಪ

ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಹಾಗೂ ದಿವಂಗತ ನಾಣಯ್ಯ ಅವರ ಪುತ್ರ ಮಂಡೇಟಿರಾ ಸುರೇಶ್ ಬೆಳ್ಳಿಯಪ್ಪ (65) ಶನಿವಾರ ಬೆಳಗ್ಗೆ ನಿಧನರಾದರು.

ಮೂಲತಃ ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಕಾಕೋಟು ಪರಂಬು ಗ್ರಾಮದವರಾದ ಇವರು ಪತ್ನಿ ಭಾಗಿರಥಿ (ಬೀನಾ) (ಬಾಚರಾಣಿಯಂಡ, ಚೇರಂಬಾಣೆ), ಪುತ್ರರಾದ ಪ್ರಗತಿ ಮತ್ತು ಅಮ್ಮನ ಕುಟ್ಟಂಡ ರಕ್ಷಾ ಕರಣ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಶ್ರೀಯುತರು ಸೆಪ್ಟೆಂಬರ್ 21, 2023 ರಂದು ನಿಧನರಾದ ಮಾಜಿ ಸಾರ್ಜೆಂಟ್ ಆಫ್ ಇಂಡಿಯನ್ ಏರ್‌ಫೋರ್ಸ್ ಮತ್ತು ವೀಕೇರ್ ಮಾಜಿ ಸೈನಿಕರ ಟ್ರಸ್ಟ್ ಅಧ್ಯಕ್ಷ ದಿವಂಗತ ಮಂಡೇಟಿರಾ ಎನ್.ಸುಬ್ರಮಣಿ ಅವರ ಸಹೋದರ. ಅಂತ್ಯಕ್ರಿಯೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತೊರವಳ್ಳಿ ಶಿವನಂಜಪ್ಪ



ಚಾಮರಾಜನಗರ ತಾಲೂಕು ಕುದೇರು ಸಮೀಪದ ತೊರವಳ್ಳಿ ಗ್ರಾಮದ ಟಿಎಪಿಸಿಎಂಎಸ್ ನಿವೃತ್ತ ಕಾರ್ಯದರ್ಶಿ ತೊರವಳ್ಳಿ ಶಿವನಂಜಪ್ಪ (79) ಇಂದು ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 1 ಗಂಟೆಗೆ ಅವರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ



ಮೂಡಲಕೊಪ್ಪಲು ಕೃಷ್ಣಮೂರ್ತಿ

ಹುಣಸೂರು ತಾಲೂಕಿನ ಮೂಡಲಕೊಪ್ಪಲು ಗ್ರಾಮದ ಕೃಷ್ಣಮೂರ್ತಿ (52) ಶನಿವಾರ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯ ಶನಿವಾರದಂದೇ ಮೂಡಲಕೊಪ್ಪಲು ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.02.2025 ಭಾನುವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಥೈರಾಯಿಡ್ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಸ್ವಜನ ಕಲಾ ವೇದಿಕೆ :** ಶಿಶಿರ ಕಾವ್ಯೋತ್ಸವ, ಉದ್ಘಾಟನೆ : ವಿಮರ್ಶಕರಾದ ಡಾ. ಎಸ್.ಡಿ. ಶಶಿಕಲಾ, ಅಧ್ಯಕ್ಷತೆ : ಹಿರಿಯ ಕವಿ ಡಾ. ಕೆ.ಪಿ. ಮಹಾದೇವಯ್ಯ, ಆಶಯ ನುಡಿ : ಸಾಹಿತಿ ಎಸ್. ಶಿಶಿರಂಜನ್ (ಶಿಶಿರ), ಮುಖ್ಯ ಅತಿಥಿಗಳು : ಸಾಹಿತಿ ಟಿ. ಸತೀಶ್ ಜವರೇಗೌಡ, ಜಿಲ್ಲಾ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಬಿ.ಎಸ್. ಸತೀಶ್, ಸಾಹಿತಿ ಡಿ.ಪಿ. ಚಿಕ್ಕಣ್ಣ (ದಾಮಚಿ), ಹಿರಿಯ ಪತ್ರಕರ್ತ ಎಸ್. ಶ್ರೀಧರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಶ್ರೀಮತಿ ಪುಷ್ಪಲತಾ ಮೋಹನ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ, ಬೆಳಗ್ಗೆ 10.30ಕ್ಕೆ.

■ **ವಾಡೋ ರಿಯೋ ಕರಾಟೆ ಡು ಅಸೋಸಿಯೇಷನ್ :** 19ನೇ ಮುಕ್ತ ಕರಾಟೆ ಚಾಂಪಿಯನ್‌ಶಿಪ್, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ನಿವೃತ್ತ ನ್ಯಾಯಾಧೀಶರಾದ ಎ.ಕೆ. ನವೀನ್ ಕುಮಾರಿ, ಕೊಡಗು ಗೌಡ ಸಮಾಜದ ಅಧ್ಯಕ್ಷ ಕೆ.ಯು. ಬಸಪ್ಪ, ಎನ್.ಜಿ. ಶಿವದಾಸ್, ಎನ್. ಶಂಕರ, ಎಸ್. ದೀಪಕ್ ಕುಮಾರ್, ಎಂ. ರವಿ, ಸ್ಥಳ: ಲೀಲಾ ಚನ್ನಯ್ಯ ಛತ್ರ, ವಿನಾಯಕನಗರ, ಬೆಳಗ್ಗೆ 9.30ಕ್ಕೆ

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** ಶ್ರೀಮತಿ ಬಿ.ಕೆ. ಮೀನಾಕ್ಷಿ ಅವರ 3 ಕೃತಿಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಎಚ್.ವಿ. ನಾಗರಾಜರಾವ್, ಜೆಎಸ್‌ಎಸ್ ವಿದ್ಯಾಪೀಠ ಪ್ರಕಟಣಾ ವಿಭಾಗದ ಪ್ರೊ. ಮೊರಬದ ಮಲ್ಲಿಕಾರ್ಜುನ, ವಿಶ್ರಾಂತ ಪ್ರಾಧ್ಯಾಪಕ ಡಾ.ಸಿ. ನಾಗಣ್ಣ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಹಿರಿಯ ಕವಯಿತ್ರಿ ಶ್ರೀಮತಿ ಬಿ.ಕೆ. ಮೀನಾಕ್ಷಿ, ರಂಗನಾಥ್ ಮೈಸೂರು, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಸಹಜ ಸಮೃದ್ಧ, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ :** ಗೆಡ್ಡೆ ಗೆಣಸು ಮೇಳ, ಉದ್ಘಾಟನೆ : ಕೃಷಿ ಬೆಲೆ ಆಯೋಗ ಅಧ್ಯಕ್ಷ ಡಾ. ಅಶೋಕ್ ದಳವಾಯಿ, ಮುಖ್ಯ ಅತಿಥಿಗಳು : ರಾಷ್ಟ್ರ ಪ್ರಶಸ್ತಿ ವಿಜೇತ ಶಾಜಿ ಎನ್.ಎಂ., ರೋಟರಿ ಕ್ಲಬ್ ಆಫ್ ಮೈಸೂರು ಪಶ್ಚಿಮ ಕಾರ್ಯದರ್ಶಿ ಎಂ. ದೇವರಾಜು, ಗೆಡ್ಡೆ ಗೆಣಸು ಬೆಳೆಗಾರರಾದ ಶ್ರೀಮತಿ ಪಾರ್ವತಿ, ಅಧ್ಯಕ್ಷತೆ: ರೋಟರಿ ಕ್ಲಬ್ ಆಫ್ ಮೈಸೂರು ಪಶ್ಚಿಮ ಅಧ್ಯಕ್ಷ ಎಂ.ಎಲ್. ನಾಗೇಶ್, ಪ್ರಸ್ತಾವನೆ : ಸಹಜ ಸಮೃದ್ಧ ನಿರ್ದೇಶಕ ಜಿ. ಕೃಷ್ಣಪ್ರಸಾದ್, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 11ಕ್ಕೆ

■ **ಸಪ್ನ ಬುಕ್ ಹೌಸ್ :** ರಾಷ್ಟ್ರಕವಿ ಕುವೆಂಪು ಅವರ 120ನೇ ಜನ್ಮ ದಿನಾಚರಣೆ ಹಾಗೂ ಸಪ್ನ ಬುಕ್ ಹೌಸ್ 58ನೇ ವಾರ್ಷಿಕೋತ್ಸವ, ಉಪಸ್ಥಿತರು : ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದಗೌಡ, ಕುವೆಂಪು ಅವರ ಸುಪುತ್ರಿ ಶ್ರೀಮತಿ ತಾರಿಣಿ ಚಿದಾನಂದ, ಲೆಗಸಿ ಕ್ಲಬ್ ಅಧ್ಯಕ್ಷ ಡಿ.ವಿ.ದಯಾನಂದ್ ಸಾಗರ್, ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಕೆ.ಎಂ. ಸಿದ್ದಪ್ಪ, ಸ್ಥಳ: ಸಪ್ನ ಬುಕ್ ಹೌಸ್, ಬೆಳಗ್ಗೆ 11ಕ್ಕೆ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ, ಶ್ರೀಮತಿ ಸುಮಲತಾ ಎನ್.ಪಿ. ಮತ್ತು ವಿ. ಚಿನ್ನಯ್ಯ :** ಕು. ತನುಶ್ರೀ ಎಸ್. ಚಿನ್ನಯ್ಯ ಅವರ ಭರತನಾಟ್ಯ ರಂಗ ಪ್ರವೇಶ, ಅಧ್ಯಕ್ಷತೆ : ಶೃತಿ ಮಂಜರಿ ಪ್ರತಿಷ್ಠಾನ ಸ್ಥಾಪಕ ನಿರ್ದೇಶಕರಾದ ಗಾನಕಲಾ ಭೂಷಣ ವಿದುಷಿ ಡಾ.ಆರ್.ಎನ್. ಶ್ರೀಲತಾ, ಮುಖ್ಯ ಅತಿಥಿಗಳು : ನಟನಾ ರಂಗಶಾಲೆ ಸ್ಥಾಪಕ ನಿರ್ದೇಶಕ ಮಂಡ್ಯ ರಮೇಶ್, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕರಾದ ಶ್ರೀಮತಿ ಡಾ. ಎಂ. ಪುಷ್ಪಾವತಿ, ಚಾಮರಾಜನಗರ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ಸ್ಥಾಪಕ ನಿರ್ದೇಶಕರಾದ ಗುರು ವಿದುಷಿ ಡಾ. ಕೃಪಾ ಫಡ್ಕೆ, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 5.30ಕ್ಕೆ.

■ **ಭಾವೀ ಸಮೀರ ಶ್ರೀ ವಾದಿರಾಜ ಸೇವಾ ಸಮಿತಿ, ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಭಾವೀಸಮೀರ ಶ್ರೀ ವಾದಿರಾಜರ ಜಯಂತಿ, ಸಂಜೆ 5ಕ್ಕೆ ಸಾಮೂಹಿಕ ಶ್ರೀ ಲಕ್ಷ್ಮೀ ಶೋಭಾನೆ ಪಠಣ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ, ಸಂಜೆ 6ಕ್ಕೆ ವಿದ್ವಾನ್ ಶ್ರೀ ಶ್ರೀನಿವಾಸಾಚಾರ್ ಅವರಿಂದ ಪ್ರವಚನ, ಸಂಜೆ 6ಕ್ಕೆ ರಂಗಪೂಜೆ, ಸಂಜೆ 7.30ಕ್ಕೆ ಮಹಾಮಂಗಳಾರತಿ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ.

■ **ಕರಾವಳಿ ಯಕ್ಷಗಾನ ಕೇಂದ್ರ :** 14ನೇ ವಾರ್ಷಿಕೋತ್ಸವ, ಮಧ್ಯಾಹ್ನ 2.30ಕ್ಕೆ ಬಡಗುತಿಟ್ಟು ವಿದ್ಯಾರ್ಥಿಗಳಿಂದ ಪೂರ್ವರಂಗ, ಅಪರಾಹ್ನ 3.15 ಗಂಟೆಗೆ ತೆಂಕುತಿಟ್ಟು ವಿದ್ಯಾರ್ಥಿಗಳಿಂದ ಯಕ್ಷಗಾನ ಪೆರಡೂರು ರಘುರಾಮ ಮಲ್ಯ ವಿರಚಿತ ಶಶಿಪ್ರಭಾ ಪರಿಣಯ, ಸಂಜೆ 5.30ಕ್ಕೆ ಸಭಾ ಕಾರ್ಯಕ್ರಮ, ವಿಶೇಷ ಆಹ್ವಾನಿತರು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಕೇಂದ್ರದ ಅಧ್ಯಕ್ಷ ಶ್ರೀಧರ ಐತಾಳ, ಮುಖ್ಯ ಅತಿಥಿಗಳು : ದೀಕ್ಷಿತ್ ಆರೋಗ್ಯಧಾಮ ನಿರ್ದೇಶಕ ಡಾ. ಅನಿಲ್‌ಕುಮಾರ್ ದೀಕ್ಷಿತ್, ರಾಮಕೃಷ್ಣ ನರ್ಸಿಂಗ್ ಹೋಂ ನಿರ್ದೇಶಕ ಡಾ. ಕೆ.ವಿ. ಲಕ್ಷ್ಮೀದೇವಿ, ಸಂಜೆ 6.15ಕ್ಕೆ ಬಡಗುತಿಟ್ಟು ವಿದ್ಯಾರ್ಥಿಗಳಿಂದ ದೇವದಾಸ ವಿರಚಿತ ಚಿತ್ರಸೇನ ಕಾಳಗ ಯಕ್ಷಗಾನ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸುನಿರ್ಮಲಾನಂದ ಅವರಿಂದ ವೈವಿಧ್ಯಮಯ ದೃಷ್ಟಿಕೋನಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಹಿರಿಯ ಕಲಾವಿದರಿಂದ ಕಾಣೆ ಆದವರು ನಾಟಕ ಪ್ರದರ್ಶನ, ನಿರ್ದೇಶನ : ಸೌರವ್ ಪೋದ್ದಾರ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 59ನೇ ವರ್ಷದ ತೈಪೂಸಂ ಮಹೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 6.30 ರಿಂದ ಶ್ರೀವಲ್ಲಿ ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿ ಅವರಿಗೆ ಕಲ್ಯಾಣೋತ್ಸವ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ.

■ **ಕಮಲಮ್ಮ ಜಿ.ಎ. ಶಿವಲಿಂಗಯ್ಯ ಧಾರ್ಮಿಕ ದತ್ತಿ ಸಂಸ್ಥೆ :** ಲೇಖಕಿ ಭ್ರಮರಾಂಬ ಅವರಿಗೆ ಜಿ.ಎಸ್. ವಿಜಯಲಕ್ಷ್ಮಿ ಸ್ಮಾರಕ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಮಹಾರಾಜ ಸಂಸ್ಕೃತ ಪಾಠಶಾಲೆ ನಿವೃತ್ತ ಪ್ರಾಧ್ಯಾಪಕ ಎಂ. ಮಲ್ಲಣ್ಣ, ಉದ್ಘಾಟನೆ : ಶರಣ ಸಾಹಿತ್ಯ ಪರಿಷತ್, ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಮುಖ್ಯ ಅತಿಥಿಗಳು : ಡಾ.ಎಂ.ಜಿ. ನಾಗರಾಜ್, ಚಾಮುಂಡಿಬೆಟ್ಟ ನಿವೃತ್ತ ಶಿಕ್ಷಕ ಡಿ. ಪಾಪಣ್ಣ, ರಾಜ್ಯ ಫೊರೆನ್ಸಿಕ್ ಲ್ಯಾಬ್ ಉಪನಿರ್ದೇಶಕ ಡಾ. ಸೋಮಶೇಖರ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಪ್ರಾಸಾದ ಪ್ರವೇಶ ಕಾರ್ಯಕ್ರಮ, ಸಂಜೆ 5.30ಕ್ಕೆ ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ, ಋತ್ವಿಕ್ ವರಣ, ವಿಹತ ಕಳಸ ಸ್ಥಾಪನೆ, ವಿಹಿಹೋಮಗಳು, ಮಹಾಮಂಗಳಾರತಿ, ಪ್ರಸಾದ ವಿತರಣೆ, ಸಂಜೆ 5.30ಕ್ಕೆ ಲಲಿತಾ ಸಹಸ್ರನಾಮ, ಭರತನಾಟ್ಯ– ನಾಗಲಕ್ಷ್ಮಿ ನಟರಾಜನ್ ಅವರಿಂದ, ಸ್ಥಳ:ದೇವಸ್ಥಾನ, ರಾಜರಾಜೇಶ್ವರಿನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಜಯದೇವಪ್ಪ ಜೈನಕೇರಿ, 6.15 ಗೀತಾರಾಧನ, 6.35 ಮತ್ತು ಸಂಜೆ 5.50 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ. ಶ್ರೀರಾಂ ಭಟ್, ಸಿ.ವಿಶ್ವನಾಥ್, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರು, 9.05 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ 'ವಿಶ್ವ ಅನೀಮಿಯಾ ಜಾಗೃತಿ ದಿನಾಚರಣೆ' ಕುರಿತು ತಿಳಿಸಿಕೊಡಲಿದ್ದಾರೆ ಭಾರತೀಯ ಶಿಶುವೈದ್ಯರ ಸಂಘದ ಮೈಸೂರು ಘಟಕದ ಅಧ್ಯಕ್ಷರಾದ ಡಾ. ಬಿ.ಹೆಚ್. ಶ್ರೀನಿವಾಸ್ ಮತ್ತು ಕಾರ್ಯದರ್ಶಿ ಡಾ. ಹೆಚ್.ಎನ್. ಯಶವಂತರಾಜು ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳುತ್ತಾರೆ ಬಿ. ಜಿ. ಕವಿತಾ, 10.30 KRISH -TRISH and Balty boy ನಾವು ಭಾರತೀಯರು "ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ", 10.45 ಮಕ್ಕಳ ಮಂಟಪ – ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪ್ರೌಢಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ನವೀಕರಿಸಬಹುದಾದ ಇಂಧನ ಮೂಲಗಳು ಚರ್ಚೆ – ಭಾಗವಹಿಸುತ್ತಾರೆ ಇಸ್ರೋದ ಹಿರಿಯ ವಿಜ್ಞಾನಿ ಎಸ್ ಹಿರಿಯಣ್ಣ, ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರೊಫೆಸರ್ ಎಲ್ ಜಿ ಮೀರಾ ಮತ್ತು ಗೃಹಿಣಿ ಎಚ್ ಕೆ ವಿಜಯಭಾರತಿ, ಇವರೊಂದಿಗೆ ಚಂದು, 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ– ಎಂ.ಎ.ಶೋಭಾ, 12.45 ಜನಪದ ಸಂಗೀತ–ರಾಜಮ್ಮ ಮತ್ತು ಸಂಗಡಿಗರಿಂದ ತಾಯಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ಅಲ್ಪಸಂಖ್ಯಾತರಿಗಾಗಿರುವ ಪ್ರಧಾನಮಂತ್ರಿಗಳ 15 ಅಂಶಗಳ ಕಾರ್ಯಕ್ರಮ. ಈ ಕುರಿತು ಮಾತನಾಡುತ್ತಾರೆ – ಕಿರಣ್ ಆರಾಧ್ಯ, 1.20 ಭಾವಗೀತೆಗಳು – ಟಿ.ಎನ್. ಅಶ್ವಿನಿ, 2.40 ನಕ್ಷತ್ರ ಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ ಚಲನಚಿತ್ರ ಸಾಹಿತಿ ಹೃದಯಶಿವ ಅವರೊಂದಿಗಿನ ಮಾತುಕತೆಯ ಮರುಪ್ರಸಾರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಸಿ.ಎ. ಶ್ರೀಧರ್–ಕೊಳಲುವಾದನ, 4.45 ಚಿತ್ರಗೀತೆಗಳು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.10 ಕ್ಯಾನ್ಸರ್‌ನ ಮಿಥ್ಯೆಗಳು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 6.51 ಕೃಷಿರಂಗ: ತೋರಣ ಹೂರಣ– ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಬದಲಾಗುತ್ತಿರುವ ಭಾಷೆ ಈ ಕುರಿತು ಮಾತನಾಡುತ್ತಾರೆ, ಹೊಸನಗರದ ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಕೆ.ಶ್ರೀಪತಿ ಅಳಗುಂದ, 8.00 ಹಾದಿಯಲ್ಲಿ ಕಂಡ ಮುಖ– ಬಾನುಲಿ ಸರಣಿ ಟಿ. ನರಸೀಪುರ ತಾಲ್ಲೂಕು ಹೆಮ್ಮಿಗೆ ಗ್ರಾಮದ ಮುಖವೀಣೆ ಕಲಾವಿದ ನಾರಾಯಣಸ್ವಾಮಿ ಅವರೊಂದಿಗೆ ಸಂವಾದ. ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ಚಿನ್ನಯ್ಯ, 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಅಭಿರಾಮ್ ಉನ್ನಿ – ಹಾಡುಗಾರಿಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಫೆಬ್ರವರಿ 9 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 292 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಜೆಪಿಗೆ ದೆಹಲಿ ಗದ್ದುಗೆ

● ಆಮ್ ಆದ್ಮಿ ಪಾರ್ಟಿಯ ಹ್ಯಾಟ್ರಿಕ್ ಕನಸು ಭಗ್ನ ● ಹೀನಾಯವಾಗಿ ಸೋಲುಂಡ ಆಪ್ ಸಾರಥಿ ಕೇಜ್ರಿವಾಲ್ ● ಕಾಂಗ್ರೆಸ್ ಹ್ಯಾಟ್ರಿಕ್ ಶೂನ್ಯ ಸಾಧನೆ! ● BJP:48; APP:22

ನವದೆಹಲಿ, ಫೆ.8– ರಾಷ್ಟ್ರದ ಗಮನ ಸೆಳೆದಿದ್ದ ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟವಾಗಿದೆ. ಹ್ಯಾಟ್ರಿಕ್ ಜಯದ ನಿರೀಕ್ಷೆಯಲ್ಲಿದ್ದ ಆಮ್ ಆದ್ಮಿ ಪಾರ್ಟಿಗೆ ತೀವ್ರ ಮುಖಭಂಗವಾಗಿದೆ. ಬರೋಬ್ಬರಿ 27 ವರ್ಷಗಳ ಬಳಿಕ ಬಿಜೆಪಿ ದೆಹಲಿಯಲ್ಲಿ ಅಧಿಕಾರದ ಗದ್ದುಗೆಯನ್ನು ಹಿಡಿದಿದೆ. ಕಾಂಗ್ರೆಸ್ ಪಕ್ಷ ಹ್ಯಾಟ್ರಿಕ್ ಶೂನ್ಯ ಸಾಧನೆ ಮಾಡಿದೆ.

70 ವಿಧಾನಸಭಾ ಕ್ಷೇತ್ರವನ್ನು ಹೊಂದಿರುವ ದೆಹಲಿ ವಿಧಾನಸಭೆಯಲ್ಲಿ ಬಿಜೆಪಿ 48 ಮತ್ತು ಆಮ್ ಆದ್ಮಿ ಪಾರ್ಟಿಯು 22 ಸ್ಥಾನದಲ್ಲಿ ಗೆಲುವನ್ನು ಸಾಧಿಸಿದೆ.

ಸತತ 3ನೇ ಬಾರಿಗೆ ನವದೆಹಲಿ ಕೇಂದ್ರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕೇಜ್ರಿವಾಲ್ ಒಟ್ಟು 25,999 ಮತಗಳನ್ನು ಪಡೆದಿದ್ದರೆ, ಕಾಂಗ್ರೆಸ್‌ನ ಸಂದೀಪ್ ದೀಕ್ಷಿತ್ 4,568 ಮತಗಳನ್ನು ಪಡೆದು ಹೀನಾಯ ಸೋಲು ಕಂಡಿದ್ದಾರೆ. ಬಿಜೆಪಿ ಅಭ್ಯರ್ಥಿ ಪರ್ವೇಶ್ ಒಟ್ಟು 30,088 ಮತಗಳನ್ನು ಪಡೆದುಕೊಂಡಿದ್ದು 4,089 ಮತಗಳಿಂದ ಗೆದ್ದು ಬೀಗಿದ್ದಾರೆ. ಕೇಜ್ರಿವಾಲ್, ಬಿಜೆಪಿ ಅಭ್ಯರ್ಥಿ ಪರ್ವೇಶ್ ಸಾಹಿಬ್ ಸಿಂಗ್ ವಿರುದ್ಧ 4,089 ಮತಗಳ ಅಂತರದಿಂದ ಸೋಲು ಕಂಡಿದ್ದಾರೆ. ಮತ್ತೊಂದೆಡೆ ಕಲ್ಕಾಜಿ ಕ್ಷೇತ್ರದಿಂದ ಸಿಎಂ ■ 6ನೇ ಪುಟಕ್ಕೆ



ಬಿಜೆಪಿ ದೆಹಲಿಯಲ್ಲಿ ಜಯಭೇರಿ ಬಾರಿಸಿದ ಸಂದರ್ಭದಲ್ಲಿ ಅಭಿಮಾನಿಗಳು ವಿಜಯೋತ್ಸವ ಆಚರಿಸಿದರು.

ಇದು ವಿಕಾಸ, ದೂರದೃಷ್ಟಿ, ವಿಶ್ವಾಸದ ಜಯ



ದೆಹಲಿಯಲ್ಲಿ ಬಿಜೆಪಿ ಜಯಭೇರಿಗೆ ಪ್ರಧಾನಿ ಮೋದಿ ಬಣ್ಣನೆ

ನವದೆಹಲಿ, ಫೆ.8– ದಿಲ್ಲಿಯ ಜಯ ಅಭಿವೃದ್ಧಿ, ದೂರದೃಷ್ಟಿ ಮತ್ತು ನಂಬಿಕೆ (ವಿಕಾಸ್, ವಿಷನ್, ವಿಶ್ವಾಸ)ಯ ಗೆಲುವು ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ಬರೋಬ್ಬರಿ 27 ವರ್ಷಗಳ ಬಳಿಕ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿದ ಹಿನ್ನೆಲೆಯಲ್ಲಿ ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅರವಿಂದ್ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷವನ್ನು ಒಂದು ದಶಕಕ್ಕೂ ಹೆಚ್ಚು ಸಮಯದ ನಂತರ ಪ್ಯಾಕಿಂಗ್ ಮಾಡಿ ಕಳುಹಿಸಿದ ಈ ಚುನಾವಣೆಯು, ದಿಲ್ಲಿಯ ಜನರು ■ 6ನೇ ಪುಟಕ್ಕೆ

ಜನರ ಆಶೋತ್ತರಕ್ಕೆ ತಕ್ಕಂತೆ ಆಡಳಿತ ನಡೆಸಿ; ಬಿಜೆಪಿಗೆ ಶುಭವಾಗಲಿ...!

ನವದೆಹಲಿ, ಫೆ.8–ದೆಹಲಿ ಸೋಲಿನ ಬಳಿಕ ವಿಡಿಯೋ ಸಂದೇಶದ ಮೂಲಕ ದೆಹಲಿ ಜನತೆಯನ್ನುದ್ದೇಶಿಸಿ ಮಾತನಾಡಿರುವ ಆಪ್ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್, ರಾಷ್ಟ್ರ ರಾಜಧಾನಿಯ ಜನತೆ ನೀಡಿರುವ ಚುನಾವಣಾ ತೀರ್ಪನ್ನು ವಿನಮ್ರವಾಗಿ ಸ್ವೀಕರಿಸುವುದಾಗಿ ಹೇಳಿದ್ದಾರೆ. ನಮಗೆ ಸೋಲಿನ ನಿರೀಕ್ಷೆ ಇರಲಿಲ್ಲವಾದರೂ, ಪ್ರಜಾಪ್ರಭುತ್ವದಲ್ಲಿ ಜನತೆ ನೀಡುವ ತೀರ್ಪನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ಸೋಲಿನ ಪರಾಮರ್ಶೆ ನಡೆಸಿ ಮುಂದಿನ ದಿನಗಳಲ್ಲಿ ಪಕ್ಷವನ್ನು ಮತ್ತಷ್ಟು ಸದೃಢವಾಗಿ ಕಟ್ಟುವಲ್ಲಿ ನಾವು ನಿರತರಾಗುತ್ತೇವೆ ಎಂದು ಅರವಿಂದ್ ಕೇಜ್ರಿವಾಲ್ ತಮ್ಮ ವಿಡಿಯೋ ಸಂದೇಶದಲ್ಲಿ ಹೇಳಿದ್ದಾರೆ. ಬಿಜೆಪಿ ಈ ಬಾರಿಯ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ದಾಖಲಿಸಿದೆ. ■ 6ನೇ ಪುಟಕ್ಕೆ



ಕೇಜ್ರಿವಾಲ್

ಇನ್ಮುಂದೆ ರಾಜ್ಯದಲ್ಲಿ ಸರ್ಕಾರಿ ಉದ್ಯೋಗಗಳ ಪರೀಕ್ಷೆಗೆ ನೀಲಿ ಪೆನ್ನು ಕಡ್ಡಾಯ



ಬೆಂಗಳೂರು, ಫೆ.8– ರಾಜ್ಯದಲ್ಲಿ ಸರ್ಕಾರಿ ಉದ್ಯೋಗಕ್ಕಾಗಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಕೆಪಿಎಸ್‌ಸಿ ಮಹತ್ವದ ಆದೇಶವನ್ನು ಹೊರಡಿಸಿದ್ದು, ಈ ಮೂಲಕ ನೀಲಿ ಪೆನ್ನು ಬಳಕೆ ಕಡ್ಡಾಯಗೊಳಿಸಿದೆ. ಇನ್ಮುಂದೆ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕಡ್ಡಾಯವಾಗಿ ನೀಲಿ ಬಣ್ಣದ ಬಾಲ್ ಪಾಯಿಂಟ್ ಪೆನ್ನು ಮಾತ್ರ ಬಳಸಬೇಕು. ಕೆಪಿಎಸ್‌ಸಿ ವ್ಯಾಪ್ತಿಯ ಎಲ್ಲಾ ಪರೀಕ್ಷೆಗಳನ್ನು ನೀಲಿ ಪೆನ್ನಿನಲ್ಲಿಯೇ ಬರೆಯಬೇಕು ಎಂದು ಸೂಚಿಸಿದೆ. ಫೆಬ್ರವರಿ 16ರಿಂದ ನಡೆಯುವ ಎಲ್ಲಾ ಕೆಪಿಎಸ್‌ಸಿ ಪರೀಕ್ಷೆಗಳಲ್ಲಿ ನೀಲಿ ಬಣ್ಣದ ಪೆನ್ನು ಕಡ್ಡಾಯ.

ಆಪ್ ನಾಯಕತ್ವದ ಭ್ರಷ್ಟಾಚಾರವೇ ದೆಹಲಿ ಸೋಲಿಗೆ ಕಾರಣ


ನವದೆಹಲಿ, ಫೆ.8–ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶಗಳ ಬಗ್ಗೆ ಪ್ರತಿಕ್ರಿಯಿಸಿದ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ, ಎಎಪಿಯ ಕಳಪೆ ಪ್ರದರ್ಶನಕ್ಕೆ ಅದರ ನಾಯಕತ್ವ ಮತ್ತು ಭ್ರಷ್ಟಾಚಾರ ಹಗರಣಗಳಲ್ಲಿ ಭಾಗಿಯಾಗಿದ್ದೇ ಕಾರಣ ಎಂದು ಹೇಳಿದರು.

ಚುನಾವಣಾ ಅಭ್ಯರ್ಥಿಗಳು ಬಲವಾದ ವ್ಯಕ್ತಿತ್ವ, ಒಳ್ಳೆಯ ಆಲೋಚನೆಗಳು ಮತ್ತು ಸ್ವಚ್ಛ ಇಮೇಜ್ ಹೊಂದಿರಬೇಕು ಎಂದು ನಾನು ಬಹಳ ಸಮಯದಿಂದ ಹೇಳುತ್ತಿದ್ದೇನೆ. ಆದರೆ ಎಎಪಿಗೆ ಅದು ಇರಲಿಲ್ಲ. ಅವರು ಮದ್ಯ ಮತ್ತು ಹಣದ ಹಗರಣಗಳಲ್ಲಿ ಸಿಲುಕಿಕೊಂಡರು. ಇದು ಅರವಿಂದ್ ಕೇಜ್ರಿವಾಲ್ ಅವರ ಇಮೇಜ್‌ಗೆ ಕಳಂಕ ತಂದಿತು. ಅದಕ್ಕಾಗಿಯೇ ಅವರು ಚುನಾವಣೆಯಲ್ಲಿ ಕಡಿಮೆ ಮತಗಳನ್ನು ಪಡೆದಿದ್ದಾರೆ ಎಂದು ಹಜಾರೆ ಹೇಳಿದರು. ಕೇಜ್ರಿವಾಲ್ ಅವರು ವ್ಯಕ್ತಿತ್ವದ ಬಗ್ಗೆ ಮಾತನಾಡಿದರು. ಆದರೆ ಮದ್ಯ ■ 6ನೇ ಪುಟಕ್ಕೆ



ಅಣ್ಣಾ ಹಜಾರೆ

ಉಡಾನ್ ಯೋಜನೆಯಡಿ ಕುಶಾಲನಗರ, ಹಾಸನ ಸೇರಿ ರಾಜ್ಯದಲ್ಲಿ ಐದು ಹೊಸ ಮಿನಿ ಏರ್‌ಪೋರ್ಟ್ ನಿರ್ಮಾಣ



ಬೆಂಗಳೂರು, ಫೆ.8– ಉಡಾನ್ (ಉಡೇ ದೇಶ್ ಕಾ ಆಮ್ ನಾಗರಿಕ್) ಯೋಜನೆಯಡಿ 5 ಹೊಸ ಏರ್‌ಸ್ಟ್ರಿಪ್ (ಮಿನಿ ಏರ್‌ಪೋರ್ಟ್) ನಿರ್ಮಾಣಕ್ಕೆ ರಾಜ್ಯದಲ್ಲಿ ಸ್ಥಳಗಳನ್ನು ನಾಗರಿಕ ವಿಮಾನಯಾನ ಸಚಿವಾಲಯವು ಗುರುತಿಸಿದೆ.

ಮಾಜಿ ಮುಖ್ಯಮಂತ್ರಿ ಮತ್ತು ಹಾವೇರಿ ಸಂಸದ ಬಸವರಾಜ್ ಬೊಮ್ಮಾಯಿ ಅವರು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ, ನಾಗರಿಕ ವಿಮಾನಯಾನ ರಾಜ್ಯ ಸಚಿವ ಮುರಳೀಧರ್ ಮೊಹಲ್ ಅವರು ಉತ್ತರಿಸಿದರು. ಉಡಾನ್ ಯೋಜನೆಯಡಿ ಏರ್‌ಸ್ಟ್ರಿಪ್ಸ್ ನಿರ್ಮಾಣಕ್ಕೆ ಕರ್ನಾಟಕದ ಬಳ್ಳಾರಿ, ಕೋಲಾರ, ಕುಶಾಲನಗರ, ರಾಯಚೂರು ಹಾಗೂ ಹಾಸನವನ್ನು ತಾತ್ಕಾಲಿಕವಾಗಿ ಗುರುತಿಸಲಾಗಿದೆ ■ 6ನೇ ಪುಟಕ್ಕೆ

ಶತಮಾನದ ಪ್ರತಿಷ್ಠಿತ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರ ಚುನಾವಣೆ ಫಲಿತಾಂಶ ಪ್ರಕಟ

ಬಣ ಪೈಪೋಟಿ ನಡುವೆ 'ಸ್ವತಂತ್ರ'ರ ಸಮಪಾಲು

● 18 ಅಭ್ಯರ್ಥಿಗಳಿದ್ದ ಎರಡೂ ತಂಡಗಳಿಂದ ಗೆದ್ದವರು 6 ● 21 ಸ್ವತಂತ್ರ ಅಭ್ಯರ್ಥಿಗಳಲ್ಲಿ ಗೆದ್ದು ಬೀಗಿದ 6 ಮಂದಿ ● 13 ಸ್ಥಾನಗಳ ಪೈಕಿ ಒಂದು ಅವಿರೋಧ ಆಯ್ಕೆ, ಉಳಿದ ಸ್ಥಾನಗಳಿಗೆ ಕಳೆದ ತಿಂಗಳು ನಡೆದಿದ್ದ ಚುನಾವಣೆ


ಮೈಸೂರು,ಫೆ.8(ಪಿಎಂ)–ಭಾರಿ ಕುತೂಹಲ ಕೆರಳಿಸಿದ್ದ ಮೈಸೂರಿನ ಗಾಂಧಿ ಚೌಕದಲ್ಲಿರುವ ಪ್ರತಿಷ್ಠಿತ 'ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್'ನ 2025–2030ನೇ ಸಾಲಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆ ಶನಿವಾರ ನಡೆದು, ಫಲಿತಾಂಶ ಪ್ರಕಟಗೊಂಡಿತು.

ಒಟ್ಟು 13 ನಿರ್ದೇಶಕರ ಸ್ಥಾನಗಳ ಪೈಕಿ 12 ಸ್ಥಾನಗಳಿಗೆ ನಡೆದಿದ್ದ ಚುನಾವಣೆಯಲ್ಲಿ, ಸ್ಪರ್ಧೆಗಿಳಿದಿದ್ದ ಎರಡೂ ತಂಡಗಳಲ್ಲಿ (ಒಟ್ಟು 18 ಅಭ್ಯರ್ಥಿಗಳು) ಯಾವುದಕ್ಕೂ ಪೂರ್ಣ ಪ್ರಮಾಣದಲ್ಲಿ ಮತದಾರರು ಬೆಂಬಲಿಸಿಲ್ಲ. ಸ್ವತಂತ್ರವಾಗಿ ಸ್ಪರ್ಧಿಸಿದ್ದ 21 ಅಭ್ಯರ್ಥಿಗಳ ಪೈಕಿ 6 ಮಂದಿಗೆ ಮತದಾರರು ಮಣೆ ಹಾಕಿದ್ದು, ಹಲವರು ಪ್ರಥಮ ಪ್ರಯತ್ನದಲ್ಲೇ ಗೆಲುವು ದಾಖಲಿಸಿದ್ದಾರೆ. ಒಂದು ಬಣದ 10 ಮಂದಿಯಲ್ಲಿ ಕೇವಲ ಇಬ್ಬರು ಆಯ್ಕೆಯಾಗಿದ್ದರೆ, ಮತ್ತೊಂದು ಬಣದ 8 ಮಂದಿಯಲ್ಲಿ ನಾಲ್ವರು ಗೆಲುವು ಸಾಧಿಸಿದ್ದಾರೆ.

ಕೆ.ಉಮಾಶಂಕರ್ ತಂಡದಲ್ಲಿದ್ದ ಹೆಚ್.ಹರೀಶ್‌ಕುಮಾರ್ (ಸಾಮಾನ್ಯ ಕ್ಷೇತ್ರ, ಪಡೆದ ಮತಗಳು 4,082), ಕೆ.ಗಿರೀಶ್ (ಪರಿಶಿಷ್ಟ ಜಾತಿ ಕ್ಷೇತ್ರ, 2,455), ಎಂ.ರಾಮಕೃಷ್ಣ (ಪರಿಶಿಷ್ಟ ಪಂಗಡ ಕ್ಷೇತ್ರ, 3,183), ಪಿ.ರಾಜೇಶ್ವರಿ (ಮಹಿಳಾ ಮೀಸಲು ಕ್ಷೇತ್ರ, 3,929) ಗೆಲುವು ಸಾಧಿಸಿದ್ದರೆ, ತಂಡದ ನೇತೃತ್ವ ವಹಿಸಿದ್ದ ಕೆ.ಉಮಾಶಂಕರ್ ಹಾಗೂ ಇವರ ತಂಡದಲ್ಲಿದ್ದ ಉಳಿದ ಮೂವರು ಪರಾಜಿತರಾಗಿದ್ದಾರೆ.

ಎಸ್.ಬಿ.ಎಂ.ಮಂಜು (ಸಾಮಾನ್ಯ ಕ್ಷೇತ್ರ, 5,285) ನೇತೃತ್ವದ ತಂಡದಲ್ಲಿ ಇವರು ಸೇರಿದಂತೆ ಆರ್.ರವಿಕುಮಾರ್ ರಾಜಕೀಯ (ಸಾಮಾನ್ಯ ಕ್ಷೇತ್ರ 4,047) ಗೆಲುವು ದಾಖಲಿಸಿದ್ದು, ಉಳಿದಂತೆ ಇವರ ತಂಡದ 8 ಮಂದಿ ಪರಾಜಿತರಾಗಿದ್ದಾರೆ.

ಇನ್ನು ಸ್ವತಂತ್ರವಾಗಿ ಕಣದಲ್ಲಿದ್ದ ಜೆ.ಯೋಗೇಶ್ (ಸಾಮಾನ್ಯ ಕ್ಷೇತ್ರ, 5,553– ಅತ್ಯಧಿಕ ಮತ ಗಳಿಸಿದವರು), ಎನ್.ಯೋಗಾನಂದ (ಸಾಮಾನ್ಯ ಕ್ಷೇತ್ರ 4,280), ಜಿ.ನಿರಂಜನ್ (ಸಾಮಾನ್ಯ ಕ್ಷೇತ್ರ, 4,164), ಆರ್.ಸೋಮಣ್ಣ ■ 6ನೇ ಪುಟಕ್ಕೆ



ಮತ ಎಣಿಕೆ ಪ್ರಕ್ರಿಯೆ ಬಳಿಕ ಗೆದ್ದ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು.

> ಮತದಾರರು ನನಗೆ ಆಶೀರ್ವಾದ ಮಾಡಿದ್ದು, ಅವರಿಗೆ ಧನ್ಯವಾದ ಹೇಳುತ್ತೇನೆ. ನಮ್ಮ ತಂಡದ ಎಲ್ಲರಿಗೂ ಆಶೀರ್ವಾದ ಮಾಡಿದ್ದರೆ ಹೆಚ್ಚು ಸಂತಸ ಆಗುತ್ತಿತ್ತು. ತಂಡಗಳಿಗೆ ಮತದಾರರು ಆದ್ಯತೆ ನೀಡಿಲ್ಲ. ಹೊಸ ಮುಖಗಳಿಗೆ ಮತದಾರರು ಆಶೀರ್ವಾದ ಮಾಡಿದ್ದಾರೆ. ಹೊಸ ಜನ ಬರಲಿ ಎಂಬ ತೀರ್ಮಾನ ತೆಗೆದುಕೊಂಡಿದ್ದಾರೆ. ನಾನು ಸಹ ಬ್ಯಾಂಕಿನ ಹಿರಿಯ ನಿರ್ದೇಶಕನಾಗಿದ್ದು, ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರದೊಂದಿಗೆ ಬ್ಯಾಂಕಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ.
> –ಎಸ್‌ಬಿಎಂ ಮಂಜು

> ನಮ್ಮ ತಂಡದಲ್ಲಿದ್ದ 8 ಮಂದಿ ಪೈಕಿ ನಾಲ್ವರಿಗೆ ಮತದಾರರು ಆಶೀರ್ವಾದ ಮಾಡಿದ್ದಾರೆ. ನಾವು ಬ್ಯಾಂಕಿನ ಅಭಿವೃದ್ಧಿ ದೃಷ್ಟಿಯಿಂದ ಕೆಲಸ ಮಾಡುತ್ತೇವೆ. ಶಾಖೆಗಳನ್ನು ತೆರೆಯುವುದಕ್ಕೆ ಆದ್ಯತೆ ನೀಡುತ್ತೇವೆ. ಠೇವಣಿದಾರರ ಹಿತ ಕಾಯುವ ನಿಟ್ಟಿನಲ್ಲಿ ಕೆಲಸ ಮಾಡಲಿದ್ದೇವೆ.–ಎಂ.ರಾಮಕೃಷ್ಣ

ನಕ್ಕರೆ ಅದೇ ಸ್ವರ್ಗ

ಟೀಚರ್ : ಚಳಿಗಾಲ ಎಂದರೇನು?
ಗುಂಡ : ನಮಗೆ ನಾವೇ ಶಾಲು ಹಾಕಿಕೊಂಡು ಸನ್ಮಾನ ಮಾಡಿಕೊಳ್ಳೋದೆ ಚಳಿಗಾಲ...!

ಮೈಸೂರು ಮಿತ್ರ

ಭಾನುವಾರ, 9 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕೆಲವು ಜನರು ನಿಮ್ಮ ಜೀವನದಿಂದ ಬಿಟ್ಟು ಹೊರಟಿದ್ದಾರೆ. ಅಂದರೆ ಅದು ನಿಮ್ಮ ಕಥೆ ಅಂತ್ಯವಲ್ಲ. ಅದು ನಿಮ್ಮ ಕಥೆಯಲ್ಲಿ ಅವರ ಭಾಗದ ಅಂತ್ಯವಾಗಿದೆ ಅಂದರ್ಥ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾವಣನ ಮಾತಿಗೆ ಮನಸೋತವ, ರಾಮನ ಮಾತಿಗೆ ಜಾಣನಾಗುವನೇ?

ನಿಮ್ಮ ಪತ್ರಗಳು

■ ಗ್ರಾಹಕರ ಫೋನ್ ಪೇ ಅಥವಾ ಗೂಗಲ್ ಪೇ ನಿರಾಕರಣೆಗೆ ಸ್ಪಷ್ಟ ಉತ್ತರ ಬೇಕು

ಮಾನ್ಯರೆ,

ತಂತ್ರಜ್ಞಾನ ಮುಂದುವರಿದಂತೆ ಹಾದಿ–ಬೀದಿಯಲ್ಲಿ ತರಕಾರಿ, ಹೂವು, ಹಣ್ಣು ಮಾರಾಟ ಮಾಡುವವರು ಸಹ, ನಗದು ಹಣ ಅಥವಾ ಸರಿಯಾಗಿ ಚಿಲ್ಲರೆ ಹಣ ಇಲ್ಲದ ಗ್ರಾಹಕರ ಬಳಿಯಿಂದ ಫೋನ್ ಪೇ ಅಥವಾ ಗೂಗಲ್ ಪೇ ಮಾಡುವಂತೆ ಕೇಳಿಕೊಳ್ಳುತ್ತಾರೆ. ಇದು ಅವರ ವ್ಯಾಪಾರವನ್ನು ಹೆಚ್ಚು ಮಾಡಿಕೊಳ್ಳುವ ಮತ್ತು ಸಮಯವನ್ನು ಉಳಿತಾಯ ಮಾಡಿಕೊಳ್ಳುವ ಮಾರ್ಗ. ಆದರೆ ಮೈಸೂರಿನ, ಕೆ.ಟಿ.ಸ್ಟ್ರೀಟ್, ಅಶೋಕ್ ರಸ್ತೆ, ಶಿವರಾಂಪೇಟೆಯ ಕೆಲವು ಮಾರ್ವಾಡಿ ಅಂಗಡಿಗಳಲ್ಲಿ ಅಥವಾ ಸೇಟು ಅಂಗಡಿಗಳಲ್ಲಿ ನಾವು ತೆಗೆದುಕೊಳ್ಳುವ ಪದಾರ್ಥಗಳಿಗೆ ಅವರ ಫೋನ್ ಪೇ ಅಥವಾ ಗೂಗಲ್ ಪೇಗೆ, ಹಣ ಪೇ ಮಾಡಲು ಹೋದರೆ ಅವರು ನಿರಾಕರಿಸುತ್ತಾರೆ. ನಗದು ಹಣ ಇದ್ದರೆ ಕೊಡಿ. ನಾವು ಫೋನ್ ಪೇ ಅಥವಾ ಗೂಗಲ್ ಪೇ ಮಾಡಿಸಿಕೊಳ್ಳುವುದಿಲ್ಲ ಎನ್ನುತ್ತಾರೆ. ಇದಕ್ಕೆ ಕಾರಣ ಕೇಳಿದರೆ ಅದಕ್ಕೆ ಅವರು ಸ್ಪಷ್ಟ ಉತ್ತರವನ್ನೂ ಕೊಡುವುದಿಲ್ಲ. ಇದರ ಹಿಂದೆ, ಏನೋ ಬಲವಾದ ಕಾರಣವಿರಬಹುದು ಎನಿಸುತ್ತಿದೆ, (ಹಿಡನ್ ಅಜೆಂಡಾ), ಇಡೀ ರಾಷ್ಟ್ರವೇ ನಗದು ವ್ಯವಹಾರಗಳನ್ನು ಕಡಿಮೆ ಮಾಡಲು, ಕಪ್ಪು ಹಣವನ್ನು ನಿಷೇಧಿಸಲು, ಖೋಟಾ ನೋಟುಗಳನ್ನು ತಡೆಯಲು ಮುಂದಾಗಿರುವಾಗ ಕೆಲವು ಮಾರ್ವಾಡಿ ವ್ಯಾಪಾರಿಗಳೇಕೆ, ಗ್ರಾಹಕರ ಫೋನ್ ಪೇ ಅಥವಾ ಗೂಗಲ್ ಪೇಯನ್ನು ನಿರಾಕರಿಸುತ್ತಾರೆ. ಇದರ ಹಿಂದಿರುವ ಉದ್ದೇಶ ಏನು? ಈ ಬಗ್ಗೆ ಗ್ರಾಹಕರ ಹಕ್ಕುಗಳ ಆಯೋಗಕ್ಕೆ ದೂರ ನೀಡಬೇಕಾ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಯಕ್ಷ ಪ್ರಶ್ನೆ!

ಮಾನ್ಯರೆ,

ಖಾಸಗಿ ಬ್ಯಾಂಕೊಂದಕ್ಕೆ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಹಾಗೂ ಇನ್ನಿತರ ಮೂವರು ಆರೋಪಿಗಳಿಗೆ ಮೂರು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಮಾಜಿ ಸಚಿವರಿಗೆ ಶಿಕ್ಷೆ ಪ್ರಕಟಿಸಿದ್ದರೂ ಅವರಿಗೆ ಮೇಲ್ಮನವಿ ಸಲ್ಲಿಸುವುದಕ್ಕೆ ಅವಕಾಶ ನೀಡಲಾಗಿದ್ದು, ಅವರ ಜಾಮೀನು ಅರ್ಜಿಯನ್ನು ಸಹ ಅಂಗೀಕರಿಸಿ, ಜಾಮೀನು ನೀಡಲಾಗಿದೆ. ಸುಮಾರು 22 ವರ್ಷಗಳ ಕಾಲದಿಂದಲೂ ನಡೆಯುತ್ತಿದ್ದ ಈ ಪ್ರಕರಣದ ವಿಚಾರಣೆ ಈಗ ಒಂದು ಘಟ್ಟಕ್ಕೆ ತಲುಪಿದ್ದರೂ ಸಹ, ಆರೋಪಿಗಳು ರಾಜ್ಯ ಹೈಕೋರ್ಟ್ ಮತ್ತು ಸರ್ವೋಚ್ಚ ನ್ಯಾಯಾಲಯದವರೆಗೂ ಹೋಗುವ ಸಾಧ್ಯತೆಗಳಿರುವುದರಿಂದ ಈ ಪ್ರಕರಣ ಮತ್ತಷ್ಟು ವರ್ಷಗಳ ಕಾಲ ನಡೆಯಬಹುದು. ಈ ಬ್ಯಾಂಕ್ ವಂಚನೆ ಪ್ರಕರಣ ನಡೆದು ಈಗಾಗಲೇ 22 ವರ್ಷಗಳಾಗಿವೆ. ಜನ ಮಾನಸದಿಂದಲೂ ಸಹ ಈ ಪ್ರಕರಣ ಮರೆತೇ ಹೋಗಿದೆ ಪ್ರಕರಣದ ಇತ್ಯರ್ಥಕ್ಕೆ ಇಷ್ಟೊಂದು ದೀರ್ಘ ಅವಧಿ ಏಕೆ ಬೇಕಾಯಿತು ಎಂಬುದು ಯಕ್ಷ ಪ್ರಶ್ನೆಯೇ ಸರಿ !

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

■ ಹೆಚ್ಚು ಬಸ್ ಸೌಲಭ್ಯ ಕಲ್ಪಿಸಿ



ಮಾನ್ಯರೆ,

ನಂಜನಗೂಡಿನಿಂದ – ಕಾಡಂಚಿನ ಗ್ರಾಮವಾದ ಬಳ್ಳೂರುಹುಂಡಿ ಗ್ರಾಮಕ್ಕೆ ರಾತ್ರಿ 7 ಗಂಟೆಗೆ ಪ್ರತಿದಿನ ಒಂದು ಬಸ್ ವ್ಯವಸ್ಥೆ ಮಾತ್ರ ಇದೆ. ಇದರಿಂದ ಹೆಚ್ಚು ಕಿರಿ ಕಿರಿ ಉಂಟಾಗಿದ್ದು, ಹೆಚ್ಚಿನ ಬಸ್ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ. ನಂಜನಗೂಡಿನಿಂದ ಹೊರಟು ವಳಗೆರೆ, ಹಗಿನವಾಳು, ಅಂಬಳೆ, ಹಲ್ಲರೆ, ಹುರ ಮಾರ್ಗವಾಗಿ ಬಳ್ಳೂರುಹುಂಡಿ ತಲುಪುವ ಈ ಬಸ್ಸು ಹೆಚ್ಚಿನ ಗ್ರಾಮಗಳಲ್ಲಿ ಸ್ಟಾಪ್ ನೀಡಿ ಕೊನೆಗೆ ಬಳ್ಳೂರುಹುಂಡಿ ಗ್ರಾಮವನ್ನು ತಲುಪುತ್ತದೆ. ಈ ಸಮಯಕ್ಕೆ ನಂಜನಗೂಡಿನಿಂದ ಕೇವಲ ಇದೊಂದೇ ಬಸ್ ಇರುವ ಕಾರಣ ಪ್ರಯಾಣಿಕರಿಗೆ ತೊಂದರೆ ಉಂಟಾಗಿದೆ. ನಂಜನಗೂಡಿನಲ್ಲಿ ಹೆಚ್ಚು ಕಾರ್ಖಾನೆಗಳು ಇರುವ ಕಾರಣ ಪ್ರತಿದಿನ ನೂರಾರು ಜನರು ಈ ಗ್ರಾಮಗಳಿಂದ ಕೆಲಸಕ್ಕೆ ಬರುತ್ತಾರೆ. ಅವರು ಇದೇ ಬಸ್ಸಿನಲ್ಲಿ ಪ್ರಯಾಣಿಸುತ್ತಾರೆ. ಆದರೆ ಬೇರೆ ಬಸ್ ಇಲ್ಲದ ಕಾರಣ ಇದೆ ಬಸ್ಸಿನಲ್ಲಿ ನೂಕು–ನುಗ್ಗಲು ಉಂಟಾಗುತ್ತದೆ. ದಯವಿಟ್ಟು ನಂಜನಗೂಡಿನಿಂದ ಈ ಸಮಯಕ್ಕೆ ಈ ಗ್ರಾಮಗಳಿಗೆ ಬೇರೊಂದು ಬಸ್ ಕಲ್ಪಿಸಬೇಕಾಗಿ ಮನವಿ.


– ಮಹಾಂತೇಶ್ ಬಳ್ಳೂರುಹುಂಡಿ, ನಂಜನಗೂಡು ತಾಲ್ಲೂಕು

■ ಆಧಾರ್ ತಿದ್ದುಪಡಿ: ಶಾಲಾ ಹಂತದಲ್ಲಿ ನಡೆಯಲಿ

ಮಾನ್ಯರೆ,

ಶಾಲಾ ಮಕ್ಕಳ ಹೆಸರು ಆಧಾರ್ ಕಾರ್ಡ್‌ನಲ್ಲಿ ಇರುವುದಕ್ಕೂ ಶಾಲಾ ಎಸ್‌ಟಿಎಸ್‌ನಲ್ಲಿ (ಸ್ಟೂಡೆಂಟ್ ಟ್ರ್ಯಾಕಿಂಗ್ ಸಿಸ್ಟಮ್) ಇರುವುದಕ್ಕೂ ತಾಳೆಯಾಗದೆ, ಅದನ್ನು ಸರಿಪಡಿಸಲು ಮಕ್ಕಳು ತಿದ್ದುಪಡಿಗಾಗಿ ವರ್ಷಗಟ್ಟಲೆ ಅಲೆದಾಡಿದರೂ ಸಾಧ್ಯವಾಗುತ್ತಿಲ್ಲ. ಆ ದಾಖಲೆ ಈ ದಾಖಲೆ ತೆಗೆದುಕೊಂಡು ಬನ್ನಿ ಎಂದು ಹೇಳುವುದು, ತೆಗೆದುಕೊಂಡು ಹೋದರೂ ಆಧಾರ್‌ನಲ್ಲಿ ಅಥವಾ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನದ ತಂತ್ರಾಂಶದಲ್ಲಿ, ಶಾಲಾ ಎಸ್‌ಟಿಎಸ್ ತಂತ್ರಾಂಶದಲ್ಲಿ ಹೆಸರು ಹೊಂದಾಣಿಕೆಯಾಗದೆ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನದಿಂದ ವಂಚಿತರಾಗುವಂತೆ ಆಗಿದೆ. ಆಧಾರ್ ತಿದ್ದುಪಡಿಯನ್ನು ಶಾಲಾ ಹಂತದಲ್ಲಿ ಅಥವಾ ಕ್ಲಸ್ಟರ್ ಹಂತದಲ್ಲಿ ಮಾಡಿದರೆ ಶಿಕ್ಷಕರು ಮತ್ತು ಮಕ್ಕಳ ಗೋಳು ಕಡಿಮೆಯಾಗಬಹುದು. ಈ ದಿಸೆಯಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕಿದೆ.

–ಕೆ ಎಸ್ ಸುರೇಶ್, ಮುಖ್ಯ ಶಿಕ್ಷಕರು, ಸರಗೂರು.



ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ–ರಾಜಕಾರಣಿ
ಮೊ: 9663996390

ಹಳ್ಳಿ ಹಕ್ಕಿ ಹಾಡು



ನಮ್ಮಲ್ಲಿ ಸತ್ತು ಹೋಗಿವೆ ಸ್ಥಳೀಯ ಸರ್ಕಾರಗಳು!

> “ ಕಳೆದ ನಾಲ್ಕು ವರ್ಷಗಳಿಂದ ಸ್ಥಳೀಯ ಸರ್ಕಾರಗಳೇ ಇಲ್ಲವಾಗಿವೆ. ಕೇವಲ ವಿಧಾನಸಭೆ, ಲೋಕಸಭೆ ಚುನಾವಣೆಗಳು ಮಾತ್ರ ನಡೆಯುತ್ತಿದ್ದು, ಅಧಿಕಾರ ಬರೀ ಉಳ್ಳ ಜನರಿಗೆ ಲಭಿಸುತ್ತಿದೆ. ದೇಹ, ಬುದ್ಧಿ, ಆತ್ಮಗಳು ಒಂದಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಮನುಷ್ಯನಾಗಬಹುದು. ಸ್ಥಳೀಯ ಸರ್ಕಾರಗಳು, ವಿಧಾನಸಭೆಗಳು, ಲೋಕಸಭೆಗಳು ಸಂವಿಧಾನ–ಇವೆಲ್ಲ ಸೇರಿ ನಾಗರಿಕ ಸರ್ಕಾರವಾಗುತ್ತದೆ. ಸ್ಥಳೀಯ ಸಂಸ್ಥೆಗಳನ್ನು, ಮುಕ್ಕಾಲುವಾಸಿ ಪ್ರಜೆಗಳನ್ನು ಪರಿಗಣನೆಗೆ ತರದೆ, ತಮ್ಮಿಷ್ಟ ಬಂದ ಹಾಗೆ ಸರ್ಕಾರ ನಡೆಸುವುದು ಸಂವಿಧಾನ ವಿರೋಧಿ, ಬಹುತ್ವ ವಿರೋಧಿ, ಮಹಿಳಾ ವಿರೋಧಿ ಹಾಗೂ ಮೀಸಲಾತಿಯ ಆಶಯದ ವಿರೋಧಿಯಾದ ಅನಾಗರಿಕ ನಡೆ.

ಈ ಭಾನುವಾರ ನನ್ನ ಸಂಜೆಗಣ್ಣಿನ ಹಿನ್ನೋಟವು ಕಳೆದ ನೂರು ವರ್ಷಗಳಲ್ಲಿ ಭಾರತ ಮೈ ತಳೆದ ಬಗೆಯತ್ತ ಹೊರಳಿತು. ಈ ಪ್ರಾಚೀನ ನೆಲ ಬಹು ಸಂಸ್ಕೃತಿಯ, ಬಹು ಭಾಷೆಯ ಭುವನ. ಇದೊಂದು ಸಿರಿಭೂಮಿ. ಇಲ್ಲಿಯ ಮಾನವ ಸಂಪನ್ಮೂಲ, ಪ್ರತಿಭೆ, ತೀಕ್ಷ್ಣಮತಿ, ಕಲೆಗಾರಿಕೆ, ವಿಜ್ಞಾನ, ಶೌರ್ಯ, ವಾಸ್ತುಶಿಲ್ಪ, ಶ್ರಮ, ಸೇವೆ ಮತ್ತು ತ್ಯಾಗಗಳು ವಿಶಿಷ್ಟ–ಅನುಪಮ. ಹಾಗಾಗಿಯೇ ಇಂದಿಗೂ ಈ ವಿಶಾಲ ಪ್ರಪಂಚದ ಚರಿತ್ರೆಯಲ್ಲಿ ಭಾರತ ಚಿರಸ್ಥಾಯಿಯಾಗಿದೆ. ಶಿಲ್ಪಕಲೆ, ವೇದಾಂತ, ಗಣಿತ, ತತ್ವಶಾಸ್ತ್ರ, ಆಧ್ಯಾತ್ಮ, ಸಂಗೀತ, ಸಾಹಿತ್ಯ ಎಲ್ಲವೂ ನಮ್ಮಲ್ಲಿದೆ. ಬೆಲೆ ಬಾಳುವ ರತ್ನಗಳು, ಲೋಹಗಳು ಖನಿಜಗಳ ಆಗರ ನಮ್ಮ ಈ ಭುವಿ. ಇಂತಹ ದೇವಭೂಮಿಗೆ ವಕ್ಕರಿಸಿ, ಈ ಸಿರಿ ಸಂಪತ್ತನ್ನು ದೋಚಿದ ವಿದೇಶಿಯರ ಸಂಖ್ಯೆ ದೊಡ್ಡದಿದೆ. ಅನೇಕ ಆಕ್ರಮಣಗಳು, ದಾಳಿಗಳು, ಲೂಟಿಗಳು ಅವ್ಯಾಹತವಾಗಿ ನಡೆದು ಬಂದಿದ್ದರೂ, ಭಾರತೀಯರ ಪುಟಿಯುವ ಚೈತನ್ಯವನ್ನು ಯಾವುದು ಕುಗ್ಗಿಸಲಾಗಿಲ್ಲ.

ಬ್ರಿಟಿಷರ ಆಳ್ವಿಕೆಯಲ್ಲಿ ನಡೆದ ಲೂಟಿ, ದೌರ್ಜನ್ಯ, ದಬ್ಬಾಳಿಕೆಗಳನ್ನು ಪ್ರಶ್ನಿಸುವ, ವಿರೋಧಿಸುವ ಧೈರ್ಯ ಭಾರತೀಯರಲ್ಲಿ ರಕ್ತಗತವಾಗಿ ಇದ್ದಿದ್ದೂ ನಮ್ಮ ಪರಂಪರೆ ಕೊಟ್ಟ ಜ್ಞಾನ ಹಾಗೂ ಮನೋಬಲದಿಂದಲೆ. ಇಂತಹ ಆತ್ಮಬಲದೆದುರು ಬಲಿಷ್ಠ ಬ್ರಿಟಿಷ್ ಸಾಮ್ರಾಜ್ಯ ಮಣಿದು, ನಮ್ಮನ್ನು ನಮ್ಮಿಷ್ಟಕ್ಕೆ ಬಿಟ್ಟು ಹೊರಟಾಗ ಭಾರತ ಹೇಗಿತ್ತು?

ಕಳೆದ ಶತಮಾನದ ಹೊರಳು ಹಾದಿಯಲ್ಲಿ ಭಾರತ ಅದ್ಭುತ–ಅಪೂರ್ವ ರೀತಿ ಮೈ ಕೊಡವಿ ನಿಂತಿದ್ದು ಹೇಗೆ? ಇದು ಯಾರ ತ್ಯಾಗ–ಯೋಗದಾನದಿಂದ ಆದ ಜಾದೂ? ಭಾರತಕ್ಕೆ ಹೊಸ ದಿಕ್ಕು ತೋರಿಸಿದ ಮಹಾಶಯರ್ಯಾರು? ಇವನ್ನೆಲ್ಲ ಸ್ಮರಿಸದೆ ನಾವು ಮುಂದೆ ಸಾಗಲಾರೆವು. ಶ್ರೀಯುತರಾದ ಮಹಾತ್ಮ ಗಾಂಧೀಜಿ, ಪಂಡಿತ್ ಜವಾಹರ್‌ಲಾಲ್ ನೆಹರು, ಸರ್ದಾರ್ ವಲ್ಲಭಭಾಯ್ ಪಟೇಲ್, ಗೋಪಾಲಕೃಷ್ಣ ಗೋಖಲೆ, ಸುಭಾಷ್ ಚಂದ್ರಬೋಸ್, ಅಂಬೇಡ್ಕರ್, ರಾನಡೆ ಇವರೆಲ್ಲರ ಚಿಂತನೆ, ಸಮರ್ಪಣೆಗಳು; ಶ್ರೀ ಚಂದ್ರಶೇಖರ್ ಆಜಾದ್, ಭಗತ್ ಸಿಂಗ್ ಮುಂತಾದ ಕ್ರಾಂತಿ ಮಾರ್ಗಿಗಳು, ಸೌಮ್ಯವಾದಿಗಳು, ಲಕ್ಷಾಂತರ ವಿದ್ಯಾರ್ಥಿಗಳು, ಉದ್ದಿಮೆದಾರರು, ವಕೀಲರು, ಸಾಹಿತಿಗಳು, ರೈತರು, ನಮ್ಮ ತಾಯಿಯರು ಹೀಗೆ ಸಮಾಜದ ಎಲ್ಲ ಸ್ತರದ ಅನಾಮಿಕರು ತಮ್ಮ ಸುಖ–ಸಂತೋಷ–ಹಣ–ಆಭರಣಗಳನ್ನು ತ್ಯಾಗ ಮಾಡಿ ಹೋರಾಟದ ಗಾಲಿಗೆ ಇಂಧನ ಒದಗಿಸಿ, ನಾವಿಂದು ಉಸಿರಾಡುತ್ತಿರುವ ಸ್ವಾತಂತ್ರ್ಯದ ತಾಜಾ ಗಾಳಿಯನ್ನು ನಮಗೆ ಬಿಟ್ಟು ಹೊರಟರು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಮರ್ಥರೂ, ವಿದ್ಯಾವಂತರೂ ಆದ ನಾಯಕರು ಅವಿರ್ಭವಿಸಿದ್ದರು. ರಾಜಪ್ರಭುತ್ವಗಳ ವೈಫಲ್ಯದಿಂದಲೇ ಭಾರತದ ಒಳಗಡೆ ಇದ್ದು,



ನಮ್ಮನ್ನು ಶತ್ರುಗಳು ದೋಚಿ ದಮನಿಸಿದ ವಿದ್ಯಮಾನ ಇನ್ನು ಕಣ್ಣ ಮುಂದಿತ್ತು. ಆ ತಲೆಮಾರುಗಳು ಹೊಸದೊಂದು ಆಡಳಿತಕ್ಕೆ ತವಕಿಸಿದರು. ಭಾರತದ ತಾರತಮ್ಯದಿಂದ ಕೂಡಿದ, ಸಾಮಾಜಿಕ ಅನಿಷ್ಟದ ಜಾತಿ ವ್ಯವಸ್ಥೆ, ಮೇಲು–ಕೀಳುಗಳು, ಅಸಮಾನತೆ, ಬಡತನ, ನಿರುದ್ಯೋಗ, ಅನಕ್ಷರತೆ, ಮೂಢನಂಬಿಕೆಗಳನ್ನು ಮೀರಿದ ಒಂದು ಉಜ್ವಲ ಪರಿಹಾರ ಕಲ್ಪಿಸಿದರು.

ಸಮಾನತೆ, ಸಮ ಬಾಳು, ಸಮಪಾಲು, ಘನತೆ, ಗೌರವಗಳು ಈ ದೇಶದ ಕಟ್ಟಕಡೆಯ ಮನುಷ್ಯನ ಬಳಿಗೂ ಬರಬೇಕು. ಎಲ್ಲರೂ ಭಾರತೀಯ ನೆಂಬ ಹೆಮ್ಮೆ, ಅಸ್ಮಿತೆ, ಗರ್ವದೊಂದಿಗೆ ಬದುಕಬೇಕೆಂಬ ಹೆಗ್ಗುರಿಯೊಂದಿಗೆ ಪ್ರಜಾಪ್ರಭುತ್ವವನ್ನು ಅಂಗೀಕರಿಸಿದರು. ಸಂವಿಧಾನದ ರಚನೆಯೊಂದಿಗೆ ಮೂಲಭೂತ ಹಕ್ಕುಗಳ ಮೂಲಕ ಭಾರತೀಯ ಸಮಾಜಕ್ಕೆ ಕಾಯಕಲ್ಪ ನೀಡಿದರು. ಆಡಳಿತ, ಶಿಕ್ಷಣ, ಉದ್ಯೋಗಗಳಲ್ಲಿ, ಮೀಸಲಾತಿ ಜಾರಿಗೊಳಿಸಿದರು, ಸಾವಿರಾರು ಜನ–ಜಾತಿಗಳ ಮನೆಯಾಗಿರುವ ಭಾರತದಲ್ಲಿ ಧ್ವನಿಯೇ ಇಲ್ಲದಿದ್ದ, ಜಾತಿಗಳು ಆಡಳಿತದ ಚುಕ್ಕಾಣಿ ಹಿಡಿಯಲು ಅನುವಾಗುವಂತಹ ಮಹತ್ತರ ನಿರ್ಧಾರವಾಗಿ ಮೀಸಲಾತಿಗಳನ್ನು ದೇಶದ ಎಲ್ಲಾ ಸ್ತರದ ಚುನಾವಣೆಗಳಲ್ಲೂ ತಂದರು.

ಅಧಿಕಾರವು ವಿಕೇಂದ್ರೀಕರಣಗೊಂಡಾಗಲೇ ಅದು ಜನರಿಗೆ ದಕ್ಕುವುದು. ಕೇಂದ್ರೀಕೃತ ಆಡಳಿತ ಪಾರದರ್ಶಕವೂ, ಜನಸ್ನೇಹಿಯೂ ಎಂದಿಗೂ ಆಗಲಾರದು. ಅಪರಿಮಿತ ಅಧಿಕಾರವು ಅನಿಯಂತ್ರಿತ ಭ್ರಷ್ಟಾಚಾರಕ್ಕೆ ದಾರಿಯಾಗುವುದನ್ನು, ಅಂತಹ ಅಧಿಕಾರ ಉಳ್ಳವನು ಸರ್ವಾಧಿಕಾರಿಯಾಗುವುದನ್ನು ಪ್ರಪಂಚದ ಇತಿಹಾಸ ಸಾಕ್ಷೀಕರಿಸಿದೆ. ಸ್ವಾತಂತ್ರ್ಯ ಹೋರಾಟವನ್ನು ಜನಾಂದೋಲನವನ್ನಾಗಿಸಿ, ಕಡುಕಷ್ಟದ ದಾರಿಯಲ್ಲಿ ಸಾಗಿ, ಮನೆ–ಮಠ, ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡು ನಾಯಕರಾಗಿ ರೂಪುಗೊಂಡಿದ್ದ ಅಂದಿನ ಮುತ್ಸದ್ದಿಗಳು ಭಾರತಕ್ಕೆ ಬಹುದೊಡ್ಡ ಉಡುಗೊರೆಯನ್ನೇ ಕೊಟ್ಟರು; ಜನರೇ ಆಳಿಕೊಳ್ಳುವ ಪ್ರಜಾಪ್ರಭುತ್ವ, ಜನರ ಹಕ್ಕು ಬಾಧ್ಯತೆಗಳನ್ನು ತಿಳಿಸಿ ಅವರನ್ನು ಸಬಲರನ್ನಾಗಿಸುವ ಸಂವಿಧಾನ, ಮೀಸಲಾತಿ, ಸ್ಥಳೀಯ ಸರ್ಕಾರಗಳನ್ನು ಸ್ಥಾಪಿಸುವ ಪಂಚಾಯತ್‌ರಾಜ್ ವ್ಯವಸ್ಥೆ ಇವೆಲ್ಲ ನಮ್ಮನ್ನು ಹೊಸ ಗಾಳಿಯಲ್ಲಿ ವಿಕಸಿಸಲು ಅವರೆಲ್ಲ ಕಂಡುಕೊಂಡ ಅದ್ಭುತ ಮಾರ್ಗಗಳೇ ಆಗಿದ್ದವು.

ಸ್ಥಳೀಯ ಸರ್ಕಾರಗಳು ಅಸ್ತಿತ್ವದಲ್ಲಿದ್ದರೆ ಮಾತ್ರ ಗ್ರಾಮೀಣ ಜನರಿಗೆ ಸರಿಯಾದ ಪ್ರಾತಿನಿಧ್ಯ, ನೆಮ್ಮದಿ ದೊರಕಲು ಸಾಧ್ಯ. ಸ್ಥಳೀಯ ಸಮಸ್ಯೆಗಳಿಗೆ, ಸ್ಥಳೀಯ ನಾಯಕರೇ ಪರಿಹಾರ ಸೂಚಿಸುವ ಸಾಮರ್ಥ್ಯ, ಪ್ರತಿಭೆ ಹೊಂದಿರುತ್ತಾರೆ. ಕರಾವಳಿಯ ಸಮಸ್ಯೆಗಳನ್ನು ಹಿಮ ಪರ್ವತದಲ್ಲಿ ಕುಳಿತು ಪರಿಹರಿಸಲಾಗದಲ್ಲವೇ? ಸಮುದ್ರವನ್ನೇ ಕಾಣದವನು, ಕರಾವಳಿಯ ಬದುಕನ್ನು ಅರಿತುಕೊಳ್ಳುವುದಕ್ಕೂ, ಪ್ರತಿದಿನ ಸಮುದ್ರದಲ್ಲೇ ಸೆಣಸಾಡಿ, ಬದುಕು ದೂಡುವ ಮೀನುಗಾರನ ಒಳನೋಟಗಳಿಗೂ ಅಜಗಜಾಂತರ ಅಲ್ಲವೇ? ಇದನ್ನು ಮನಗಂಡ ಮಾಜಿ ಪ್ರಧಾನಮಂತ್ರಿ, ಉತ್ಸಾಹಿ ನಾಯಕ **ದಿವಂಗತ ರಾಜೀವ್ ಗಾಂಧಿ** ಅವರು ಸ್ಥಳೀಯ ಸರ್ಕಾರಗಳನ್ನು, ಗ್ರಾಮ ಸರ್ಕಾರಗಳನ್ನು ಸಫಲಗೊಳಿಸಿದರೆ ಭಾರತದ ಉನ್ನತಿ ಆಗುವ ಮಾರ್ಗಗಳನ್ನು ಪರಿಶೋಧಿಸಿದರು. ಅದಕ್ಕಾಗಿಯೇ ಸಂವಿಧಾನದಲ್ಲಿ 73ನೇ ಹಾಗೂ 74ನೇ ಕಲಂಗಳಿಗೆ ತಿದ್ದುಪಡಿ ತಂದರು. **“ಪಂಚಾಯತ್ ರಾಜ್”** –ಎಂಬ ಜಬರ್ದಸ್ತ್ ರೂಪ ಕೊಟ್ಟರು, ಗ್ರಾಮ ಸರ್ಕಾರ, ತಾಲೂಕು ಸರ್ಕಾರ, ಜಿಲ್ಲಾ ಸರ್ಕಾರಗಳು ಅರ್ಥಾತ್ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಅಸ್ತಿತ್ವಕ್ಕೆ ಬಂದವು. ಆ ಮೂಲಕ ಪ್ರಜಾಪ್ರಭುತ್ವಕ್ಕೆ ನಿಜ ಸ್ವರೂಪ ದಕ್ಕಿತು. ದೇಶದ ಕಟ್ಟಕಡೆಯ ಪ್ರಜೆಯೂ ಆಡಳಿತದಲ್ಲಿ ಭಾಗಿಯಾದ, ಮಹಿಳೆಯರಿಗೆ ಆಡಳಿತದಲ್ಲಿ 33% ಪಾಲು ದೊರೆಯಿತು.

ಮನೆಮನೆಯ ತಪಸ್ವಿನಿಯರು, ಗೃಹ ಆಡಳಿತದ ಜೊತೆಗೆ ತಮ್ಮ ಗ್ರಾಮಗಳ ಆಡಳಿತದಲ್ಲಿ ತಮ್ಮ ಸಂವೇದನೆ, ಪ್ರತಿಭೆಗಳನ್ನು ಬೆರೆಸಿ, ಅದನ್ನು ಅರ್ಥಪೂರ್ಣವಾಗಿಸಿದರು. ಇದೊಂದು ಕ್ರಾಂತಿಯೇ ಸರಿ. ಹಾಗೆಯೇ ಮೀಸಲಾತಿಯ ಬಲದಿಂದ ಶ್ರಮಿಕರ, ಎಲ್ಲಾ ಶೋಷಿತರ ಸೂಕ್ತ ಪ್ರತಿಭೆ ಈ ದೇಶದ ಆಡಳಿತಕ್ಕೆ ಹೊಸ ಆಯಾಮ ಕೊಟ್ಟಿತು. ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷರನ್ನು ಮೀಸಲಾತಿ ಕೊಟ್ಟು ಸ್ಥಾಪಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಕೊಟ್ಟಿತು. ಇದು ಸ್ವಾಗತಾರ್ಹವಾದ, ಪ್ರಜಾಪ್ರಭುತ್ವವಾದಿಯಾದ ಹೆಜ್ಜೆಯಾಗಿತ್ತು. ಜನತೆಗೂ ಸ್ಥಳೀಯ ಮಟ್ಟದಲ್ಲಿ ತಮ್ಮ ಅಹವಾಲುಗಳನ್ನು ಕೇಳುವ, ತಮ್ಮ ಜೀವನವನ್ನು ಸರಳಗೊಳಿಸುವ, ತಮ್ಮ ಪರಿಚಿತ ನಾಯಕರೊಂದಿಗೆ ಸಂವಹನ ಸುಲಭವಾಯಿತು. ಕರ್ನಾಟಕ ಆಗ ಮಹಾನ್ ಮುತ್ಸದ್ದಿಗಳ ಆಡಳಿತದಲ್ಲಿತ್ತು. ಶ್ರೀ ವೀರಪ್ಪ ಮೊಯ್ಲಿಯವರು ಸ್ಥಳೀಯ ಸರ್ಕಾರಗಳನ್ನು ನಿರ್ವಹಿಸುವುದರಲ್ಲಿ ಮೊದಲಿಗರಾದರು.

1992ರ ತಿದ್ದುಪಡಿಯನ್ನು ಕರ್ನಾಟಕ ಅಚ್ಚುಕಟ್ಟಾಗಿ ಅನುಷ್ಠಾನಗೊಳಿಸಿತು. ಇದರ ಫಲವಾಗಿಯೇ ಮೊಟ್ಟ ಮೊದಲ ಬಾರಿಗೆ ಮೈಸೂರು ಮಹಾನಗರಪಾಲಿಕೆಯ ಮೇಯರ್ ಆಗಿ ಪೌರ ಕಾರ್ಮಿಕರ ಮಗ ಆಯ್ಕೆಯಾದರು. ಕರ್ನಾಟಕದಲ್ಲಿ ಪುರಸಭೆ. ನಗರಸಭೆ. ಮಹಾನಗರ ಪಾಲಿಕೆಗಳ ಆಡಳಿತ ದೇಶಕ್ಕೆ ಮಾದರಿಯಾಗಿತ್ತು. ಆದರೆ ಈಗ ಏನಾಗಿದೆ? ನಾಗರಿಕ ಹಕ್ಕುಗಳನ್ನು ದಮನ ಮಾಡಿ, ಸ್ಥಳೀಯ ಸಂಸ್ಥೆಗಳನ್ನು ಸಾಯಿಸಲಾಗಿದೆ. ಇದು ಪ್ರಜಾ ತಾಂತ್ರಿಕತೆಯನ್ನು ನಂಬಿದವರಲ್ಲಿ ಆಘಾತ ಉಂಟು ಮಾಡಿದೆ. ನಾಗರಿಕ ಸ್ವಾತಂತ್ರ್ಯಗಳನ್ನು ಅಡಗಿಸುವುದು ರಾಷ್ಟ್ರೀಯ ಅಭಿವೃದ್ಧಿಗೆ ಹಾಗೂ ರಾಜ್ಯದ ಅಭಿವೃದ್ಧಿಗೆ ಹಾನಿ ಮಾಡಿದಂತೆಯೇ. ಮಾತ್ರವಲ್ಲ, ಆಡಳಿತ ವಿಕೇಂದ್ರೀಕರಣ ಹಾಗೂ ಎಲ್ಲಾ ವರ್ಗಗಳ ಜನರ ಪ್ರಾತಿನಿಧ್ಯವನ್ನು ನಿರಾಕರಿಸಿದ ಅಪರಾಧ. ಈಗ ಕರ್ನಾಟಕ ಸರ್ಕಾರವು ಈ ಅಪರಾಧವನ್ನು ಮಾಡಿದೆ. ಕಳೆದ ನಾಲ್ಕು ವರ್ಷಗಳಿಂದ ಸ್ಥಳೀಯ ಸರ್ಕಾರಗಳೇ ಇಲ್ಲವಾಗಿವೆ. ಕೇವಲ ವಿಧಾನಸಭೆ, ಲೋಕಸಭೆ ಚುನಾವಣೆಗಳು ಮಾತ್ರ ನಡೆಯುತ್ತಿದ್ದು, ಅಧಿಕಾರ ಬರೀ ಉಳ್ಳ ಜನರಿಗೆ ಲಭಿಸುತ್ತಿದೆ. ದೇಹ, ಬುದ್ಧಿ, ಆತ್ಮಗಳು ಒಂದಾಗಿ ಕಾರ್ಯ ನಿರ್ವಹಿಸಿದರೆ ಮಾತ್ರ ಮನುಷ್ಯನಾಗಬಹುದು. ಸ್ಥಳೀಯ ಸರ್ಕಾರಗಳು, ವಿಧಾನಸಭೆಗಳು, ಲೋಕಸಭೆಗಳು ಸಂವಿಧಾನ–ಇವೆಲ್ಲ ಸೇರಿ ನಾಗರಿಕ ಸರ್ಕಾರವಾಗುತ್ತದೆ. ಸ್ಥಳೀಯ ಸಂಸ್ಥೆಗಳನ್ನು, ಮುಕ್ಕಾಲುವಾಸಿ ಪ್ರಜೆಗಳನ್ನು ಪರಿಗಣನೆಗೆ ತರದೆ, ತಮ್ಮಿಷ್ಟ ಬಂದ ಹಾಗೆ ಸರ್ಕಾರ ನಡೆಸುವುದು ಸಂವಿಧಾನ ವಿರೋಧಿ, ಬಹುತ್ವ ವಿರೋಧಿ, ಮಹಿಳಾ ವಿರೋಧಿ ಹಾಗೂ ಮೀಸಲಾತಿಯ ಆಶಯದ ವಿರೋಧಿಯಾದ ಅನಾಗರಿಕ ನಡೆ.

ಆದಷ್ಟು ಬೇಗ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಘೋಷಣೆಯಾಗಿ ಎಲ್ಲಾ ಜನ ಜಾತಿಗಳ ಸಂವೇದನೆಗಳ ಆಡಳಿತ ಜಾರಿಯಾಗಲೆಂದೇ ನನ್ನ ಬಯಕೆ.

ಎರಡು ಅಂಗಳದ ನಡುವೆ



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

> “ ಲಗ್ನ ಆದಾಗಿನ ಬಾಗಲಕೋಟೆಗೂ ಈಗ ಮುಳುಗಡೆಯ ಬಿರುಗಾಳಿಗೆ ಸಿಕ್ಕಿ, ಹೊಸ ನಗರದಲ್ಲಿ ತಮ್ಮ ಬೇರುಗಳನ್ನು ಮತ್ತೆ ಹುಟ್ಟುಹಾಕುವ ತಾಕಲಾಟದಲ್ಲಿರುವ ಜನಮನವನ್ನು ಹತ್ತಿರದಿಂದ ನೋಡಿ ನನ್ನ ಮನ ಮಿಡಿದಿದೆ. ಸಂಗೀತದ ಮನೆತನದಿಂದ ಬಂದ ನಾನು ನಾಟಕದ, ಸಾಹಿತ್ಯದ ವಾತಾವರಣದಲ್ಲಿ ನನ್ನತನವನ್ನು ಗುರುತಿಸಿ ಕೊಂಡೆ. ಎಲ್ಲೆಲ್ಲೋ ಹರಿಯುವ ಸಿಹಿ ನೀರಿನ ನದಿ ಸಾಗರವನ್ನೇ ಸೇರಿ ಅದರಲ್ಲೇ ಸಾರ್ಥಕತೆ ಪಡೆವಂತಲ್ಲವೆ ಹೆಣ್ಣಿನ ಬದುಕು!

ನಾನು ಈಗ ಹೇಳೋದನ್ನ ಕೇಳಿ ನಗಬ್ಯಾಡ್ರಿ ಮತ್ತ ... ಏನೋ ತಲೀನಾಗ ಬಂತು?....ಬರ್ದಿದೀನಿ.ಹಂಗಾ ಕೂತ್ಕೊಂಡಿದ್ದಾ ...ಆಗ ಗೆಳತೀ ಫೋನ ಬಂತಾ... ಆ ಮಾತೂ ಈ ಮಾತೂ ಆಡ್ತಾ 'ಅಲ್ಲ ನಮ್ಮವ್ವಾ ನೀ ಪೇಪರ್‍ನಾಗ ಏನೇನೊ ಬರೀತಿ. ಮೈಸೂರಿನ ಹೆಣ್ಮಗಳಾಗಿ ಈ ಉತ್ತರ ಕರ್ನಾಟಕಕ್ಕ ಸೊಸಿಯಾಗಿ ಬಂದಿ. ನಿನಗೂ ಏನೇನಾರ ಅನ್ನಿಸಿರಬೇಕಲ್ಲ! ಅದ್ನ್ಯಾಕ ಬರೀಬಾರ್ದು?' ಎಂದಾಗ ಥಟ್ಟನೆ ನನಗೆ 'ಯುರೇಕಾ...' ಎಂದು ಅನಿಸಿಬಿಡಬೇಕೆ? ಮನದಲ್ಲಿ ಮಥನ ಆರಂಭವಾಗಿಯೇ ಬಿಟ್ಟಿತು ..ಮನಸು ಹಿಂದೆ ಹಿಂದೆ 45 ವರ್ಷಗಳಷ್ಟು ಹಿಂದೆ ಓಡಿತು. ಸಂಗೀತ, ಸಾಹಿತ್ಯದ ಹುಚ್ಚು ತಲೆಗೇರಿಸಿಕೊಂಡಿದ್ದ ಕಾಲ... ಎಲ್ಲವೂ ಕಾವ್ಯಮಯ, ರಸಮಯ. ಬದುಕಿನಲ್ಲಿ ಏನೇನೊ ಸಾಧಿಸಬೇಕೆಂದು ಕನಸು ಕಾಣುತ್ತಿದ್ದೆ. ಆ ಲಿಸ್ಟಿನಲ್ಲಿ ಮದುವೆ ಇನ್ನೂ ಸೇರಿರಲಿಲ್ಲ . ಆದರೆ ವಿಧಿ ಬರಹವ ಬಲ್ಲವರಾರ್? ಅಕ್ಕನಿಗೆಂದು ಬಂದ ಪ್ರಸ್ತಾಪ ನನಗೇ ತೊಡರಿಕೊಳ್ಳುತ್ತದೆಂದು ಯಾರು ಅಂದುಕೊಂಡಿದ್ದರು?

ಕೂಡಲೆ ಅಕ್ಕನೊಡನೆ ಮೈಸೂರಿಗೆ (ಆಗ ನಾವು ಇದ್ದದ್ದು ಬೆಂಗಳೂರಿನಲ್ಲಿ) ಹೊರಟು ಬರಬೇಕೆಂದು ಅಲ್ಲಿಗೆ ಹೋಗಿದ್ದ ಅಮ್ಮನಿಂದ ಬಂತು ಬುಲಾವ್. ನನಗೆ ಸಿಟ್ಟು ಬೇಸರ ನಗು!ಅಮ್ಮ ಅಲ್ಲಿಗೆ ಹೋಗಿದ್ದುದು ಅಕ್ಕನಿಗೆ ವರ ನೋಡಲು. ಅವಳು ಹೋಗುವುದು ಸರಿ. ನಾನ್ಯಾಕೆ? ಶಿವ ಪೂಜೇಲಿ ಕರಡಿ ಬಿಟ್ಟಂತೆ! ನನ್ನ ಪ್ರತಿರೋಧ, ಪ್ರತಿಭಟನೆ ಎಲ್ಲವೂ ಅರಣ್ಯ ರೋದನವೇ ಆಯಿತು.ಸಿಟ್ಟು ಪ್ರದರ್ಶಿಸುತ್ತಲೇ ಮೈಸೂರಿಗೆ ನಡೆದೆ ಅಕ್ಕನೊಡನೆ. ಅಲ್ಲಿ ಅಮ್ಮನೆದುರು ಕೂಗಾಡಿದೆ, ಎಗರಾಡಿದೆ–ತಕತಕ ಮಾಡಿದೆ. ಪ್ರಯೋಜನ? ನನ್ನ ಮಾತಿಗೆ ಕವಡೆ ಕಿಮ್ಮತ್ತೂ ಇಲ್ಲ ಎಂಬುದರ ಮಹಾ ಅರಿವು! ಒಲೆಯೊಳಗಣ ಕಿಚ್ಚು ಮನೆಯ ಸುಡುವುದಲ್ಲದೆ ನೆರೆಮನೆಯ ಸುಡದು ನೋಡಾ!! ವರ ಮಹಾಶಯ ಅಕ್ಕನಿಗಿಂತಾ ವಯಸ್ಸಿನಲ್ಲಿ ಸಣ್ಣವನೆಂದು ಗೊತ್ತಾದ ಕೂಡಲೇ ಅಕ್ಕ 'ಒಳ್ಳೆಯ ಸಂಬಂಧ ಬಂದಾಗ ಬಿಡುವುದು ಬೇಡ. ತಂಗಿಗೆ ನಿಶ್ಚಯ ಮಾಡಿ. ಮದುವೆ ಆಮೇಲೆ ಮಾಡಿದರಾಯ್ತು' ಎಂದಳು. ಗಂಡಿನ ಮನೆಯವರೂ 'ಸಣ್ಣಾಕೀನ ಇರಲಿ' ಎಂದರು. ಅಮ್ಮನಂತೂ 'ಕೋಳೀನ ಕೇಳಿ ಮಸಾಲೆ ಅರೀತಾರಾ?' ಎಂದರು. ಇದರಿಂದ ಬಿಡುಗಡೆ ಇಲ್ಲ ಎಂಬುದು ಖಾತ್ರಿಯಾಯಿತು. ಯಾವುದೇ ಕಾರಣಕ್ಕೂ ಅಕ್ಕನ ಲಗ್ನವಾಗದೇ ನನ್ನದು ಆಗುವಂತಿಲ್ಲ ಎಂಬುದನ್ನು ಸರ್ವ ರೀತಿಯಿಂದಲೂ ಸ್ಪಷ್ಟಪಡಿಸಿ ಸಮಾಧಾನ ಪಟ್ಟುಕೊಂಡೆ.

ಈಗ ಸ್ವಲ್ಪ ಹುಡುಗನ ಬಗ್ಗೆ ಕುತೂಹಲ ಹುಟ್ಟಿತು. ಎಲ್ಲಿಯವ ಏನು ಮಾಡುತ್ತಾನೆ ಸ್ವಭಾವ ಎಂಥದು ಇತ್ಯಾದಿ.. ಬಾಗಲಕೋಟೆ! ಆ ಊರಿನ ಹೆಸರೇ ಕೇಳಿರಲಿಲ್ಲ! ಜೋಳ ! ಹೇಗಿರತ್ತೆ ?

ಅದರ ರೊಟ್ಟಿ ಮಾಡಲು ಎಣ್ಣೆಯೇ ಬೇಕಿಲ್ಲವಂತೆ !! ನಾನಂತೂ ಅನಿವಾರ್ಯ ಆದಾಗ ಮಾತ್ರ ಅಡುಗೆ ಮನೆಯೆಡೆ ನೋಡುತ್ತಿದ್ದವಳು. ಹಾಗಿದ್ದಾಗ ಭಕ್ಕರಿ ಮಾಡುವುದರ ಬಗ್ಗೆ ತಲೆ ಕೆಡಿಸಿಕೊಳ್ಳಲೆ? ನನಗೆ ಫಜೀತಿ ಆದದ್ದು ಭಾಷೆಯ ವಿಚಾರದಲ್ಲಿ. ನನ್ನದು ಮೈಸೂರು–ಬೆಂಗಳೂರಿನ ಕನ್ನಡ. ಅವರದು ಉತ್ತರ ಕರ್ನಾಟಕದ ಕನ್ನಡ. ಮದುವೆಯಲ್ಲಿ ಹೆಣ್ಣನ್ನು ಮನೆ ತುಂಬಿಸಿಕೊಳ್ಳುವಾಗ ಅಡ್ಡಗಟ್ಟಿ ಗಂಡನ ಹೆಸರು ಹೇಳಿಸುವುದು (ಅವರ ಮನೆಯ) ಒಂದು ಸಂಪ್ರದಾಯ. ನಾನು ಮೆಲ್ಲನೆ ಇವರ ಹೆಸರು ಹೇಳಿದೆ. ಅವರ ಕಡೆಯವರ್‍ಯಾರೊ 'ಜಗ್ಗಿ ಒದರು' ಎಂದರು. ಏನನ್ನು ಜಗ್ಗಬೇಕು, ಯಾವುದನ್ನು ಒದರಬೇಕು ಎಂಬುದು ತಿಳಿಯದೆ ಸುತ್ತಲೂ ಕಣ್ಣಾಡಿಸಿದ್ದೆ!

ನಮ್ಮ ಅತ್ತೆಯವರದು ಅಪ್ಪಟ ಉತ್ತರ ಕರ್ನಾಟಕದ ಸೊಗಡು ತುಂಬಿದ ಭಾಷಾ ಶೈಲಿ. ನನಗೋ ಅವರು ಆಡುತ್ತಿದ್ದ ಮಾತು ಎಷ್ಟೋ ಸಲ ತಿಳಿಯುತ್ತಲೇ ಇರಲಿಲ್ಲ. ಕಾರಣ ಅವರ ಟಿಪಿಕಲ್ ಬಾಗಲಕೋಟೆಯ ಶೈಲಿ. ಅದರ ಗಂಧವೇ ಇಲ್ಲದ ನಾನು ಕಣ್ ಕಣ್ ಬಿಡುತ್ತಿದ್ದಾಗ ಯಜಮಾನರು ಸಹಾಯಕ್ಕೆ ಧಾವಿಸುತ್ತಿದ್ದರು. 'ಆಕೀಗ ನಿನ್ ಭಾಷಾ ತಿಳಿಯಂಗಿಲ್ಲ' ಎಂದರೆ, ಅತ್ತೆಯವರು ಯಾಕ? ನಾನೇನ್ ಅಂಗ್ರೇಜಿನಾಗ ಮಾತಾಡ್ತೀನೇನು? ಅನ್ನುತ್ತಿದ್ದರು. ಅವರು ನಿಧಾನವಾಗಿ ಮಾತಾಡಿದರೆ ಅರ್ಥವಾಗುತ್ತಿತ್ತು. ಇಲ್ಲವಾದಲ್ಲಿ ಆ ಭಗವಂತನೇ ಕಾಪಾಡಬೇಕಿತ್ತು. ಅವರ ಹಾಸ್ಯಪ್ರಜ್ಞೆ ನೆನಪಾಗುತ್ತದೆ–ನಮ್ಮ ಮೊದಲ ಮಗು ಇನ್ನೂ ಚಿಕ್ಕದಿದ್ದಾಗ ಅದರ ಆರೋಗ್ಯ ಸ್ವಲ್ಪ ಹೆಚ್ಚು ಕಡಿಮೆಯಾದರೂ ನಾವು ಹೆದರಿ ಡಾಕ್ಟರರ ಬಳಿ ಓಡುತ್ತಿದ್ದೆವು. ಇದು ಅವರಿಗೆ ಸರಿ ಬರುತ್ತಿರಲಿಲ್ಲ. ಮನೆಯಲ್ಲೇ ಮದ್ದು ಮಾಡಬಹುದೆಂಬುದು ಅವರ ನಿಲುವು. ಹೀಗಾಗಿ ಮನೆಯಲ್ಲಿ ಔಷಧದ ಚಿಕ್ಕ ಚಿಕ್ಕ ಬಾಟಲಿಗಳನ್ನು ನೋಡಿದರೆ ಅವರಿಗೆ ಸಿಟ್ಟು ಬರುತ್ತಿತ್ತು. 'ಈಗ ಎಲ್ಲದಕ್ಕೂ ಇಂಫೆಸನ್ (ಇನ್‌ಫೆಕ್ಷನ್) ಅಂತಾರ ಡಾಕ್ಟರ. ನಾಳಿ ಕೂಸಿಗ ಮುದ್ದು ಕೊಟ್ಟರೂ ಇಂಫೆಸನ್ ಅಂದ್ರ ಏನ್ ನಾವೆಲ್ರೂ ಹೋಗಿ ಆ ಡಾಕ್ಟರಿಗೇ ಮುದ್ದು ಕೊಡೋಣೇನು'? ಎಂದಾಗ ಮನೆಯಲ್ಲಿ ನಗುವಿನ ಮಹಾಪೂರ!

(ಮದುವೆಯಾದ ಹೊಸದರಲ್ಲಿ) ನಮ್ಮವರು ಬಹಳಷ್ಟು ಪದಗಳಿಗೆ ಇಕಾರ ಹಾಕುವುದನ್ನು ನೋಡಿ ನನಗೆ ಮೋಜು! ಆನಿ, ಒಂಟಿ, ಕುದುರಿ, ಮನಿ, ತಲಿ ಇತ್ಯಾದಿ ಪದಗಳನ್ನು ಆಲಿಸಿ, ಇವರನ್ನು 'ನೀವು ಅದರಂತೆಯೇ ಅನ್ನಿ ಸಾರಿ ಉಪ್ಪಿ ತುಪ್ಪಿ (ಅನ್ನ ಸಾರು ಉಪ್ಪು ತುಪ್ಪ) ಎಂದೇಕೆ ಹೇಳುವುದಿಲ್ಲ'? ಎಂದು ಕೇಳಿದ್ದೆ.

'ಇಲ್ಲಿ ತಿಂಡಿ ಬಿಟ್ಟದ... ಸ್ವಲ್ಪ ಕೈಯಾಡಿಸು' ಅಂದ ತಕ್ಷಣ ನನ್ನ ಉತ್ತರ ರೆಡಿ! ಯಾಕೆ ತಿಂಡಿ ಮಾತ್ರ ಬಿಟ್ಟಿದೆ? ಊಟ ಬಿಟ್ಟಿಲ್ಲೇನು'? ಹೀಗೆ ನಗುನಗುತ್ತಲೇ ಅವರ ಭಾಷೆಯ ಜೊತೆಗೆ ಅವರ ಅಡುಗೆ ತಿಂಡಿ (ತಿನಸು)ಗಳನ್ನೂ ಕಲಿತೆ.

ಉತ್ತರ ಕರ್ನಾಟಕದ ಅನೇಕ ಆಚಾರ, ಸಂಪ್ರದಾಯಗಳ ಅರಿವೇ ಇರದಿದ್ದ ನನಗೆ ನಮ್ಮ ಅತ್ತೆಯವರು ತಾಳ್ಮೆಯಿಂದ ವಿವರಿಸುತ್ತಿದ್ದರು. ಸೀಗೀ ಹುಣ್ಣಿಮಿ, ಮಣ್ಣೆತ್ತಿನ ಅಮಾಶಿ, ಗಡಗಿ ಗೌರಿ, ಚೈತ್ರ ಗೌರಿ, ಅಷ್ಟಮಿ ಗೌರಿ, ಭಾರತ ಹುಣ್ಣಿಮಿ, ಶುಕ್ರವಾರದ, ಶನಿವಾರದ ಹಾಡು, ದೀಪಾವಳಿಯ 'ಫರಾಳ' ಒಂದೇ ಎರಡೇ. ಹೊಸ ಮನೆಯಲ್ಲಿ ಹೊಸ ಹೊಸ ಸಂಪ್ರದಾಯಗಳನ್ನು ಕಲಿಯುವ ಹುಮ್ಮಸ್ಸು ನನ್ನದು, ಕಲಿಸುವ ಹೌಸು ಅವರದು. ಅವರು ನನ್ನಂತೆ ಹರಟೆ ಪ್ರಿಯರು. ಹೀಗಾಗಿ ನಮ್ಮಿಬ್ಬರಲ್ಲಿ ಹೊಂದಾಣಿಕೆ ಸುಲಭವಾಯ್ತು. ಹೊಸದಾಗಿ ಬಂದ ಸೊಸೆಯನ್ನು ಪ್ರೀತಿಯಿಂದ, ಆತ್ಮೀಯತೆಯಿಂದ ನೋಡಿಕೊಂಡದ್ದು ನಮ್ಮ ಅತ್ತೆಯವರಷ್ಟೇ ಅಲ್ಲ, ಪತಿಯ ಅಕ್ಕಂದಿರು ಸಹ. ಈ ಎಲ್ಲರ ಪ್ರೀತಿ ವಿಶ್ವಾಸದಿಂದ ನನಗೆ, ನಾನು ಹೊರಗಿನವಳು ಎಂಬ ಭಾವನೆ ಬರಲೇ ಇಲ್ಲ.

ಬಾಗಲಕೋಟೆಯ ಘಟಪ್ರಭಾ ನದಿ, ಪ್ರಸನ್ನ ವೆಂಕಟದಾಸರ ಪರಂಪರೆ, ಅಲ್ಲಿಯ ಜನರ ಒರಟು ಭಾಷೆಯ ಹಿಂದಿದ್ದ ಸರಳ, ನೇರ, ಕಪಟವಿಲ್ಲದ ಮನಸ್ಸು, ಸಮೃದ್ಧ ಸಂಸ್ಕೃತಿ, ಆ ಚಿಕ್ಕ ಊರಿನ ದೊಡ್ಡ ಸ್ವಾಭಿಮಾನ (ಗಂಡು ಮೆಟ್ಟಿದ ನಾಡು!), ಎಲ್ಲವೂ ನನಗೆ ಆಸಕ್ತಿಯ ವಿಷಯಗಳೇ ಆದವು. ಲಗ್ನ ಆದಾಗಿನ ಬಾಗಲಕೋಟೆಗೂ ಈಗ ಮುಳುಗಡೆಯ ಬಿರುಗಾಳಿಗೆ ಸಿಕ್ಕಿ, ಹೊಸ ನಗರದಲ್ಲಿ ತಮ್ಮ ಬೇರುಗಳನ್ನು ಮತ್ತೆ ಹುಟ್ಟುಹಾಕುವ ತಾಕಲಾಟದಲ್ಲಿರುವ ಜನಮನವನ್ನು ಹತ್ತಿರದಿಂದ ನೋಡಿ ನನ್ನ ಮನ ಮಿಡಿದಿದೆ. ಸಂಗೀತದ ಮನೆತನದಿಂದ ಬಂದ ನಾನು ನಾಟಕದ, ಸಾಹಿತ್ಯದ ವಾತಾವರಣದಲ್ಲಿ ನನ್ನತನವನ್ನು ಗುರುತಿಸಿಕೊಂಡೆ. ಎಲ್ಲೆಲ್ಲೋ ಹರಿಯುವ ಸಿಹಿ ನೀರಿನ ನದಿ ಸಾಗರವನ್ನೇ ಸೇರಿ ಅದರಲ್ಲೇ ಸಾರ್ಥಕತೆ ಪಡೆವಂತಲ್ಲವೆ ಹೆಣ್ಣಿನ ಬದುಕು!

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಕೊಳಕು ಮಂಡಲ ಹಾವಿನೊಂದಿಗೆ ಸೆಣಸಾಡಿ ಮಾಲೀಕನ ರಕ್ಷಿಸಿದ ಮುದ್ದಿನ ಸಾಕು ನಾಯಿ!





ಮೈಸೂರು,ಫೆ.8(ಪಿಎಂ)– ಶ್ವಾನವೊಂದು ತನ್ನ ಪ್ರಾಣವನ್ನೇ ಪಣಕ್ಕಿಟ್ಟು ಅತ್ಯಂತ ವಿಷಕಾರಿಯಾದ ಕೊಳಕು ಮಂಡಲ ಹಾವಿನೊಂದಿಗೆ ಸೆಣಸಾಡಿ ತನ್ನ ಮಾಲೀಕರನ್ನು ಪಾರು ಮಾಡಿದೆ. ಈ ವೇಳೆ ಹಾವಿನ ಕಡಿತದಿಂದ ತೀವ್ರವಾಗಿ ಗಾಯಗೊಂಡಿದ್ದ ಶ್ವಾನ, ತ್ವರಿತ ಚಿಕಿತ್ಸೆ–ಆರೈಕೆಯಿಂದ ಸಾವನ್ನು ಗೆದ್ದಿದೆ.

ನಗರದ ಉದ್ಯಮಿ ವ್ಯಾಮ್ಸಿ ಮೆರ್ಲಾ ಅವರಿಗೆ ಸೇರಿದ ಗುಸ್ಸಿ ಎಂಬ ಸೈಬೀರಿಯನ್ ಹಸ್ಕಿ ತಳಿಯ ಶ್ವಾನ, ಅಪಾರ್ಟ್‌ಮೆಂಟ್‌ನ ಹುಲ್ಲುಹಾಸಿನಲ್ಲಿ ಆಟವಾಡುವಾಗ, ರಸೆಲ್ಸ್ ವೈಪರ್ (ಕೊಳಕು ಮಂಡಲ) ಹಾವನ್ನು ಕಂಡಿದೆ. ಈ ವೇಳೆ ಗುಸ್ಸಿ, ತನ್ನ ಮಾಲೀಕನನ್ನು ಹಾವಿನಿಂದ ರಕ್ಷಿಸಲು, ಕೊಳಕು ಮಂಡಲ ಹಾವಿನ ಮೇಲೆರಗಿ ಸೆಣಸಾಡಿದೆ.

ಈ ವೇಳೆ ರೊಚ್ಚಿಗೆದ್ದ ಕೊಳಕು ಮಂಡಲ ಹಾವು, ಗುಸ್ಸಿಯ ಮುಖ ಮತ್ತು ಕುತ್ತಿಗೆಯನ್ನು ಹಲವು ಬಾರಿ ಕಚ್ಚಿದೆ. ಕೊಳಕು ಮಂಡಲ ಹಾವಿನ ಕಡಿತದ ವಿಷವು ಅತ್ಯಂತ ಅಪಾಯಕಾರಿ. ಇದು ದೇಹದ ಜೀವಕೋಶಗಳಿಗೆ ತೀವ್ರ ಹಾನಿ ಉಂಟು ಮಾಡಲಿದೆ. ಹಾಗಾಗಿ ಕೂಡಲೇ ವೈದ್ಯಕೀಯ ಚಿಕಿತ್ಸೆಯೊಂದಿಗೆ ಹಾವಿನ ವಿಷ ನಿರೋಧಕ ಚುಚ್ಚುಮದ್ದು ನೀಡಿ, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರೆಸುವುದು ಅತ್ಯಂತ ಅಗತ್ಯ.

ಹಾಗಾಗಿ ಕೊಳಕು ಮಂಡಲ ಹಾವು ಕಚ್ಚಿದ ಕೂಡಲೇ ಮಾಲೀಕ ವ್ಯಾಮ್ಸಿ, ಗುಸ್ಸಿಯನ್ನು ವಿಜಯನಗರದ 4ನೇ ಹಂತದಲ್ಲಿರುವ ಶ್ರೀ ಪೆಟ್ ಕ್ಲಿನಿಕ್‌ಗೆ ಕರೆದೊಯ್ದಿದ್ದಾರೆ. ಅಲ್ಲಿ ಡಾ.ದೀಪಕ್ ಮತ್ತು ಅವರ ತಂಡ, ಹಾವಿನ ವಿಷ ನಿರೋಧಕ ಚುಚ್ಚುಮದ್ದು ನೀಡಿ, ಅಗತ್ಯ ತುರ್ತು ಚಿಕಿತ್ಸೆಯನ್ನು ನೀಡಿದೆ. ಅಲ್ಲದೆ, ಗುಸ್ಸಿಯ ರಕ್ತ ಪರೀಕ್ಷೆಯಲ್ಲಿ ಕೊಳಕು ಮಂಡಲ ಹಾವಿನ ವಿಷವು (ಹೆಮೋಟಾಕ್ಸಿಕ್ ವಿಷ) ಅದರ ಯಕೃತ್ತು ಮತ್ತು ಮೂತ್ರಪಿಂಡವನ್ನು ತೀವ್ರವಾಗಿ ಹಾನಿಗೊಳಿಸಿರುವುದು ಕಂಡು ಬಂದಿದೆ.

ರಕ್ತದಲ್ಲಿ ಸೇರಿರುವ ಹಾವಿನ ವಿಷವನ್ನು ದುರ್ಬಲಗೊಳಿಸುವ ಸೌಲಭ್ಯ ಮೈಸೂರಿನಲ್ಲಿ ಲಭ್ಯವಿಲ್ಲದ ಕಾರಣ ಗುಸ್ಸಿಯನ್ನು ತಕ್ಷಣವೇ ಬೆಂಗಳೂರಿನ ಮಾರುತಿ ಪೆಟ್ ಕೇರ್‌ಗೆ ಕಳುಹಿಸಿಕೊಡಲಾಗಿದೆ. ಇಲ್ಲಿ ತಿಂಗಳ ಕಾಲ ನಿಯಮಿತ ಹಿಮೋಡಯಾಲಿಸಿಸ್ ಚಿಕಿತ್ಸೆಯೊಂದಿಗೆ ತೀವ್ರ ನಿಗಾ ಘಟಕದಲ್ಲಿ ಆರೈಕೆ ಮಾಡಲಾಗಿದೆ.

ಕೊನೆಗೂ ಗುಸ್ಸಿ ಮಾರಕ ಕೊಳಕು ಮಂಡಲ ಹಾವಿನ ವಿಷದ ವಿರುದ್ಧ ಸೆಣಸಾಡಿ ಸಾವಿನಿಂದ ಪಾರಾಗಿದೆ. ಗುಸ್ಸಿ ಈಗ ಸಂತೋಷದಿಂದ ಆಟವಾಡುತ್ತಿದೆ. ಭಾರತದಲ್ಲಿ ಕಂಡು ಬರುವ ನಾಲ್ಕು ತೀವ್ರ ವಿಷಕಾರಿ ಹಾವುಗಳಲ್ಲಿ ಕೊಳಕು ಮಂಡಲ ಕೂಡ ಒಂದು. ಅಲ್ಲದೆ, ದೇಶದಲ್ಲಿನ ಹೆಚ್ಚಿನ ಸಾವಿಗೂ ಇದೇ ಹಾವಿನ ಕಡಿತ ಕಾರಣವಾಗುತ್ತಿದೆ.

ರಾಜ್ಯದಲ್ಲಿ ವಲಯವಾರು ಕೈಗಾರಿಕಾ ಪಾರ್ಕ್‌ಗಳ ಅಭಿವೃದ್ಧಿ

● ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ ● ಫೆ.11ರಿಂದ 14ರವರೆಗೆ ಬೆಂಗಳೂರಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ; 10 ಲಕ್ಷ ಕೋಟಿ ರೂ. ಬಂಡವಾಳ ಹರಿದು ಬರುವ ಖಾತರಿ; ವಿಶ್ವಾಸ

ಬೆಂಗಳೂರು, ಫೆ.8(ಕೆಎಂಶಿ)–ರಾಜ್ಯದಲ್ಲಿ ಸಮಗ್ರ ಕೈಗಾರಿಕಾ ಬೆಳವಣಿಗೆ ಸಾಧಿಸಲು ವಲಯವಾರು ಕೈಗಾರಿಕಾ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಫೆಬ್ರವರಿ 11ರಿಂದ 14ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಸಂಬಂಧಿಸಿದಂತೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವರು, ಸಮಾವೇಶದ ಮೂಲಕ 10 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಹೂಡಿಕೆ ಹರಿದು ಬರುವುದು ಖಾತ್ರಿ ಎಂದರು. ಉದ್ಘಾಟನೆ ದಿನದಂದು ಹೊಸ ಕೈಗಾರಿಕಾ ನೀತಿ ಹಾಗೂ ಏಕಗವಾಕ್ಷಿ ಪೋರ್ಟಲ್ ಅನಾವರಣ ಮಾಡುವ ಮೂಲಕ ಕೈಗಾರಿಕೋದ್ಯಮಿಗಳಿಗೆ ಇರುವ ತೊಡಕುಗಳನ್ನು ನಿವಾರಿಸುವುದಾಗಿ ತಿಳಿಸಿದರು.

ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಆಧುನಿಕ ಫಾರ್ಮಾ ಪಾರ್ಕ್, ವಿಜಯಪುರದಲ್ಲಿ ಸೋಲಾರ್ ಸೆಲ್ ಪಾರ್ಕ್ ಮತ್ತು ಕೃಷಿ ಉತ್ಪನ್ನ ಆಧರಿತ ಆಗ್ರೋ ಪಾರ್ಕ್, ಚಿತ್ರದುರ್ಗದಲ್ಲಿ ಡ್ರೋನ್ ಪಾರ್ಕ್, ಜಂಗಮನಕೋಟೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಹೆಸರಿನಲ್ಲಿ ಡೀಪ್–ಟೆಕ್ ಪಾರ್ಕ್, ಡಾಬಸ್‌ಪೇಟೆ ಸಮೀಪ ಹನುಮಂತಪುರದಲ್ಲಿ ಮೆಗಾ ಲಾಜಿಸ್ಟಿಕ್ಸ್ ಪಾರ್ಕ್, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಧಾರವಾಡದಲ್ಲಿ ಇ.ವಿ. ಕ್ಲಸ್ಟರ್ಸ್ ಸ್ಥಾಪಿಸಲಾಗುವುದು. ಹುಬ್ಬಳ್ಳಿ ವಿಮಾನ ನಿಲ್ದಾಣ ಬಳಿ 200 ಎಕರೆ ವಿಸ್ತಾರದಲ್ಲಿ 400ಕ್ಕೂ ಹೆಚ್ಚು ನವೋದ್ಯಮಗಳಿಗೆ ಸೌಲಭ್ಯ ಕಲ್ಪಿಸುವ ಸ್ಟಾರ್ಟಪ್ ಪಾರ್ಕ್, ವಿಜಯಪುರದ ತಿಡಗುಂದಿಯಲ್ಲಿ 1,200 ಎಕರೆ ವಿಸ್ತೀರ್ಣದಲ್ಲಿ ಸೋಲಾರ್ ಸೆಲ್ ಮತ್ತು ಆಗ್ರೋ ಟೆಕ್ ಪಾರ್ಕ್ ಅಭಿವೃದ್ಧಿಪಡಿಸಲಾಗುವುದು ಎಂದರು.

ಭವಿಷ್ಯದ ತಯಾರಿಕಾ ವಲಯ, ಸಾರಿಗೆ ಮತ್ತು ಪರಿಸರಸ್ನೇಹಿ ಇಂಧನ ಉತ್ಪಾದನೆ ವಲಯಗಳಿಗೆ ವಿಶೇಷ ಗಮನಕೊಡಲಾಗುತ್ತಿದೆ. ಇದರ ಅಂಗವಾಗಿ 60ಕ್ಕೂ ಹೆಚ್ಚು ಸ್ಟಾರ್ಟಪ್ ಕಂಪನಿಗಳು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಅವುಗಳನ್ನು ಆಧರಿಸಿ ರೂಪಿಸಿರುವ ಪರಿಹಾರೋಪಾಯ ಪ್ರದರ್ಶಿಸಲಿವೆ. ಇವುಗಳಲ್ಲಿ ಕಾರ್ಬನ್ ನ್ಯಾನೋಟ್ಯೂಬ್, ಅಟಾನಮಸ್ ಸಿಸ್ಟಮ್ಸ್, ಮಾನವರಹಿತ ಏರಿಯಲ್ ವೆಹಿಕಲ್ಸ್ ಮತ್ತು ಸುಧಾರಿತ ರೋಬೋಟಿಕ್ಸ್ ಮುಂತಾದವು ಸೇರಿವೆ.



ಫೆಬ್ರವರಿ 11ರಿಂದ 14ರವರೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದ ಸಿದ್ಧತೆಯನ್ನು ಸಚಿವ ಎಂ.ಬಿ.ಪಾಟೀಲ್ ಪರಿಶೀಲಿಸಿದರು.

ಸಮಾವೇಶದಲ್ಲಿ 19 ರಾಷ್ಟ್ರಗಳು ಪಾಲ್ಗೊಳ್ಳುತ್ತಿದ್ದು, 10 ರಾಷ್ಟ್ರಗಳೊಂದಿಗೆ ಸುಸ್ಥಿರ ಆರ್ಥಿಕ ಬೆಳವಣಿಗೆ, ಹೂಡಿಕೆಗೆ ಇರುವ ಅವಕಾಶಗಳು, ಜಾಗತಿಕ ಪೂರೈಕೆ ಸರಪಳಿಯಲ್ಲಿ ಕರ್ನಾಟಕದ ಸ್ಥಾನಮಾನ, ರಾಜ್ಯದಲ್ಲಿ ಮರುಬಳಕೆ ಇಂಧನ ಕ್ಷೇತ್ರದ ಭವಿಷ್ಯ, ಆರೋಗ್ಯ ಸೇವೆ ಮುಂತಾದ ನಿರ್ಣಾಯಕ ಕ್ಷೇತ್ರಗಳ ಕುರಿತು ಚರ್ಚಿಸಲಾಗುವುದು ಎಂದರು.

ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗೆ ನಿರ್ಣಾಯಕ ಕೊಡುಗೆ ನೀಡುತ್ತಿರುವ ರಾಜ್ಯದ 14 ಉದ್ಯಮಗಳನ್ನು ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಪುರಸ್ಕರಿಸಲಾಗುತ್ತಿದೆ. ಇವುಗಳಲ್ಲಿ ವೈಮಾಂತರಿಕ್ಷ ಮತ್ತು ರಕ್ಷಣೆ, ಆಟೋ/ಇ.ವಿ., ಜೈವಿಕ ತಂತ್ರಜ್ಞಾನ ಮತ್ತು ಜೀವವಿಜ್ಞಾನ ವಲಯಗಳ ಸಾಧಕ ಉದ್ಯಮಗಳಿದ್ದು, ಈ ಕಾರ್ಯಕ್ರಮ ಫೆ.12ರ ಸಂಜೆ ನಡೆಯಲಿದೆ.

ಪುರಸ್ಕಾರ: ಉದ್ಯಮಗಳಿಗೆ ಒಂದು ಬಾರಿಯ ಗರಿಷ್ಠ ಬಂಡವಾಳ ಹೂಡಿಕೆ ಮಾಡಿರುವ ಕಂಪನಿಗಳು ಮತ್ತು ಜಾಗತಿಕ ಮಟ್ಟದ ಸಂಶೋಧನೆ ಹಾಗೂ ಅಭಿವೃದ್ಧಿಗೆ ಆದ್ಯತೆ ನೀಡಿರುವ ಉದ್ದಿಮೆಗಳನ್ನೂ ವಿಶೇಷವಾಗಿ ಪರಿಗಣಿಸಿ, ಪುರಸ್ಕರಿಸಲಾಗುವುದು.

ಕೈಗಾರಿಕಾ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ 35ಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಸ್ತರದ ಕೈಗಾರಿಕೆಗಳು, ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿರುವ ಮಹಿಳಾ ಉದ್ಯಮಿಗಳು, ವಲಯವಾರು ಕೈಗಾರಿಕಾ ಉತ್ಕೃಷ್ಟತೆ ಸಾಧಿಸಿರುವ ಉದ್ಯಮಗಳಿಗೆ ಫೆಬ್ರವರಿ 13ರ ಸಂಜೆ ಪ್ರಶಸ್ತಿ ಪುರಸ್ಕಾರ ಕೊಡಲಾಗುವುದು. 'ವೆಂಚುರೈಸ್' ಉಪಕ್ರಮದಡಿ ಒಟ್ಟು 3 ಲಕ್ಷ ಡಾಲರ್ ಮೌಲ್ಯದ 9 ಬಹುಮಾನ ಪ್ರದಾನ ಮಾಡಲಾಗುವುದು, ಇದರಲ್ಲಿ ಮೊದಲ ಮೂರು ಸ್ಥಾನಗಳಿಗೆ ಕ್ರಮವಾಗಿ 50 ಸಾವಿರ ಡಾಲರ್, 30 ಸಾವಿರ ಡಾಲರ್ ಮತ್ತು 20 ಸಾವಿರ ಡಾಲರ್ ನಗದು ಪುರಸ್ಕಾರವಿದೆ ಎಂದರು.

ರಾಜನಾಥ್ ಸಿಂಗ್ ಉದ್ಘಾಟನೆ: ಸಮಾವೇಶವನ್ನು ಫೆಬ್ರವರಿ 11ರ ಸಂಜೆ 4ಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಿಸಲಿದ್ದು, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಪಾಲ್ಗೊಳ್ಳಲಿದ್ದಾರೆ ಎಂದರು.

ಫೆಬ್ರವರಿ 11ರಿಂದ 14ರ ನಡುವೆ ನಡೆಯಲಿರುವ ವಿವಿಧ ಕಾರ್ಯಕ್ರಮಗಳಲ್ಲಿ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಅಶ್ವಿನಿ ವೈಷ್ಣವ್, ಪ್ರಹ್ಲಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಪಿಯೂಷ್ ಗೋಯಲ್ ಪಾಲ್ಗೊಳ್ಳಲಿದ್ದು, ಸಮಾರೋಪಕ್ಕೆ ರಾಜ್ಯಸಭೆಯ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆಗಮಿಸಲಿದ್ದಾರೆ ಎಂದು ಪಾಟೀಲ್ ತಿಳಿಸಿದರು.

ಕ್ವಿನ್ ಸಿಟಿ ಯೋಜನೆ

“ ಮಹತ್ವಾಕಾಂಕ್ಷಿ ಕ್ವಿನ್ ಸಿಟಿ ಯೋಜನೆ ಸಂಬಂಧ ದೇಶ–ವಿದೇಶದ ಕೆಲವು ವಿಶ್ವವಿದ್ಯಾಲಯಗಳ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು, ಆರ್ಥಿಕ ಬೆಳವಣಿಗೆ ಕುರಿತು ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ, ಲಾಜಿಸ್ಟಿಕ್ಸ್ ವಲಯದಲ್ಲಿ ನಡೆಯುತ್ತಿರುವ ಆವಿಷ್ಕಾರಗಳನ್ನು ಕುರಿತು ವೋಲ್ವೊ ಸಮೂಹದ ಮುಖ್ಯಸ್ಥ ಮಾರ್ಟಿನ್ ಲುಂಡ್ ಸ್ಟೆಡ್, ಸಂದೀಪ್ ದೇಶಮುಖ್ ಮತ್ತು ಚಾಣಕ್ಯ ಹೃದಯ, ಯುವ ಸಂಶೋಧಕರ ಕುರಿತು ಝೀರೋದಾ ಸಂಸ್ಥಾಪಕ ನಿಖಿಲ್ ಕಾಮತ್, ಉದ್ಯಮಿಗಳಾದ ಪಾರ್ಥ ಜಿಂದಾಲ್ ಹಾಗೂ ಸುಝೂನಾ ಮುತ್ತೂಟ್ ಮಾತುಕತೆ ನಡೆಸಲಿದ್ದಾರೆ. ಈ ಬಾರಿಯ ಸಮಾವೇಶದಲ್ಲಿ ಹೆಚ್ಚು ಗೋಷ್ಠಿಗಳನ್ನು ಏರ್ಪಡಿಸಲಾಗಿದೆ. ಇವುಗಳಲ್ಲಿ ಗೂಗಲ್ ಎಕ್ಸ್ ಸಂಸ್ಥಾಪಕ ಸೆಬಾಸ್ಟಿಯನ್ ತ್ರನ್, ಲ್ಯಾಮ್ ರೀಸರ್ಚ್ ಮುಖ್ಯಸ್ಥ ಪ್ಯಾಟ್ರಿಕ್ ಲಾರ್ಡ್, ಜನರಲ್ ಅಟಾಮಿಕ್ಸ್ ಗ್ಲೋಬಲ್ ಕಾರ್ಪೊರೇಷನ್ ಸಿಇಒ ವಿವೇಕ್ ಲಾಲ್, ಟಿವಿಎಸ್ ಮೋಟಾರ್ಸ್ ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್ ವೇಣು, ಬೋಯಿಂಗ್ ಕಂಪನಿಯ ಉನ್ನತಾಧಿಕಾರಿ ರಾಬ್ ಬಾಯ್ಡ್, ನಥಿಂಗ್ ಕಂಪನಿಯ ಸಹ ಸಂಸ್ಥಾಪಕ ಅಕಿಸ್ ಇವ್ಯಾಂಜಿಲೈಡಿಸ್, ಗ್ರೀಸ್ ದೇಶದ ಮಾಜಿ ಪ್ರಧಾನಿ ಜಾರ್ಜ್ ಪೆಪೆಂಡ್ರಿಯೊ ಮಾತನಾಡಲಿದ್ದಾರೆ.

–ಎಂ.ಬಿ.ಪಾಟೀಲ್, ಸಚಿವ

ಮೆಟ್ರೋ ಪ್ರಯಾಣ ದರ ಏರಿಕೆ; ಇಂದಿನಿಂದ ಜಾರಿ

ಬೆಂಗಳೂರು: ಬೆಂಗಳೂರು ಮೆಟ್ರೋ ರೈಲು ನಿಗಮ 'ನಮ್ಮ ಮೆಟ್ರೋ' ಪ್ರಯಾಣ ದರವನ್ನು ಏರಿಕೆ ಮಾಡಿದ್ದು, ಭಾನುವಾರ(ಫೆ.9)ದಿಂದ ಪರಿಷ್ಕೃತ ದರ ಜಾರಿಯಾಗಲಿದೆ.



ಕಿಲೋ ಮೀಟರ್ ಲೆಕ್ಕದಲ್ಲಿ ಶೇ.46ರವರೆಗೆ ಪ್ರಯಾಣ ದರ ಏರಿಕೆ ಮಾಡಲಾಗಿದೆ. ಕನಿಷ್ಠ ದರವನ್ನು 10 ರೂ.ನಲ್ಲೇ ಉಳಿಸಿಕೊಂಡು, ಗರಿಷ್ಠ ದರವನ್ನು 90 ರೂ.ಗೆ ಹೆಚ್ಚಿಸಲಾಗಿದೆ. ಪ್ರಯಾಣಕ್ಕೆ ಬಳಸುವ ಸ್ಮಾರ್ಟ್ ಕಾರ್ಡ್‌ನ ಕನಿಷ್ಠ ಮೊತ್ತವನ್ನೂ 50 ರೂ.ನಿಂದ 90 ರೂ.ಗೆ ಹೆಚ್ಚಿಸಲಾಗಿದೆ. ಸ್ಮಾರ್ಟ್ ಕಾರ್ಡ್‌ಗಳ ಮೇಲೆ ಅಸ್ತಿತ್ವದಲ್ಲಿರುವ ಶೇ.5 ರಿಯಾಯ್ತಿ ಹಾಗೂ ಪೀಕ್ ಅವರ್ ಅಲ್ಲದ ಸಮಯದಲ್ಲಿನ ಪ್ರಯಾಣಕ್ಕಾಗಿ ನೀಡುವ ಹೆಚ್ಚುವರಿ ಶೇ.5ರ ರಿಯಾಯ್ತಿ ಮುಂದುವರೆಯಲಿದೆ. ಪ್ರವಾಸಿ ಕಾರ್ಡ್(ದಿನದ ಪಾಸ್‌ಗಳು) ಮತ್ತು ಗ್ರೂಪ್ ಟಿಕೆಟ್ ದರಗಳನ್ನೂ ಬದಲಾವಣೆ ಮಾಡಲಾಗಿದೆ.

ಇಂದಿನಿಂದ ಹೇಮಾದ್ರಂಭ ಭಾರಿ ದನಗಳ ಜಾತ್ರೆ

ಮೈಸೂರು, ಫೆ.8(ಜಿಎ)–ಬನ್ನೂರು ಹೇಮಾದ್ರಂಭ ಭಾರಿ ದನಗಳ ಜಾತ್ರಾ ಮಹೋತ್ಸವವು ಫೆ.9ರಿಂದ 15ರವರೆಗೆ ತಿ.ನರಸೀಪುರ ತಾಲೂಕಿನ ಬನ್ನೂರಿನ ಫುಟ್‌ಬಾಲ್ ಮೈದಾನದಲ್ಲಿ ನಡೆಯಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಜಾತ್ರಾ ಸಮಿತಿ ಅಧ್ಯಕ್ಷ ಡಾ.ರಾಹುಲ್‌ಗೌಡ ಈ ವಿಷಯ ತಿಳಿಸಿ, ಬನ್ನೂರಿನ ದೊಡ್ಡ ಮಟ್ಟದ ಜಾತ್ರೆ ಇದಾಗಿದ್ದು, ಒಂದು ವಾರ ಕಾಲದ ಜಾತ್ರೆ ಆಗಿದೆ. ಈ ವರ್ಷದ ವಿಶೇಷತೆ ಹಳ್ಳಿಕಾರ್ ತಳಿ ಆಗಿವೆ. ಹಸುಗಳ ವಿಭಾಗ, ಬೀಜದ ಹೋರಿಗಳ ವಿಭಾಗ, ಎತ್ತುಗಳ ವಿಭಾಗ ಮಾಡಿದ್ದು, ಪ್ರತಿ ವಿಭಾಗದಲ್ಲಿಯೂ ಉತ್ತಮವಾದ ಮೊದಲ ಮೂರಕ್ಕೆ ಬಹುಮಾನ ನೀಡಲಾಗುವುದು. ಆಯ್ಕೆಯನ್ನು ಪಶು ವೈದ್ಯಕೀಯ ಅಧಿಕಾರಿಗಳೇ ಮಾಡಲಿದ್ದಾರೆ. ಜೊತೆಗೆ, ವಿಶೇಷವಾಗಿ ಮೂರು ಚಾಂಪಿಯನ್ ಹಾಗೂ ಅತ್ಯುತ್ತಮ ಚಪ್ಪರ ವರ್ಗದಲ್ಲಿಯೂ ಬಹುಮಾನವಿದೆ ಎಂದು ಮಾಹಿತಿ ನೀಡಿದರು. ಈ ವೇಳೆ ಸಾಹಿತಿ ಬನ್ನೂರು ಕೆ.ರಾಜು ದನಗಳ ಜಾತ್ರೆಯ ಪೋಸ್ಟರ್ ಬಿಡುಗಡೆಗೊಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬನ್ನೂರು ಕೃಷ್ಣ, ಜಯಮುತ್ತು ಉಪಸ್ಥಿತರಿದ್ದರು.

ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲು

ಬೆಂಗಳೂರು, ಫೆ.8– ಮಾಜಿ ಸಂಸದ ಡಿ.ಕೆ.ಸುರೇಶ್ ಸಹೋದರಿ ಎಂದು ಕೋಟ್ಯಾಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್‌ಐಆರ್ ದಾಖಲಾಗಿದೆ. ಅಕ್ರಮವಾಗಿ ಹಲವು ವ್ಯಕ್ತಿಗಳ ಫೋನ್ ಕರೆಗಳ ದಾಖಲೆಗಳ ಸಂಗ್ರಹಣೆ ಆರೋಪದಲ್ಲಿ ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ. ತನಿಖಾಧಿಕಾರಿ ಭರತ್



ರೆಡ್ಡಿ ನೀಡಿರುವ ದೂರಿನ ಮೇರೆಗೆ ಬ್ಯಾಟರಾಯನಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಐಶ್ವರ್ಯಾ ಗೌಡ ಅವರ 5 ಹಾಗೂ ಅವರ ಪತಿಯ 2 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿದ್ದ ಪೊಲೀಸರು ಅವುಗಳಲ್ಲಿದ್ದ ಡೇಟಾ ಸಂಗ್ರಹಣೆಗಾಗಿ ನ್ಯಾಯಾಲಯದ ಅನುಮತಿ ಪಡೆದು ಪಶ್ಚಿಮ ವಿಭಾಗದ ಸಿಇಎನ್ ಠಾಣೆಗೆ ರವಾನಿಸಿದ್ದರು. ಫೋನ್‌ಗಳಲ್ಲಿನ ಡೇಟಾ ಸಂಗ್ರಹಿಸಿದಾಗ ಅದರಲ್ಲಿ ಹಲವು ವ್ಯಕ್ತಿಗಳ ಸಿಡಿಆರ್ ವಿವರಗಳು ಪತ್ತೆಯಾಗಿವೆ. ಫೋನ್ ಕರೆ ದಾಖಲೆಗಳನ್ನು ಸಂಗ್ರಹಿಸಲು ತನಿಖಾಧಿಕಾರಿಗಳು ಅಥವಾ ತನಿಖಾ ಸಂಸ್ಥೆಗೆ ಮಾತ್ರ ಅವಕಾಶವಿರುತ್ತದೆ. ಆದರೆ ಐಶ್ವರ್ಯಾಗೌಡ ಫೋನ್‌ಗಳಲ್ಲಿ ಈ ದಾಖಲೆಗಳು ಲಭ್ಯವಾಗಿರುವ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪ್ರೀತಿಸುವುದಾಗಿ ನಂಬಿಸಿ ಅಪ್ರಾಪ್ತೆ ಮೇಲೆ ಅತ್ಯಾಚಾರ, ಮಲತಂದೆಯಿಂದಲೂ ಲೈಂಗಿಕ ದೌರ್ಜನ್ಯ

ಇಬ್ಬರು ಕಾಮುಕರಿಗೆ ಜೈಲು ಶಿಕ್ಷೆ

ಮೈಸೂರು, ಫೆ.8–ಪ್ರೀತಿಸುವುದಾಗಿ ನಂಬಿಸಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಕಾಮುಕ ಮತ್ತು ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆಕೆಯ ಮಲತಂದೆಗೆ ಜೈಲು ಶಿಕ್ಷೆ ವಿಧಿಸಿ ಮೈಸೂರಿನ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಆನಂದ ಪಿ.ಹೊಗಾಡೆ ತೀರ್ಪು ನೀಡಿದ್ದಾರೆ.

ಮೈಸೂರು ತಾಲೂಕು ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ವಾಸವಿದ್ದ ಬಿಶಾಲ್ ಮುಂಡ ಎಂಬಾತನಿಗೆ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪದ ಮೇರೆಗೆ 20 ವರ್ಷ ಕಠಿಣ ಶಿಕ್ಷೆ ಮತ್ತು 25 ಸಾವಿರ ರೂ. ದಂಡ ವಿಧಿಸಲಾಗಿದೆ. ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಆಕೆಯ ಮಲತಂದೆ ರಿಷಿ ಬೆಹರ್ ಎಂಬುವನಿಗೆ 5 ವರ್ಷ ಜೈಲು ಶಿಕ್ಷೆ ಮತ್ತು 10 ಸಾವಿರ ರೂ. ದಂಡ ವಿಧಿಸಲಾಗಿದೆ.

ವಿವರ: ಕಡಕೊಳ ಕೈಗಾರಿಕಾ



ಪ್ರದೇಶದಲ್ಲಿ ವಾಸವಿದ್ದ ಬಾಲಕಿಯನ್ನು ಪಕ್ಕದ ಮನೆಯವನಾದ ಬಿಶಾಲ್ ಮುಂಡ ಪ್ರೀತಿಸುವುದಾಗಿ ನಂಬಿಸಿ ಯಾರೂ ಇಲ್ಲದ ಸಂದರ್ಭದಲ್ಲಿ 2024ರ ಏಪ್ರಿಲ್ 7ರಂದು ಆಕೆಯ ಮನೆಯಲ್ಲೇ ಅತ್ಯಾಚಾರವೆಸಗಿದ್ದಲ್ಲದೇ, ನಂತರ ಬಾಲಕಿಯನ್ನು ಪುಸಲಾಯಿಸಿ, ಬೆಂಗಳೂರಿಗೆ ಕರೆದೊಯ್ದು ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಮತ್ತೆ ಅತ್ಯಾಚಾರವೆಸಗಿದ್ದ ಎಂದು ಹೇಳಲಾಗಿದೆ.

ಈ ಸಂಬಂಧ ಬಾಲಕಿಯ ತಾಯಿ ಮೈಸೂರಿನ ಮಹಿಳಾ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದು, ಪೊಲೀಸರು ತನಿಖೆ ನಡೆಸಿದ ವೇಳೆ ಬಾಲಕಿಯ ಮೇಲೆ ಆಕೆಯ ಮಲತಂದೆಯೂ ರಿಷಿ ಬೆಹರ್ ಕೂಡ ಲೈಂಗಿಕ ದೌರ್ಜನ್ಯ ನಡೆಸಿದ್ದ ಎಂಬುದು ಬಯಲಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಠಾಣೆಯ ಇನ್ಸ್‌ಪೆಕ್ಟರ್ ಯೋಗನಂಜಪ್ಪ ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರು, ಇಬ್ಬರೂ ಕಾಮುಕರಿಗೆ ಶಿಕ್ಷೆ ವಿಧಿಸಿದ್ದಲ್ಲದೇ, ಸಂತ್ರಸ್ತ ಬಾಲಕಿ 6 ಲಕ್ಷ ರೂ. ಪರಿಹಾರ ಪಡೆಯಲು ಅರ್ಹಳು ಎಂದು ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕಿ ಕೆ.ಬಿ.ಜಯಂತಿ ವಾದ ಮಂಡಿಸಿದ್ದರು.

ಕ್ಯಾಲೆಂಡರ್ ಬಿಡುಗಡೆ



ಮೈಸೂರು ನಗರ ಜಿಲ್ಲಾ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಬಿಡುಗಡೆ ಮಾಡಿದರು. ರವಿಶಾಸ್ತ್ರಿ, ಉಗ್ರಯ್ಯ, ಎ.ಆರ್.ರವೀಂದ್ರಭಟ್, ಕೆ.ಭಾಸ್ಕರ್ ಶೆಟ್ಟಿ, ಜಿ.ಅರುಣ್, ಮಹೇಶ ಕಾಮತ್, ಅನಿಲ್‌ಕುಮಾರ್, ಸುಧೀರಕುಮಾರ್, ಓ.ಪ್ರತಾಪಕುಮಾರ್, ಕೆ.ಎಸ್.ಅರುಣ್, ಕೆ.ಸಿ.ವಿಶ್ವಾನಂದಭಟ್, ಎನ್.ಆರ್.ರಾಮಕೃಷ್ಣ ಮತ್ತಿತರರಿದ್ದರು.

ಇಂದು ಮೈಸೂರಲ್ಲಿ ಚಿಗುರು ಮಕ್ಕಳ ಕಾರ್ನಿವಲ್

ಮೈಸೂರು, ಫೆ.8(ಜಿಎ)–ಯೂತ್ ಫಾರ್ ಸೇವಾ ಸಂಸ್ಥೆ ವತಿಯಿಂದ ಫೆ.9ಕ್ಕೆ ನಗರದ ಗೋಕುಲಂ ಮೂರನೇ ಹಂತದಲ್ಲಿರುವ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನಲ್ಲಿ ಚಿಗುರು ಮಕ್ಕಳ ಕಾರ್ನಿವಲ್ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಪದಾಧಿಕಾರಿ ಉದಿತ್‌ಗೌಡ ಈ ವಿಷಯ ತಿಳಿಸಿ, ವಿಶೇಷವಾಗಿ ಸರ್ಕಾರಿ ಶಾಲೆ ಮಕ್ಕಳಿಗೆ ಆದ್ಯತೆ ನೀಡಿದ್ದು, ಸುಮಾರು 1300 ಮಕ್ಕಳು ಪಾಲ್ಗೊಳ್ಳಲಿದ್ದಾರೆ. ಅಂದು ಬೆಳಗ್ಗೆ 9 ಗಂಟೆಗೆ ಬೇಬಿಮಠದ ಮಹಾಂತೇಶ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸುವರು. ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಡಿಸಿಪಿ ಜಾಹ್ನವಿ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ. ಮಕ್ಕಳಿಗೆ ಹೋಗಿ ಬರುವ ಬಸ್ ವ್ಯವಸ್ಥೆ ಸಂಸ್ಥೆಯೇ ಮಾಡಿದೆ. ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ನಡೆದು ವಿಜೇತ ಮಕ್ಕಳಿಗೆ ಟ್ರೋಫಿ, ಪದಕ, ಪಾಲ್ಗೊಂಡವರಿಗೆ ಪ್ರಮಾಣಪತ್ರ ನೀಡಲಾಗುವುದು. ಯಾವ ಮಕ್ಕಳಿಂದಲೂ ಶುಲ್ಕ ಪಡೆಯುತ್ತಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ದೀಪಕ್ ಆರಾಧ್ಯ, ಸಿ.ವಿ.ಕೀರ್ತಿ, ಜೆ.ಎ.ಅಜಿತ್, ಎನ್.ವಿವೇಕ್ ಉಪಸ್ಥಿತರಿದ್ದರು.

ಆರೋಗ್ಯ ಉಚಿತ ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು: ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಕಾಯಚಿಕಿತ್ಸಾ ಹೊರರೋಗಿ ವಿಭಾಗದಲ್ಲಿ ಉಚಿತ ತಪಾಸಣೆ, ಚಿಕಿತ್ಸಾ ಶಿಬಿರವನ್ನು ಮಾ.3ರವರೆಗೆ ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ನಡೆಸಲಾಗುವುದು. ಮೂತ್ರಕೋಶದ ಕಲ್ಲು ಕಾಯಿಲೆಗೆ ಡಾ.ಪೂಜಾ–6363681618, ಋತು ಬಂಧ/ಮುಟ್ಟು ನಿಲ್ಲುವಿಕೆಗೆ ಡಾ.ಹಸೀನಾ ಬೇಗಂ–9380327391, ಮಂಡಿನೋವು/ ಮೊಣಕಾಲು ನೋವಿಗೆ ಡಾ.ಪಲ್ಲವಿ–8747028584, ಕರುಳಿನ ಸಮಸ್ಯೆಗೆ ಡಾ.ಶ್ವೇತಾ–8762052998, ಸಕ್ಕರೆ ಕಾಯಿಲೆಗೆ ಡಾ.ಪೂಜಾ–8904458532, ಭುಜದ ಮರಗಟ್ಟುವಿಕೆಗೆ ಡಾ.ಕೀರ್ತನಾ 8310117698, ಸೊಂಟನೋವಿಗೆ ಡಾ.ಸಂಗೀತಾ–8722240385 ಸಂಪರ್ಕಿಸಬಹುದು.

ಆಧಾರ್ ಸೇವೆಗೆ ಮೈಸೂರಲ್ಲಿ ಭಾರಿ ಮನ್ನಣೆ

● ಆಧಾರ್ ಸಂಸ್ಥಾಪಕ ಸಿಇಓ ಶ್ರೀಕಾಂತ್ ನಾದಮುನಿ ಅಭಿಮತ ● ಡಿಜಿಟಲ್ ಕ್ರಾಂತಿಗೂ ಮೈಸೂರೇ ಮುನ್ನುಡಿ; ಪ್ರಶಂಸೆ

ಮೈಸೂರು, ಫೆ.8(ಎಂಟಿವೈ)–ಡಿಜಿಟಲ್ ಕ್ರಾಂತಿಗೆ ಮೈಸೂರು ನಗರವೇ ಮುನ್ನುಡಿ ಬರೆದಿದ್ದು, ಪರೀಕ್ಷಾರ್ಥವಾಗಿ ಆರಂಭವಾದ ಆಧಾರ್ ಸೇವೆಗೆ ಮೈಸೂರಲ್ಲಿ ಹೆಚ್ಚಿನ ಮನ್ನಣೆ ದೊರೆತಿದೆ ಎಂದು ಆಧಾರ್ ಸಂಸ್ಥಾಪಕ ಸಿಇಓ ಶ್ರೀಕಾಂತ್ ನಾದಮುನಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಎನ್‌ಐಇ ಕಾಲೇಜು, ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವಿಸಸ್ ಸಂಸ್ಥೆ ಆಯೋಜಿಸಿದ್ದ 'ಇಲ್ಯುಮಿನೇಟ್' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ 15 ವರ್ಷದ ಹಿಂದೆ ನಡೆದ ಡಿಜಿಟಲ್ ಕ್ರಾಂತಿಗೆ ಉತ್ತಮ ಪ್ರತಿಕ್ರಿಯೆ ಕಂಡುಬಂದಿದೆ. ಮೈಸೂರಿನಲ್ಲಿಯೇ ಪ್ರಾಯೋಗಿಕವಾಗಿ ಆಧಾರ್ ಸೇವೆ ಆರಂಭಿಸಲಾಯಿತು. ಈ ವೇಳೆ ಇಲ್ಲಿನ ಜನತೆ ಅತ್ಯುತ್ತಮವಾಗಿ ಪ್ರತಿಕ್ರಿಯಿಸಿದರು. ಆಧಾರ್ ನೋಂದಣಿಗೆ ರೈತರು, ಗ್ರಾಮೀಣ ಪ್ರದೇಶದ ಜನರು, ಅಸಂಘಟಿತ ವರ್ಗ, ಶ್ರಮಿಕರು ಸೇರಿದಂತೆ ಎಲ್ಲಾ ವರ್ಗದ ಜನರು ಮುಂದಾದರು. ಪ್ರಸ್ತುತ ಸಂದರ್ಭದಲ್ಲಿ ದೇಶದಲ್ಲಿ ಶೇ.95ರಷ್ಟು ಜನ ಆಧಾರ್ ಹೊಂದಿದ್ದಾರೆ. ಆಧಾರ್ ದತ್ತಾಂಶ ಸುರಕ್ಷತೆಯಿಂದ ಕೂಡಿದ್ದು, ದತ್ತಾಂಶ ಭದ್ರತೆಯನ್ನು ಹೊಂದಿದ ವಿಶ್ವದ ಅತಿದೊಡ್ಡ ಗುರುತಿನ ವ್ಯವಸ್ಥೆ ಎಂಬ ಕೀರ್ತಿಗೆ ಪಾತ್ರವಾಗಿದೆ. ಈ ವ್ಯವಸ್ಥೆಯಲ್ಲಿ ದತ್ತಾಂಶ ಕಳವು ಮಾಡುವುದು ಸುಲಭವಲ್ಲ. ವೈಯಕ್ತಿಕ ದತ್ತಾಂಶ ಸುರಕ್ಷಿತವಾಗಿರುವುದನ್ನು ಶೇ.90ರಷ್ಟು ಜನ ಒಪ್ಪಿಕೊಂಡಿದ್ದಾರೆ ಎಂದು ಅಭಿಪ್ರಾಯಪಟ್ಟರು.



ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಎನ್‌ಐಇ ಕಾಲೇಜು, ಎಲ್&ಟಿ ಟೆಕ್ನಾಲಜಿ ಸರ್ವಿಸಸ್ ಸಂಸ್ಥೆ ಆಯೋಜಿಸಿದ್ದ 'ಇಲ್ಯುಮಿನೇಟ್' ಕಾರ್ಯಕ್ರಮವನ್ನು ಆಧಾರ್ ಸಂಸ್ಥಾಪಕ ಸಿಇಓ ಶ್ರೀಕಾಂತ್ ನಾದಮುನಿ ಉದ್ಘಾಟಿಸಿದರು.

ಮೈಸೂರು ಜಿಲ್ಲೆಯ ನಂಜನಗೂಡು ಭಾಗದಲ್ಲಿ ದಶಕಗಳ ಹಿಂದೆ ಮೊದಲ ಬಾರಿಗೆ ಎಲ್‌ಪಿಜಿ ಸಿಲಿಂಡರ್ ಹಾಗೂ ಆಧಾರ್ ದತ್ತಾಂಶವನ್ನು ಲಿಂಕ್ ಮಾಡಲಾಯಿತು. ನಂತರ ದೇಶದಾದ್ಯಂತ ಸೇವೆ ವಿಸ್ತರಿಸಲಾಯಿತು. ಕೋವಿಡ್ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಹಾಸಿಗೆಗಳ ಸಂಖ್ಯೆಯನ್ನು ನಿಖರವಾಗಿ ಗುರುತಿಸಲು ಟೆಲಿಐಸಿಯು ಯೋಜನೆಯನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮೊದಲು ಜಾರಿಗೊಳಿಸಲಾಯಿತು. ಕೇರ್ ಪ್ಲಾಟ್‌ಫಾರ್ಮ್ ಮೂಲಕ ದೇಶದಾದ್ಯಂತ ಆಸ್ಪತ್ರೆ ಹಾಸಿಗೆಗಳ ಲಭ್ಯತೆ ಸಿಗುವಂತೆ ಮಾಡಲಾಯಿತು. ಇಂತಹ ವ್ಯವಸ್ಥೆ ಸುಲಭವಾಗಿ ಜಾರಿಗೊಳಿಸಲು ಆಧಾರ್ ವ್ಯವಸ್ಥೆಯೇ ಕಾರಣ ಎಂದು ಹರ್ಷ ವ್ಯಕ್ತಪಡಿಸಿದರು.

ದೇಶದಾದ್ಯಂತ ಆಧಾರ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ 4 ಲಕ್ಷ ನೋಂದಣಿ ಕಿಟ್ ಆಧಾರ್ ನೋಂದಣಿ ಮಾಡುವ ಪ್ರಕ್ರಿಯೆಯನ್ನು ನಡೆಸಲಾಯಿತು. ಮೈಸೂರಲ್ಲಿ ಪ್ರತಿದಿನ 13 ಸಾವಿರ ಬಯೋಮೆಟ್ರಿಕ್ ದತ್ತಾಂಶ ಸಮೀಕರಣಗೊಳಿಸಲಾಗುತ್ತಿತ್ತು. ಮೈಸೂರಿನಲ್ಲಿ ಆರಂಭವಾದ ಕಾಗದರಹಿತ ಸೇವೆಯಿಂದ 8.5 ಸಾವಿರ ಕೋಟಿ ಉಳಿತಾಯವಾಗುತ್ತಿದೆ. ಡಿಜಿಟಲ್ ಸಾರ್ವಜನಿಕ ಸೌಲಭ್ಯ ದೇಶದಲ್ಲಿ ಕ್ರಾಂತಿಯನ್ನೇ ಮಾಡಿತು. ಸರ್ಕಾರ, ಖಾಸಗಿ ಹಾಗೂ ಸಾರ್ವಜನಿಕರು ಸೇರಿ ಕಟ್ಟಿದ ವ್ಯವಸ್ಥೆಯಾಗಿದ್ದು, ಯುಪಿಐ, ಡಿಜಿ ಲಾಕರ್, ಜನಧನ್, ಪಿಂಚಣಿ ಯೋಜನೆಗಳು ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲಾಯಿತು ಎಂದರು.

ಇದೇ ವೇಳೆ ಬುಜ್ ಆನ್ ಅರ್ಥ್ ಕಂಪನಿಯ ಸಿಇಓ ಗಾಯತ್ರಿ ಚೌಹಾಣ್ ಮಾತನಾಡಿ, ಆಧಾರ್ ವ್ಯವಸ್ಥೆ ಅತ್ಯುತ್ತಮವಾದ ವ್ಯವಸ್ಥೆಯಾಗಿದೆ. ಇದು ಅತ್ಯಂತ ವಿಶ್ವಾಸಾರ್ಹ ವ್ಯವಸ್ಥೆಯಾಗಿದ್ದು, ವಿವಿಧ ಸೌಲಭ್ಯ ಪಡೆಯಲು ಆಧಾರ್ ಸಹಕಾರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಲ್&ಟಿ ಟೆಕ್ನಾಲಜಿ ಸರ್ವಿಸಸ್‌ನ ಕಾರ್ಯಕಾರಿ ನಿರ್ದೇಶಕ ಅಭಿಷೇಕ್ ಸಿನ್ಹಾ, ಎನ್‌ಐಇ ಪ್ರಾಂಶುಪಾಲರಾದ ಪ್ರೊ.ರೋಹಿಣಿ ನಾಗಪದ್ಮಾ, ಎನ್‌ಐಇ ಸಂಸ್ಥೆ ಅಧ್ಯಕ್ಷ ಪ್ರೊ.ರಂಗನಾಥ್, ಆರ್.ದಿವ್ಯಾ ಇನ್ನಿತರರು ಉಪಸ್ಥಿತರಿದ್ದರು.

ದೆಹಲಿ ಗೆಲುವಿನಿಂದ ರಾಜ್ಯ ಬಿಜೆಪಿ ಮನೆಯಲ್ಲಿ ಸಂಭ್ರಮವೋ ಸಂಭ್ರಮ



ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತದೊಂದಿಗೆ ಅಧಿಕಾರ ಗದ್ದುಗೆ ಹಿಡಿಯುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯಾಲಯದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಬೆಂಗಳೂರು, ಫೆ.8(ಕೆಎಂಶಿ)–ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತದೊಂದಿಗೆ 27 ವರ್ಷಗಳ ನಂತರ ಅಧಿಕಾರ ಗದ್ದುಗೆ ಹಿಡಿಯುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯಾಲಯದಲ್ಲಿಂದು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆದ ಸಂಭ್ರಮಾಚರಣೆಯಲ್ಲಿ ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಸಚಿವರು ಹಾಗೂ ಶಾಸಕರು, ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಎಲ್ಲರೂ ಪರಸ್ಪರ ಸಿಹಿ ತಿನ್ನಿಸಿ, ಪಟಾಕಿ ಸಿಡಿಸಿ ದೆಹಲಿ ಚುನಾವಣೆಯ ವಿಜಯೋತ್ಸವ ಆಚರಿಸಿ, ಪ್ರಧಾನಿ ಮೋದಿ ಪರ ಘೋಷಣೆಗಳನ್ನು ಕೂಗಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದ್ದು, ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಹಾಗೂ ಮತದಾರರನ್ನು ಅಭಿನಂದಿಸುವುದಾಗಿ ತಿಳಿಸಿದ್ದಾರೆ. ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭ್ರಷ್ಟ ಆಡಳಿತದ ಮುಖವಾಡ ಕಳಚಿದೆ, ಆಮ್ ಆದ್ಮಿ ಪಕ್ಷದ ಬಣ್ಣ ಬಯಲಾಗಿದೆ ಎಂದರು.

ಈ ಸಂದರ್ಭದಲ್ಲಿ ಟ್ವೀಟ್ ಮಾಡಿರುವ ಆರ್.ಅಶೋಕ್, ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹ ಪ್ರಚಾರ ನಡೆಸಿದ್ದರಲ್ಲದೆ, ಪಕ್ಷ ಶೂನ್ಯ ಸಾಧನೆ ಮಾಡುವಲ್ಲಿ ಇವರ ಸಹಕಾರವೂ ಇದೆ ಎಂದು ವ್ಯಂಗ್ಯವಾಡಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆಯ ಕಳಪೆ ಫಲಿತಾಂಶವನ್ನೇ ಆಧಾರವಾಗಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಚಾರವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಕರ್ನಾಟಕದಲ್ಲೂ ಕಾಂಗ್ರೆಸ್ ಗತಿ ಏನಾಗಲಿದೆ ಎಂಬ ಕುರಿತು ಪಕ್ಷದ ಹೈಕಮಾಂಡ್‌ಗೆ ರಾಜ್ಯ ನಾಯಕರು ರಹಸ್ಯ ಪತ್ರಗಳನ್ನು ಬರೆಯುತ್ತಿದ್ದಾರೆ ಎಂಬ ಮಾಹಿತಿ ರಾಜಕೀಯ ಪಡಸಾಲೆಯಲ್ಲಿ ಹರಿದಾಡುತ್ತಿದೆ ಎಂದು ಟ್ವೀಟ್ ಮಾಡಿದ್ದಾರೆ.

ಮೈಸೂರು ಮಿತ್ರ

ಭಾನುವಾರ 9 ಫೆಬ್ರವರಿ 2025

ದೆಹಲಿ ಸಿಎಂ ರೇಸ್‌ನಲ್ಲಿ ಮನೋಜ್ ತಿವಾರಿ



ನವದೆಹಲಿ, ಫೆ.8– ಖ್ಯಾತ ಭೋಜ್‌ಪುರಿ ಗಾಯಕ, ನಟ ಹಾಗೂ ವರ್ಣರಂಜಿತ ರಾಜಕಾರಣಿ ಮನೋಜ್ ತಿವಾರಿ ಅವರ ಹೆಸರು ದೆಹಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ರೇಸ್‌ನಲ್ಲಿ ಮುನ್ನೆಲೆಗೆ ಬಂದಿದೆ. ದೆಹಲಿಯಲ್ಲಿ 27 ವರ್ಷದ ಬಳಿಕ ಅಧಿಕಾರದ ಗದ್ದುಗೆ ಹಿಡಿಯುತ್ತಿರುವ ಬಿಜೆಪಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿರುವ ಹಾಗೂ ವರ್ಚಸ್ವಿ ಮುಖಂಡರೊಬ್ಬರ ಹುಡುಕಾಟದಲ್ಲಿದೆ. ಪೂರ್ವಾಂಚಲ ಮತದಾರರ ಬೆಂಬಲ ಹೊಂದಿರುವ ಮನೋಜ್ ತಿವಾರಿಗೆ ಸಿಎಂ ಹುದ್ದೆ ಒಲಿಯುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮೂರನೇ ಪುಟದಿಂದ

ದೂರದೃಷ್ಟಿ, ವಿಶ್ವಾಸದ ಜಯ

'ಭ್ರಷ್ಟಾಚಾರ ಮತ್ತು ರಾಜಕೀಯದಲ್ಲಿ ಸುಳ್ಳನ್ನು' ಸಹಿಸುವುದಿಲ್ಲ ಎಂಬುದನ್ನು ಸಾಬೀತುಪಡಿಸಿದೆ ಎಂದರು. ಇದೇ ವೇಳೆ ಆಮ್ ಆದ್ಮಿ ಪಕ್ಷಕ್ಕೆ ಕುಟುಕಿದ ಮೋದಿ, ದಿಲ್ಲಿಯ ಜನರು ಆಡಳಿತವನ್ನು ಬಯಸುತ್ತಾರೆಯೇ ಹೊರತು ನಟನೆಯನ್ನಲ್ಲ ಎಂದು ಹೇಳಿದರು. ದಿಲ್ಲಿಯ ಯುವಕರು ಮತ್ತು 21ನೇ ಶತಮಾನದಲ್ಲಿ ಜನಿಸಿದವರು ದಿಲ್ಲಿಯಲ್ಲಿ ಮೊದಲ ಬಾರಿಗೆ ಬಿಜೆಪಿಯ ಆಡಳಿತವನ್ನು ನೋಡಲಿದ್ದಾರೆ. ಬಿಜೆಪಿಯ ಡಬಲ್ ಎಂಜಿನ್ ಸರ್ಕಾರದ ಮೇಲೆ ಭಾರತೀಯರು ನಂಬಿಕೆ ಇಟ್ಟಿದ್ದಾರೆ. ಎಲ್ಲರೊಂದಿಗೆ ಎಲ್ಲರ ಅಭಿವೃದ್ಧಿ, ಪೂರ್ತಿ ದಿಲ್ಲಿಯ ಅಭಿವೃದ್ಧಿಯ ಗ್ಯಾರಂಟಿಯನ್ನು ನಾನು ದಿಲ್ಲಿಯ ಜನತೆಗೆ ನೀಡುತ್ತೇನೆ ಎಂದು ಭರವಸೆ ನೀಡಿದರು. ಲೋಕಸಭೆಯ ನಂತರ ನಾವು ಹರಿಯಾಣದಲ್ಲಿ ಗೆದ್ದಿದ್ದು, ನಂತರ ಮಹಾರಾಷ್ಟ್ರದಲ್ಲಿ ನಾವು ಹೊಸ ದಾಖಲೆ ಬರೆದಿದ್ದೇವೆ. ಇದೀಗ ದಿಲ್ಲಿಯಲ್ಲಿ ಐತಿಹಾಸಿಕ ಜಯ ಸಾಧಿಸಿದ್ದೇವೆ ಎಂದು ಅವರು ಅಭಿಪ್ರಾಯಪಟ್ಟರು. ಒಂದು ಕಾಲದಲ್ಲಿ ಉತ್ತರ ಪ್ರದೇಶ ದಲ್ಲಿ ಕಾನೂನು–ಸುವ್ಯವಸ್ಥೆಯ ಪರಿಸ್ಥಿತಿಯು ಭಾರೀ ಸಮಸ್ಯೆಗಳನ್ನು ಉಂಟು ಮಾಡುತ್ತಿತ್ತು. ಅದನ್ನು ನಾವು ಸರಿ ಪಡಿಸಿದ್ದೇವೆ. ಮಹಾರಾಷ್ಟ್ರದಲ್ಲಿ ರೈತರು ಬರದಿಂದ ಬಳಲುತ್ತಿದ್ದರು. ಅವರಿಗೆ ಸಹಾಯ ಮಾಡಲು ನಾವು ಯೋಜನೆ ಯನ್ನು ಜಾರಿಗೆ ತಂದೆವು ಎಂದು ಮೋದಿ ವಿವರಿಸಿದರು.

ನಾಯ್ಡು, ನಿತೀಶ್‌ಗೆ ಮೋದಿ ಮೆಚ್ಚುಗೆ: ಪ್ರಧಾನಿ ಮೋದಿಯವರು ತಮ್ಮ ವಿಜಯೋತ್ಸವ ಭಾಷಣದಲ್ಲಿ ಮಿತ್ರಪಕ್ಷಗಳಾದ ನಿತೀಶ್ ಕುಮಾರ್ ಮತ್ತು ಚಂದ್ರಬಾಬು ನಾಯ್ಡು ಅವರನ್ನೂ ಕೊಂಡಾಡಿದರು. ಬಿಹಾರ ಕಳಪೆ ಸ್ಥಿತಿಯಲ್ಲಿ ಇತ್ತು. ಅಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಬದಲಾವಣೆ ಕಾಣಿಸಿದೆ. ಅದೇ ರೀತಿ ಆಂಧ್ರ ಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ತಮ್ಮ ದಾಖಲೆಯನ್ನು ತೋರಿಸಿದ್ದಾರೆ. ಎನ್‌ಡಿಎ ಎಂದರೆ ಅಭಿವೃದ್ಧಿಯ ಗ್ಯಾರಂಟಿ, ಉತ್ತಮ ಆಡಳಿತದ ಗ್ಯಾರಂಟಿ. ಇದರಿಂದ ಬಡವರಿಗಷ್ಟೇ ಅಲ್ಲ ಮಧ್ಯಮ ವರ್ಗದವರಿಗೂ ಲಾಭವಿದೆ. ಮಧ್ಯಮ ವರ್ಗದವರು ಬಿಜೆಪಿ ಪಕ್ಷವನ್ನು ಬೆಂಬಲಿಸಿದ್ದಾರೆ. ವಿವಿಧ ವೃತ್ತಿಯ ಜನರು ಬಿಜೆಪಿಯೊಂದಿಗೆ ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ನಾವು ಯಾವಾಗಲೂ ಮಧ್ಯಮ ವರ್ಗಕ್ಕೆ ಆದ್ಯತೆ ನೀಡಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ವಿವರಿಸಿದರು.

ಬಿಜೆಪಿಗೆ ಶುಭವಾಗಲಿ...

ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಬಿಜೆಪಿ ದೆಹಲಿ ಜನರ ಆಶೋತ್ತರಗಳಿಗೆ ತಕ್ಕಂತೆ ಕೆಲಸ ಮಾಡಲಿದೆ ಎಂದು ನಾನು ನಿರೀಕ್ಷೆ ಇಟ್ಟುಕೊಂಡಿದ್ದೇನೆ. ಅದರಂತೆ ಆಪ್ ಕೂಡ ಪ್ರಬಲ ಪ್ರತಿಪಕ್ಷವಾಗಿ ಕೆಲಸ ಮಾಡಲಿದ್ದು, ಅಭಿವೃದ್ಧಿ ವಿಚಾರದಲ್ಲಿ ರಚನಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ ಎಂದು ಅರವಿಂದ್ ಕೇಜ್ರಿವಾಲ್ ಇದೇ ವೇಳೆ ಭರವಸೆ ನೀಡಿದ್ದಾರೆ. ನಾವು ಕಳೆದ 10 ವರ್ಷಗಳಿಂದ ದೆಹಲಿಯಲ್ಲಿ ಉತ್ತಮ ಆಡಳಿತ ನೀಡಿದ್ದೇವು. ದೆಹಲಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇವು. ಪ್ರಮುಖವಾಗಿ ಸರ್ಕಾರಿ ಶಾಲೆಗಳ ಸ್ಥಿತಿಯನ್ನು ಬದಲಾಯಿಸುವಲ್ಲಿ ನಾವು ತುಂಬಾ ಶ್ರಮಿಸಿದ್ದೇವು. ಆದರೆ ದೆಹಲಿ ಮತದಾರರು ಈ ಬಾರಿ ಬಿಜೆಪಿ ಪರವಾಗಿ ನಿರ್ಣಯ ಮಾಡಿದ್ದಾರೆ. ನಾವು ಈ ಜನಾದೇಶಕ್ಕೆ ತಲೆಬಾಗುತ್ತೇವೆ. ಎಂದು ಅರವಿಂದ್ ಕೇಜ್ರಿವಾಲ್ ಹೇಳಿದ್ದಾರೆ.

ಬಿಜೆಪಿಗೆ ದೆಹಲಿ ಗದ್ದುಗೆ

ಅತಿಶಿ ಗೆಲುವಿನ ನಗೆ ಬೀರಿದ್ದಾರೆ. 2020ರಲ್ಲಿ ಇದೇ ಕ್ಷೇತ್ರ ದಿಂದ ಸ್ಪರ್ಧಿಸಿ ಅತಿಶಿ ಗೆದ್ದಿದ್ದರು. ಈ ಬಾರಿ ಬಿಜೆಪಿಯ ರಮೇಶ್ ಬಿಧುರಿ ಹಾಗೂ ಕಾಂಗ್ರೆಸ್‌ನ ಅಲ್ಕಾ ಲಂಬಾ ವಿರುದ್ಧ ಕಣಕ್ಕಿಳಿದಿದ್ದರು. ಬಿಜೆಪಿ ಅಭ್ಯರ್ಥಿ ಚುನಾವಣೆಯಲ್ಲಿ ಪ್ರಬಲ ಪೈಪೋಟಿ ನೀಡಿದ್ದರು.

ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿಯ ಭರ್ಜರಿ ಗೆಲುವು ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ಉನ್ನತ ನಾಯಕರ ಆಘಾತಕಾರಿ ಸೋಲುಗಳ ಹೊರತಾಗಿಯೂ ಮುಖ್ಯಮಂತ್ರಿ ಅತಿಶಿ ದಕ್ಷಿಣ ದೆಹಲಿಯ ಕಲ್ಕಾಜಿ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಎಎಪಿ ನಾಯಕರಾದ ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಜೈಲು ಸೇರಿದಾಗ, ಸರ್ಕಾರವನ್ನು ಅತಿಶಿ ಮುನ್ನಡೆಸಿದ್ದರು. ಕೇಜ್ರಿವಾಲ್ ಜೈಲಿಂದ ಹೊರಬಂದಾಗ ನಾಯಕಿ ಅತಿಶಿ ಅವರು ದೆಹಲಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಮಾಜಿ ಡಿಸಿಎಂ ಮನೀಶ್ ಸಿಸೋಡಿಯಾ ಹೀನಾಯ ಸೋಲನನುಭವಿಸಿದ್ದಾರೆ. ಜಂಗ್‌ಪುರ ಕ್ಷೇತ್ರದಲ್ಲಿ ಸಿಂಗ್ ಸಮುದಾಯ ಪ್ರಾಬಲ್ಯ ಹೊಂದಿದೆ. ಅದೇ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ ಬಿಜೆಪಿ ರೂಪಿಸಿದ್ದ ತಂತ್ರಗಾರಿಕೆ ಕೆಲಸ ಮಾಡಿದೆ. ಇದೇ ಮೊದಲ ಬಾರಿಗೆ ಸ್ಪರ್ಧಿಸಿ ತರ್ವಿಂದರ್ ಸಿಂಗ್ ಗೆದ್ದು ಬೀಗಿದ್ದಾರೆ. ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಮನೀಶ್ ಸಿಸೋಡಿಯಾ ಜೈಲು ಪಾಲಾಗಿದ್ದರು. ಹಲವು ತಿಂಗಳು ಜೈಲಲ್ಲಿ ಕಳೆದು ನಂತರ ರಿಲೀಸ್ ಆಗಿದ್ದರು. ಕೇಜ್ರಿವಾಲ್ ನೇತೃತ್ವದ ಸರ್ಕಾರದಲ್ಲಿ ಗೃಹ, ಹಣಕಾಸು, ಶಿಕ್ಷಣ, ಆರೋಗ್ಯ, ಲೋಕೋಪಯೋಗಿ ಇಲಾಖೆ, ಕೈಗಾರಿಕೆ ಮತ್ತು ಪ್ರವಾಸೋದ್ಯಮ ಸೇರಿದಂತೆ 18 ಪ್ರಮುಖ ಖಾತೆಗಳನ್ನು ಸಿಸೋಡಿಯಾ ನಿರ್ವಹಿಸುತ್ತಿದ್ದರು. ಸರ್ಕಾರವನ್ನು ತಮ್ಮ ಹೆಗಲ ಮೇಲೆ ಹೊತ್ತು ಯಶಸ್ವಿಯಾಗಿ ನಿರ್ವಹಿಸಿದ್ದರು. ಕೇಜ್ರಿವಾಲ್ ಅವರ ಅತ್ಯಂತ ವಿಶ್ವಾಸಾರ್ಹ ಸಹಾಯಕರೂ ಆಗಿದ್ದರು.

'ಸ್ವತಂತ್ರ'ರ ಸಮಪಾಲು

(ಸಾಮಾನ್ಯ ಕ್ಷೇತ್ರ, 3,960), ಸಿ.ಚಂದ್ರಶೇಖರ (ಹಿಂದುಳಿದ ವರ್ಗ ಪ್ರವರ್ಗ–ಎ ಕ್ಷೇತ್ರ 4,412), ಎಂ.ಪ್ರಮೀಳಾ (ಮಹಿಳಾ ಮೀಸಲು ಕ್ಷೇತ್ರ, 2,993) ಗೆಲುವು ಸಾಧಿಸಿದ್ದಾರೆ. ಹಿಂದುಳಿದ ವರ್ಗ ಬಿ ಕ್ಷೇತ್ರಕ್ಕೆ ಟಿ.ರವಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಕೆಆರ್‌ಎಸ್ ರಸ್ತೆಯಲ್ಲಿರುವ ಶ್ರೀ ಉತ್ತರಾದಿ ಮಠದ ಶ್ರೀ ಸತ್ಯಪ್ರಮೋದ ಕಲ್ಯಾಣ ಮಂಟಪದಲ್ಲಿ (ಶ್ರೀ ಆಂಜನೇಯ ದೇವಸ್ಥಾನ) ಇಂದು ಬೆಳಗ್ಗೆ 9ಕ್ಕೆ ಆರಂಭಗೊಂಡ ಮತ ಎಣಿಕೆ ಪ್ರಕ್ರಿಯೆ ಸಂಜೆಯವರೆಗೂ ನಡೆಯಿತು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಜ.19ರಂದು ಚುನಾವಣೆಯ ಮತದಾನ ಪ್ರಕ್ರಿಯೆ ನಡೆದಿತ್ತು. ಸಾಮಾನ್ಯವಾಗಿ ಮತದಾನದ ದಿನದಂದೇ ಎಣಿಕೆ ನಡೆದು ಫಲಿತಾಂಶ ಪ್ರಕಟಿಸುವ ವಾಡಿಕೆ ಇದೆ. ಆದರೆ ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಅಂದು ಮತ ಎಣಿಕೆ ನಡೆದಿರಲಿಲ್ಲ. ಮತದಾನಕ್ಕೆ ತಮ್ಮನ್ನು ಅನರ್ಹಗೊಳಿಸಿದ್ದರ ವಿರುದ್ಧ ಬ್ಯಾಂಕ್‌ನ ಕೆಲ ಸದಸ್ಯರು ಹೈಕೋರ್ಟ್ ಮೊರೆ ಹೋಗಿದ್ದರು. ಈ ಸಂಬಂಧ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಇವರಿಗೂ ಮತದಾನಕ್ಕೆ ಅವಕಾಶ ಕಲ್ಪಿಸಿ, ಮುಂದಿನ ಆದೇಶದವರೆಗೆ ಫಲಿತಾಂಶ ಪ್ರಕಟಿಸದಂತೆ ಮಧ್ಯಂತರ ಆದೇಶ ನೀಡಿತ್ತು. ಇದೀಗ ಎಲ್ಲಾ ಮತಗಳನ್ನು ಎಣಿಕೆ ಮಾಡಿ, ಫಲಿತಾಂಶ ಪ್ರಕಟಿಸುವಂತೆ ಹೈಕೋರ್ಟ್ ಆದೇಶಿಸಿತ್ತು. ಅದರಂತೆ ಇಂದು ಪ್ರಕ್ರಿಯೆ ನಡೆಸಿ, ಫಲಿತಾಂಶ ಪ್ರಕಟಿಸಲಾಯಿತು. ಒಟ್ಟು 39 ಅಭ್ಯರ್ಥಿಗಳು ಕಣದಲ್ಲಿದ್ದರು. ಸುಮಾರು 13,500 ಮತದಾರರ ಪೈಕಿ 10,721 ಮಂದಿ ಮತ ಚಲಾಯಿಸಿದ್ದರು. ಗೆದ್ದ ಹಲವರು ಪುನರಾಯ್ಕೆಯಾಗಿದ್ದಾರೆ. ಸಹಕಾರ ಇಲಾಖೆಯ ಹಿರಿಯ ನಿರೀಕ್ಷಕರೂ ಆದ ಚುನಾವಣಾಧಿಕಾರಿ ಬಿ.ರಾಜು, ಮತ ಎಣಿಕೆ ಪ್ರಕ್ರಿಯೆ ನಡೆಸಿ ಫಲಿತಾಂಶ ಪ್ರಕಟಿಸಿದರು. ಜಯಭೇರಿ ಭಾರಿಸಿದವರನ್ನು ಬೆಂಬಲಿಗರು ಹಾರ ತುರಾಯಿ ಹಾಕಿ ಅಭಿನಂದಿಸಿ ಸಂಭ್ರಮಿಸಿದರು.

ದೆಹಲಿ ಸೋಲಿಗೆ ಕಾರಣ

ಹಗರಣದಲ್ಲಿ ಭಾಗಿಯಾದರು ಎಂದು ಕೇಜ್ರಿವಾಲ್ ಅವರ ಆಪ್ ಪತನವನ್ನು ಎತ್ತಿ ತೋರಿಸಿದ ಹಜಾರೆ, ಜನರು ಕೇಜ್ರೀವಾಲ್ ವ್ಯಕ್ತಿತ್ವದ ಬಗ್ಗೆ ಮಾತನಾಡಿದ್ದನು ನೋಡಿದ್ದಾರೆ, ಮದ್ಯ ಹಗರಣದಲ್ಲಿ ಭಾಗಿಯಾಗಿದ್ದನ್ನೂ ನೋಡಿದ್ದಾರೆ. ರಾಜಕೀಯದಲ್ಲಿ ಆರೋಪಗಳು ಸಾಮಾನ್ಯ, ಆದರೆ ಒಬ್ಬರು ತಮ್ಮ ಮುಗ್ಧತೆಯನ್ನು ಸಾಬೀತುಪಡಿಸಬೇಕು. ಸತ್ಯವು ಸತ್ಯವಾಗಿ ಉಳಿಯುತ್ತದೆ ಎಂದಿದ್ದಾರೆ. ಹಜಾರೆ ಅವರು ಆರಂಭದಿಂದಲೂ ಎಎಪಿಯಿಂದ ದೂರವಿರಲು ನಿರ್ಧರಿಸಿದ್ದರು ಎಂದು ಬಹಿರಂಗಪಡಿಸಿದರು. ಸಭೆ ನಡೆದಾಗ, ನಾನು ಪಕ್ಷದ ಭಾಗ ವಾಗಿರದಿರಲು ನಿರ್ಧರಿಸಿದೆ, ಮತ್ತು ಆ ದಿನದಿಂದ ನಾನು ದೂರ ಉಳಿದಿದ್ದೇನೆ ಎಂದು ಅವರು ಕೇಜ್ರಿವಾಲ್ ಅವರ ರಾಜಕೀಯ ಪ್ರಯಾಣದಿಂದ ತಮ್ಮ ಪ್ರತ್ಯೇಕತೆಯನ್ನು ತಿಳಿಸಿದ್ದಾರೆ.

ಮಿನಿ ಏರ್‌ಪೋರ್ಟ್ ನಿರ್ಮಾಣ

ಎಂದು ಹೇಳಿದರು. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಯೊಬ್ಬರು ಮಾತನಾಡಿ, ಈ ಐದು ಏರ್‌ಸ್ಟ್ರಿಪ್‌ಗಳಿಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದ್ದು, ವಿಭಿನ್ನ ಹಂತಗಳಲ್ಲಿವೆ ಎಂದು ತಿಳಿಸಿದ್ದಾರೆ. ಉಡಾನ್–ಪ್ರಾದೇಶಿಕ ಸಂಪರ್ಕ ಯೋಜನೆಯು ಮಾರುಕಟ್ಟೆ ಆಧಾರಿತವಾಗಿದೆ. ವಿಮಾನಯಾನ ಮಾರ್ಗ, ಸಂಪರ್ಕ ಸ್ಥಳಗಳು, ನಿರ್ದಿಷ್ಟ ಹಾರಾಟ ಮಾರ್ಗಗಳ ವಿಚಾರವಾಗಿ ಏರ್‌ಲೈನ್ ಆಪರೇಟರ್‌ಗಳ ಕಾರ್ಯಸಾಧ್ಯತಾ ಸ್ಥಿತಿಗತಿ ಆಧರಿಸಿ ನಿಯಮಿತವಾಗಿ ಬಿಡ್ಡಿಂಗ್ ಸುತ್ತುಗಳು ನಡೆಯಲಿವೆ. ಹಾಗೆಂಯೇ ವಿಮಾನಯಾನ ಸೇವೆ ಮೇಲ್ದರ್ಜೆಗೇರಿಸುವುದು, ನವೀಕರಿಸುವುದು ಸೂಕ್ತ ಬಿಡ್ ಹಾಗೂ ಆಯ್ದ ಏರ್‌ಲೈನ್ ಆಪರೇಟರ್‌ಗಳಿಗೆ ಹಂಚಿಕೆ ಮಾಡುವುದರ ಮೇಲೆ ಅವಲಂಬಿತವಾಗಿರಲಿದೆ.

ಮೈಸೂರಲ್ಲಿ ಈಶಾನ್ಯ ಭಾರತದ ವಿದ್ಯಾರ್ಥಿಗಳ ಒಳಗೊಂಡ 'ರಾಷ್ಟ್ರೀಯ ಏಕಾತ್ಮತಾ ಯಾತ್ರೆ'ಗೆ ಚಾಲನೆ

● ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ● ಈಶಾನ್ಯ ರಾಜ್ಯಗಳು ಭಾರತದ ಹೃದಯವಿದ್ದಂತೆ; ಬಣ್ಣನೆ

ಐದೂವರೆ ಲಕ್ಷ ಕೋಟಿಗೂ ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳು...!

ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರವು ಈಶಾನ್ಯ ರಾಜ್ಯಗಳ ಶ್ರೇಯೋವೃದ್ಧಿಗೆ ಸುಮಾರು ಐದೂವರೆ ಲಕ್ಷ ಕೋಟಿಗೂ ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಪೂರ್ವದತ್ತ ನೋಡಿ (Look east) ನೀತಿ ಅಡಿಯಲ್ಲಿ ಮೋದಿ ಅವರು ಈಶಾನ್ಯ ರಾಜ್ಯಗಳಾದ ಅಸ್ಸಾಂ, ಅರುಣಾಚಲ ಪ್ರದೇಶ, ಮೇಘಾಲಯ, ಮಣಿಪುರ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರ ಅಭಿವೃದ್ಧಿಗೆ ಕಳೆದ ಎಪ್ಪತ್ತು ವರ್ಷಗಳಲ್ಲಿ ಕಂಡೂ ಕೇಳರಿಯದಷ್ಟು ಅಭಿವೃದ್ಧಿಗೆ ಒತ್ತು ಕೊಡುತ್ತಿದ್ದಾರೆ. ಈಶಾನ್ಯ ಭಾರತದ ರಾಜ್ಯಗಳ ಅಭಿವೃದ್ಧಿಗೆ ನರೇಂದ್ರ ಮೋದಿ ಅವರ ಸರ್ಕಾರ ಕಟಿಬದ್ಧವಾಗಿ ದುಡಿಯುತ್ತಿದೆ ಎಂದರು. ಈಶಾನ್ಯ ರಾಜ್ಯಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳನ್ನು ಗಮನವಿಟ್ಟು ಪರಿಶೀಲನೆ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿಯವರು ಸೂಚಿಸಿದ್ದಾರೆ. ಅದರಂತೆ ನಾನೂ ಕಳೆದ ವರ್ಷ ನಾಲ್ಕು ದಿನಗಳ ಕಾಲ ನಾಗಾಲ್ಯಾಂಡ್, ಅಸ್ಸಾಂ, ಅರುಣಾಚಲ ಪ್ರದೇಶ ಮತ್ತು ಮೇಘಾಲಯ ರಾಜ್ಯಗಳಿಗೆ ಭೇಟಿ ನೀಡಿದ್ದೆ. ಅಲ್ಲಿ ಬೃಹತ್ ಕೈಗಾರಿಕೆ ಸಚಿವಾಲಯದ ಅಧೀನದಲ್ಲಿರುವ ಕೈಗಾರಿಕೆಗಳ ಪ್ರಗತಿ ಪರಿಶೀಲನೆ ನಡೆಸುವುದರ ಜೊತೆಗೆ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದೇನೆ ಎಂದು ಹೇಳಿದರು.



ಮೈಸೂರಿನಲ್ಲಿ ಈಶಾನ್ಯ ಭಾರತದ ವಿದ್ಯಾರ್ಥಿಗಳ ಒಳಗೊಂಡ 'ರಾಷ್ಟ್ರೀಯ ಏಕಾತ್ಮತಾ ಯಾತ್ರೆ' ಕಾರ್ಯಕ್ರಮ ನಡೆಯಿತು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಂಸದ ಯದುವೀರ್, ಕಾಂಬೋಡಿಯ ದೇಶದ ಕಾನ್ಸುಲ್ ಜನರಲ್ ಕಾರ್ತಿಕ್ ತಲ್ಲಂ, ಎಬಿವಿಪಿ ರಾಷ್ಟ್ರೀಯ ಉಪಾಧ್ಯಕ್ಷ ಪ್ರೊ.ಮಂದ್ರಾ ಭಾನುಶೇರ್ ಮತ್ತಿತರರಿದ್ದರು.

ಮೈಸೂರು, ಫೆ.8(ಎಂಕೆ)– ವೈವಿಧ್ಯಮಯ ಸಂಸ್ಕೃತಿ, ಶ್ರೀಮಂತ ಸಂಪ್ರದಾಯವನ್ನೊಳಗೊಂಡ ಈಶಾನ್ಯ ರಾಜ್ಯಗಳು ಭಾರತದ ಒಂದು ಭಾಗವಲ್ಲ, ಭಾರತದ ಹೃದಯವಾಗಿವೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಸ್ಕ್ಯಾನ್ ರೇ ಟೆಕ್ನಾಲಜೀಸ್ (ಹೆಲ್ತ್‌ಕೇರ್) ಆವರಣದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷದ್ ವತಿಯಿಂದ ಆಯೋಜಿಸಿದ್ದ ಈಶಾನ್ಯ ಭಾರತದ ವಿದ್ಯಾರ್ಥಿಗಳ ಜೀವಾನುಭವ ಶಿಬಿರ(ಎಸ್‌ಇಐಎಲ್)ದ ರಾಷ್ಟ್ರೀಯ ಏಕಾತ್ಮತಾ ಯಾತ್ರೆ–2025 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈಶಾನ್ಯ ರಾಜ್ಯಗಳು(ಅರುಣಾಚಲ ಪ್ರದೇಶ, ಅಸ್ಸಾಂ, ಮೇಘಾಲಯ, ಸಿಕ್ಕಿಂ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂ, ತ್ರಿಪುರ) ಉಸಿರುಕಟ್ಟುವ ಭೂದೃಶ್ಯ, ವೈವಿಧ್ಯಮಯ ಸಂಸ್ಕೃತಿ ಹಾಗೂ ಶ್ರೀಮಂತ ಸಂಪ್ರದಾಯಗಳನ್ನು ಒಳಗೊಂಡಿವೆ ಎಂದು ಬಣ್ಣಿಸಿದರು.

ಮಣಿಪುರದ ಮೊಯಿರಾಂಗ್‌ನಲ್ಲಿ ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ ಭಾರತೀಯ ರಾಷ್ಟ್ರೀಯ ಸೇನೆ (ಐಎನ್‌ಎ) 1944ರಲ್ಲಿ ಸ್ವತಂತ್ರ ಭಾರತದ ಧ್ವಜವನ್ನು ಹಾರಿಸಿತು. ಈ ಪ್ರದೇಶವು ಭಾರತದ ಚಹಾ ಉದ್ಯಮದ ಬೆನ್ನೆಲುಬಾಗಿದೆ. ಪರಸ್ಪರ ಸಹಬಾಳ್ವೆಯಿಂದ ಜೊತೆಗಿರುವ 166 ಜನಾಂಗೀಯ ಗುಂಪುಗಳ ನೆಲೆಯಾಗಿದೆ. ಆದರೂ ಭೌಗೋಳಿಕ ಪ್ರತ್ಯೇಕತೆ, ಅಕ್ರಮ ಒಳನುಸುಳುವಿಕೆ, ನೈಸರ್ಗಿಕ ವಿಕೋಪಗಳು ಮತ್ತು ಮೂಲಸೌಕರ್ಯ, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯಲ್ಲಿ ಈಶಾನ್ಯ ರಾಜ್ಯಗಳು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದ್ದರೂ ದೇಶಕ್ಕೆ ಅಪಾರ ಕೊಡುಗೆ ನೀಡಿವೆ. ಆದರೆ, ಭಾರತದ ಉಳಿದ

1996ರಲ್ಲಿ ಹೆಚ್.ಡಿ.ದೇವೇಗೌಡರು ಪ್ರಧಾನಿಯಾಗಿ ಈಶಾನ್ಯ ಭಾಗದ ಎಲ್ಲಾ ರಾಜ್ಯಗಳಿಗೆ ಭೇಟಿ ನೀಡಿದ್ದರು. ಅಲ್ಲಿಯವರೆಗೂ ಹಿಂದಿನ ಸರ್ಕಾರಗಳು ಈಶಾನ್ಯ ರಾಜ್ಯಗಳನ್ನು ಕಡೆಗಣಿಸಿದ್ದವು. ಈ ಕಾರಣದಿಂದ ಆರು ದಿನಗಳ ಕಾಲ ಆ ರಾಜ್ಯಗಳಲ್ಲಿ ನಿರಂತರ ಪ್ರವಾಸ ಕೈಗೊಂಡಿದ್ದ ದೇವೇಗೌಡರು, ಅಂತಿಮವಾಗಿ 7,503.51 ಕೋಟಿಗಳಷ್ಟು ಬೃಹತ್ ಪ್ಯಾಕೇಜ್ ಘೋಷಿಸಿದರು. ಕೂಡಲೇ 6,100 ಕೋಟಿಯಷ್ಟು ಹಣವನ್ನು ಬಿಡುಗಡೆ ಮಾಡಿದರು. ಈಶಾನ್ಯ ರಾಜ್ಯಗಳಲ್ಲಿ ಅಭಿವೃದ್ಧಿ ಪರ್ವ ಶುರುವಾಗಿದ್ದೇ ಅಲ್ಲಿಂದ.
– ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವರು

ಭಾಗಗಳಲ್ಲಿನ ಅನೇಕರ ಮನಸ್ಸಿನಲ್ಲಿ ದೂರ ಉಳಿದಿವೆ. ಇದು ಬದಲಾಗಬೇಕು ಎಂದು ಮನವಿ ಮಾಡಿದರು.

ಏಕ ಭಾರತ ಪರಿಕಲ್ಪನೆ ಅಡಿಯಲ್ಲಿ ಇಡೀ ದೇಶವನ್ನು ಒಗ್ಗಟ್ಟಾಗಿಸಲು ಇದೊಂದು ಅತ್ಯುತ್ತಮ ಕಾರ್ಯಕ್ರಮ. ಭಾರತ ವಿವಿಧತೆಯಲ್ಲಿ ಏಕತೆಯನ್ನು ಅಂತರ್ಗತ ಮಾಡಿಕೊಂಡಿರುವ ಅನನ್ಯ ರಾಷ್ಟ್ರ. ಈಶಾನ್ಯದಲ್ಲಿಯೇ ಅನೇಕ ಬುಡಕಟ್ಟುಗಳು, ಅನೇಕ ಭಾಷೆಗಳು, ಅನೇಕ ಸಂಸ್ಕೃತಿ, ಆಚಾರ–ವಿಚಾರಗಳು ಅಡಗಿವೆ. ಅವರೆಲ್ಲರೂ ಒಬ್ಬರನ್ನು ಒಬ್ಬರು ಗೌರವಿಸಿಕೊಂಡು ಸೌಹಾರ್ದವಾಗಿ ಜೀವನ ನಡೆಸುತ್ತಿದ್ದಾರೆ. ಭಾರತದ ಶ್ರೇಷ್ಠತೆ ಅಡಗಿರುವುದೇ ಇಲ್ಲಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೆ ಈಶಾನ್ಯ ರಾಜ್ಯಗಳು ಭಾರತೀಯ ಉಕ್ಕು ಕ್ಷೇತ್ರದ ಬೆನ್ನೆಲುಬಾಗಿದ್ದು, ಆ ಭಾಗದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ಕೊಡಲಾಗುವುದು ಹಾಗೂ ಉಕ್ಕು ಕ್ಷೇತ್ರದ ವಿಸ್ತರಣೆಗೆ ಪ್ರಾಮುಖ್ಯತೆ ಕೊಡಲಾಗುವುದು ಎಂದು ಭರವಸೆ ನೀಡಿದರು.

ಈಶಾನ್ಯ ಸಂಸ್ಕೃತಿ ಅನಾವರಣ: ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಪಾಲ್ಗೊಂಡಿದ್ದ ಈಶಾನ್ಯ ರಾಜ್ಯಗಳ ವಿದ್ಯಾರ್ಥಿಗಳು ಸಾಂಪ್ರದಾಯಿಕ ಧಿರಿಸು, ಉಡುಪುಗಳನ್ನು ತೊಟ್ಟು ಎಲ್ಲರ ಗಮನ ಸೆಳೆದರು. ಅಲ್ಲದೆ ಶಿಬಿರದ ಅನುಭವಗಳನ್ನು ಹಂಚಿಕೊಂಡರು. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಬೋಡಿಯ ದೇಶದ ಕಾನ್ಸುಲ್ ಜನರಲ್ ಕಾರ್ತಿಕ್ ತಲ್ಲಂ, ಎಬಿವಿಪಿ ರಾಷ್ಟ್ರೀಯ ಉಪಾಧ್ಯಕ್ಷ ಪ್ರೊ.ಮಂದ್ರಾ ಭಾನುಶೇರ್, ರಾಜ್ಯ ದಕ್ಷಿಣ ವಲಯ ಅಧ್ಯಕ್ಷ ಡಾ.ಎಂ.ಎನ್.ರವಿ, ಸ್ವಾಗತ ಸಮಿತಿ ಅಧ್ಯಕ್ಷ ಹಾಗೂ ಸ್ಕ್ಯಾನ್ ರೇ ಟೆಕ್ನಾಲಜಿ ಎಂಡಿ ವಿಶ್ವಪ್ರಸಾದ್ ಆಳ್ವಾ, ಉಪಾಧ್ಯಕ್ಷ ಪ್ರೊ.ಎಂ.ಆರ್. ಗಂಗಾಧರ್, ಪ್ರಧಾನ ಕಾರ್ಯದರ್ಶಿ ಡಾ.ಚಂದ್ರಶೇಖರ್, ಮಿಜೋರಂ, ಮೇಘಾಲಯ, ನಾಗಾಲ್ಯಾಂಡ್‌ನ ಸಂಘಟನಾ ಕಾರ್ಯದರ್ಶಿ ಮಂಜುನಾಥ ಮಂಗಳಗಿ ಮತ್ತಿತರರಿದ್ದರು.

ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಕುರಿತ 'ರಂಗಾಭರಣ ಕದಂಬ' ಕೃತಿ ಬಿಡುಗಡೆ



ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರನ್ನು ಕುರಿತಾದ 'ರಂಗಾಭರಣ ಕದಂಬ' ಕೃತಿ ಶನಿವಾರ ಬಿಡುಗಡೆಗೊಂಡಿತು.

ಮೈಸೂರು, ಫೆ.8(ಎಸ್‌ಬಿಡಿ)– ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರನ್ನು ಕುರಿತಾದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಸಂಪಾದಕತ್ವದ 'ರಂಗಾಭರಣ ಕದಂಬ' ಕೃತಿ ಶನಿವಾರ ಬಿಡುಗಡೆಗೊಂಡಿತು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಸಹಯೋಗದಲ್ಲಿ ನಗರದ ರೋಟರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಈ ಕೃತಿಯನ್ನು ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಕದಂಬ ಅವರ ಹೆಸರನ್ನು ನಾನು ಬಾಲ್ಯದಿಂದಲೂ ಕೇಳಿದ್ದೇನೆ. ಹಿರಿಯ ರಂಗಕರ್ಮಿಗಳಾದ ರಾಮೇಶ್ವರಿ ವರ್ಮ, ನ.ರತ್ನ ಹಾಗೂ ರಾಜಶೇಖರ ಕದಂಬ ಅವರು ಮೈಸೂರಿನ ಸಾಕ್ಷಿಪ್ರಜ್ಞೆಯಾಗಿದ್ದಾರೆ. ಕದಂಬ ಅವರು ಇಳಿವಯಸ್ಸಿನಲ್ಲೂ ಕ್ರಿಯಾಶೀಲರಾಗಿ ರಂಗಭೂಮಿ ದಾಖಲೀಕರಣಗೊಳಿಸುವ ಕೆಲಸ ಮಾಡುತ್ತಿದ್ದಾರೆ. ಸಿನಿಮಾ ಹಾಗೂ ನಾಟಕ ರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಕದಂಬ ಅವರಿಗೆ ವಿನಯವೇ ದೊಡ್ಡ ಆಭರಣ. ಯಾವುದೇ ಹಮ್ಮು–ಬಿಮ್ಮಿಲ್ಲದೆ ಎಲ್ಲರೊಂದಿಗೆ ಆತ್ಮೀಯವಾಗಿ ಬೆರೆಯುತ್ತಾರೆ. ಈ ಮೂಲಕ ಅವರು ಯುವ ಸಮೂಹವನ್ನು ಪ್ರಭಾವಿಸಿದ್ದಾರೆ ಎಂದು ಬಣ್ಣಿಸಿದರು.

ನಿವೃತ್ತ ಪ್ರಾಧ್ಯಾಪಕ ಡಾ.ಸಿ.ನಾಗಣ್ಣ ಕೃತಿ ಕುರಿತು ಮಾತನಾಡಿ, ಕದಂಬ ಅವರನ್ನು ಹವ್ಯಾಸಿ ರಂಗಭೂಮಿಯ ಭೀಷ್ಮ ಎಂದೇ ಕರೆಯಬಹುದು. ಎಲ್ಲರೊಂದಿಗೆ ಬೆರೆಯುವಂತಹ ಕದಂಬ ಅವರ ಸ್ವಭಾವವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಈ ಕಿರುಹೊತ್ತಿಗೆಯಲ್ಲಿ ಮಹನೀಯರಾದ ಕುವೆಂಪು, ಡಾ.ರಾಜಕುಮಾರ್, ದೇಜಗೌ ಅವರ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ. ಸಿನಿಮಾರಂಗದಲ್ಲೇ ಕದಂಬ ಅವರಿಗೆ ಸಾಕಷ್ಟು ಅವಕಾಶಗಳಿದ್ದವು. ಅವರು ಪೂರ್ಣಪ್ರಮಾಣದಲ್ಲಿ ಆ ರಂಗದಲ್ಲೇ ತೊಡಗಿಸಿಕೊಳ್ಳಬಹುದಿತ್ತು. ಆದರೆ ರಂಗಭೂಮಿ ಮೇಲಿನ ಪ್ರೀತಿ ಹಾಗೂ ಬಾಂಧವ್ಯದಿಂದ ಇಲ್ಲಿಯೇ ಸಕ್ರಿಯರಾಗಿದ್ದಾರೆ ಎಂದು ತಿಳಿಸಿದರು. ಇದೇ ವೇಳೆ ಹಿರಿಯ ರಂಗಕರ್ಮಿ ಡಾ.ರಾಜಶೇಖರ ಕದಂಬ ಅವರನ್ನು ಅಭಿನಂದಿಸಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು, ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಎಂ. ಚಂದ್ರಶೇಖರ, ಡಾ.ವೈ.ಡಿ.ರಾಜಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯ ಕಾರ್ಯದರ್ಶಿ ಸೂಚನೆ ಹಿನ್ನೆಲೆ

ಮೈಸೂರು ತಾಲೂಕು ವಿವಿಧ ಆಸ್ಪತ್ರೆಗೆ ಎಡಿಸಿ ದಿಢೀರ್ ಭೇಟಿ; ಪರಿಶೀಲನೆ

ಮೈಸೂರು, ಫೆ.8(ಎಸ್‌ಬಿಡಿ)– ಮೈಸೂರು ತಾಲೂಕು ಉಸ್ತುವಾರಿ ಅಧಿಕಾರಿಯೂ ಆಗಿರುವ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಶನಿವಾರ ತಾಲೂಕಿನ ಹಲವು ಸರ್ಕಾರಿ ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅವರು ನಗರದ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಪರಿಶೀಲನೆ ನಡೆಸಿದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನದ ಮೇರೆಗೆ ಸರ್ಕಾರಿ ಆಸ್ಪತ್ರೆಗಳ ಸುಧಾರಣೆ ಹಾಗೂ ಸರ್ಕಾರಿ ಸೇವೆಗಳನ್ನು ರೋಗಿಗಳಿಗೆ ಸಮರ್ಪಕವಾಗಿ ತಲುಪಿಸುವ ನಿಟ್ಟಿನಲ್ಲಿ ಆಸ್ಪತ್ರೆಗಳ ಪರಿಶೀಲನೆ ನಡೆಸಿದ ಅವರು, ರೋಗಿಗಳು ಮತ್ತು ಅವರ ಕುಟುಂಬದವರೊಂದಿಗೆ ಚರ್ಚಿಸಿದರು. ಆಸ್ಪತ್ರೆಯಲ್ಲಿ ಲಭ್ಯವಿರುವ ಸೇವೆ, ಔಷಧೋಪಚಾರ, ಸ್ವಚ್ಛತೆ, ವೈದ್ಯರು ಹಾಗೂ ಸಿಬ್ಬಂದಿಗಳ ವರ್ತನೆ ಬಗ್ಗೆ ವಿಚಾರಿಸಿ, ತಿಳಿದುಕೊಂಡರು. ಈ ವೇಳೆ ವೈದ್ಯಾಧಿಕಾರಿಗಳು, ಶುಶ್ರೂಷಕರು ಹಾಗೂ ಸಿಬ್ಬಂದಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಿದರು. ವೈದ್ಯರನ್ನು ನಂಬಿರುವ ಸಾರ್ವಜನಿಕರಲ್ಲಿ ಅಪನಂಬಿಕೆ ಉಂಟಾಗದಂತೆ ಸೂಕ್ತ ಔಷಧೋಪಚಾರ ನೀಡಬೇಕು. ಜೊತೆಗೆ ಸರ್ಕಾರಿ ಸವಲತ್ತುಗಳನ್ನು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು. ಯಾವುದೇ ರೀತಿಯಲ್ಲೂ ದೂರುಗಳು ಕೇಳಿಬರದಂತೆ ನಿಗಾ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ನಗರದ ಗಿರಿಯಾಭೋವಿ ಪಾಳ್ಯ ಹಾಗೂ ನಜರ್‌ಬಾದ್ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಎಸ್‌ಎಂಟಿ ಮೆಟರ್ನಿಟಿ ಆಸ್ಪತ್ರೆ ಸೇರಿದಂತೆ ಹಲವು ಆಸ್ಪತ್ರೆಗಳಲ್ಲಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ತಾಲೂಕು ವೈದ್ಯಾಧಿಕಾರಿ ಡಾ.ಪುಟ್ಟತಾಯಮ್ಮ ಮತ್ತಿತರ ವೈದ್ಯಾಧಿಕಾರಿಗಳು ಹಾಜರಿದ್ದರು.

ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಮತ್ತೊಂದು ರೀತಿಯ ತಾಂತ್ರಿಕ ಸಮಸ್ಯೆ

ನೋಂದಣಿ ವಿವರ ಸ್ವಯಂಚಾಲಿತವಾಗಿ ನಮೂದಾಗುತ್ತಿಲ್ಲ!

● ಒಂದು ಸಮಸ್ಯೆ ಪರಿಹಾರವಾದರೆ ಮತ್ತೊಂದು ಹೆಗಲೇರಿದೆ ● ಕೈಚೆಲ್ಲಿ ಕುಳಿತಿರುವ ಕಂದಾಯ ಇಲಾಖೆ ● ತುರ್ತು ಇದ್ದವರಿಗೆ ತೀವ್ರ ತೊಂದರೆ

ಮೈಸೂರು, ಫೆ.8(ಬಿಎಲ್‌ಯು)– ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಒಂದಲ್ಲ ಒಂದು ಸಮಸ್ಯೆ ಕಂಡು ಬರುತ್ತಲೇ ಇದೆ. ಕಾವೇರಿ 2.0 ತಾಂತ್ರಿಕ ಸಮಸ್ಯೆ ಪರಿಹಾರವಾದರೂ ಮತ್ತೊಂದು ರೀತಿಯ ಸಮಸ್ಯೆ ಕಂದಾಯ ಇಲಾಖೆ ಅಧಿಕಾರಿಗಳನ್ನು ಬೆಂಬಿಡದಂತೆ ಕಾಡುತ್ತಿದೆ. ತುರ್ತು ಹಾಗೂ ಸಮರ್ಪಕವಾಗಿ ಕೆಲಸ ಆಗದ ಹಿನ್ನೆಲೆಯಲ್ಲಿ ಸಾರ್ವಜನಿಕರು ಸಬ್ ರಿಜಿಸ್ಟ್ರಾರ್ ಕಚೇರಿ ಅಧಿಕಾರಿಗಳು ಹಾಗೂ ನೌಕರರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಕಳೆದ ಹತ್ತು ದಿನದ ಹಿಂದೆ ಕಾವೇರಿ 2.0 ಸಾಫ್ಟ್‌ವೇರ್ ಅನ್ನು ಹ್ಯಾಕ್ ಮಾಡಿದ ಹಿನ್ನೆಲೆಯಲ್ಲಿ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಉಪ ನೋಂದಣಾಧಿಕಾರಿ ಕಚೇರಿಯ ಎಲ್ಲಾ ಕಾರ್ಯಗಳು ಸ್ಥಗಿತಗೊಂಡಿತ್ತು. ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಆದಾಯ ನಷ್ಟವಾಗುವುದರ ಜೊತೆಗೆ ಇದನ್ನೇ ಆಶ್ರಯಿಸಿರುವ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಭಾರಿ ಪೆಟ್ಟು ಬಿದ್ದಿತು.

ತಾಂತ್ರಿಕ ತಜ್ಞರ ಜೊತೆ ಸಮಸ್ಯೆ ಪರಿಹಾರಕ್ಕೆ ಮುಂದಾದ ಸರ್ಕಾರದ ಇ–ಆಡಳಿತ ಕಾವೇರಿ 2.0 ಸಾಫ್ಟ್‌ವೇರ್‌ಗೆ ದಾಳಿ ಮಾಡಿದ್ದ ಆ್ಯಪ್ ಮುಕ್ತ ಮಾಡಿತ್ತು. ತರುವಾಯ ಕಾವೇರಿ 2.0 ತಂತ್ರಾಂಶವನ್ನು ಪುನರ್ ಸ್ಥಾಪಿಸಲಾಗಿತ್ತು. ಇನ್ನೇನು ಸಮಸ್ಯೆ ಪರಿಹಾರವಾಯಿತಲ್ಲ ಎಂದು ನಿಟ್ಟುಸಿರು ಬಿಡುತ್ತಲೆ ಈಗ ಮತ್ತೊಂದು ರೀತಿಯ ತಾಂತ್ರಿಕ ಸಮಸ್ಯೆ ಎದುರಾಗಿದೆ.

ಆಸ್ತಿ ನೋಂದಣಿ, ವಿವಾಹ ನೋಂದಣಿ ಸೇರಿದಂತೆ ಎಲ್ಲಾ ನೋಂದಣಿ ಸಬ್ ರಿಜಿಸ್ಟ್ರಾರ್ ಕಚೇರಿಯ ಕಾವೇರಿ 2.0ನಲ್ಲಿ ನೆರವೇರುತ್ತದೆ. ಆದರೆ ನೋಂದಣಿ ವಿವರ ಸ್ವಯಂ ಚಾಲಿತವಾಗಿ ಆರ್‌ಟಿಸಿ, ಸರ್ವೆ, ಖಾತಾಗೆ ವರ್ಗಾವಣೆಯಾಗಿ ಅಲ್ಲಿ ನಮೂದಾಗಬೇಕು. ಅಂದರೆ ಕಾವೇರಿಯಿಂದ ಹಾದು ಭೂಮಿ ಸಾಫ್ಟ್‌ವೇರ್‌ನಲ್ಲಿ ನಮೂದಾಗಬೇಕು.




ಸಬ್ ರಿಜಿಸ್ಟ್ರಾರ್ ಕಚೇರಿ ಕರ್ತವ್ಯ ಅವಧಿ ವಿಸ್ತರಣೆ

ಕಳೆದ ಒಂದು ವಾರದ ಹಿಂದೆ ಎದುರಾದ ತಾಂತ್ರಿಕ ಸಮಸ್ಯೆಯಿಂದ ನೋಂದಣಿ ಪ್ರಕ್ರಿಯೆ ನಡೆದಿರಲಿಲ್ಲ. ಇದರಿಂದ ನೋಂದಣಿ ಮಾಡಿಸುವವರ ಸಂಖ್ಯೆ ಹೆಚ್ಚಾಗಿದೆ. ಆದ ಕಾರಣ ಸಬ್ ರಿಜಿಸ್ಟ್ರಾರ್ ಕಚೇರಿಯ ಕಾರ್ಯ ನಿರ್ವಹಣೆ ಅವಧಿ ಹೆಚ್ಚಳ ಮಾಡಲಾಗಿದೆ. ಸಬ್ ರಿಜಿಸ್ಟ್ರಾರ್ ಕಚೇರಿ ಸಾಮಾನ್ಯ ದಿನಗಳಲ್ಲಿ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ಕಾರ್ಯ ನಿರ್ವಹಿಸುತ್ತಿತ್ತು. ಆದರೆ ಈಗ ಈ ಅವಧಿಯನ್ನು 6.30 ಗಂಟೆವರೆಗೆ ವಿಸ್ತರಣೆ ಮಾಡಲಾಗಿದೆ. ಕಂದಾಯ ಇಲಾಖೆಯ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿನ ಕಾವೇರಿ 2.0 ತಾಂತ್ರಿಕ ಸಮಸ್ಯೆ ಪರಿಹಾರವಾಗಿದೆ. ಇಲಾಖೆಯ ಕಾವೇರಿ 2.0 ಸಾಫ್ಟ್‌ವೇರ್‌ನಲ್ಲಿ ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲ. ಆದರೆ ಆಸ್ತಿ ಸೇರಿದಂತೆ ಇತರೆ ನೋಂದಣಿ ಆದ ನಂತರ ಅದರ ವಿವರ ಸ್ವಯಂ ಚಾಲಿತವಾಗಿ ಖಾತೆ, ಸರ್ವೆ ಮತ್ತು ಆರ್‌ಟಿಸಿಯಲ್ಲಿ ನಮೂದಾಗಬೇಕು. ಆದರೆ ಇದು ಬಹಳ ವಿಳಂಬವಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರು ಪ್ರಶ್ನೆ ಮಾಡುತ್ತಿದ್ದಾರೆ. ಶೀಘ್ರವೇ ಈ ತಾಂತ್ರಿಕ ಸಮಸ್ಯೆಯನ್ನು ಕೂಡ ಪರಿಹಾರ ಮಾಡಲಾಗುವುದು.
– ನಂದಿನಿ, ಹಿರಿಯ ಉಪ ನೋಂದಣಾಧಿಕಾರಿ, ಮೈಸೂರು.

ದಾಳಿಕೋರರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲು

ಆಸ್ತಿ ನೋಂದಣಿ ಪ್ರಕ್ರಿಯೆಗಳಿಗೆ ಅಡ್ಡಿಪಡಿಸಲು ನಮ್ಮ ಐಟಿ ವ್ಯವಸ್ಥೆ ಮೇಲೆ ಉದ್ದೇಶಪೂರ್ವಕವಾಗಿ ದಾಳಿ ಮಾಡಿರುವವರನ್ನು ಪತ್ತೆ ಮಾಡಲು ಕಂದಾಯ ಇಲಾಖೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದೆ. ಈ ಬಗ್ಗೆ ಬೆಂಗಳೂರಿನ ಕೇಂದ್ರ ವಿಭಾಗದ ಸೆನ್ ಅಪರಾಧ ಪೊಲೀಸ್ ಠಾಣೆಯ ಎಸಿಪಿಗೆ ದೂರು ನೀಡಲಾಗಿದೆ. ಕಂದಾಯ ಇಲಾಖೆಯ ನೋಂದಣಿಗೆ ಸಂಬಂಧಿಸಿದ ಕಾವೇರಿ 2.0 ಐಟಿ ವ್ಯವಸ್ಥೆಯಲ್ಲಿನ ಇತ್ತೀಚಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಆಸ್ತಿ ನೋಂದಣಿ ಪ್ರಕ್ರಿಯೆಗಳಿಗೆ ಅಡ್ಡಿಪಡಿಸಲು ನಮ್ಮ ಐಟಿ ವ್ಯವಸ್ಥೆ ಮೇಲೆ ಉದ್ದೇಶಪೂರ್ವಕವಾಗಿ ದಾಳಿ ನಡೆದಿದ್ದರೆ ಅಂತಹ ದಾಳಿಕೋರರು ಅಥವಾ ಸಂಸ್ಥೆಯನ್ನು ಪತ್ತೆ ಮಾಡಲಾಗುವುದು. ಈ ಸಂಬಂಧ ಸೈಬರ್ ಕ್ರೈಮ್‌ನಲ್ಲಿ ಎಫ್‌ಐಆರ್ ಕೂಡ ದಾಖಲು ಮಾಡಲಾಗಿದೆ. ಭವಿಷ್ಯದಲ್ಲಿ ಇಂತಹ ದಾಳಿಗಳನ್ನು ತಡೆಯಲು ಪೊಲೀಸರ ತನಿಖೆ ನಮಗೆ ಸಹಕಾರಿಯಾಗಲಿದೆ. ನಮ್ಮ ಐಟಿ ವ್ಯವಸ್ಥೆಯ ಭದ್ರತಾ ಲೆಕ್ಕ ಪರಿಶೋಧನೆಯನ್ನು ನಾವು ಸ್ವತಂತ್ರವಾಗಿ ನಮ್ಮ ತಜ್ಞರಿಂದ ನಡೆಸುತ್ತೇವೆ. ಇದು ಐಟಿ ವ್ಯವಸ್ಥೆಯನ್ನು ಬಲಪಡಿಸಲು ನಮಗೆ ಮತ್ತಷ್ಟು ಸಹಕಾರಿಯಾಗಲಿದೆ.



–ಕೃಷ್ಣ ಭೈರೇಗೌಡ, ಕಂದಾಯ ಸಚಿವರು

ಆಸ್ತಿ ನೋಂದಣಿಯಾದರೂ ಅದರ ವಿವರಗಳು ಆರ್‌ಟಿಸಿ, ಸರ್ವೆ, ಖಾತೆಗೆ ಹೋಗಿ ಕೂರುತ್ತಿಲ್ಲ. ಈ ಬಗ್ಗೆ ತಾಲೂಕು ಕಚೇರಿ, ಸರ್ವೆ ಇಲಾಖೆ, ನಗರಪಾಲಿಕೆ ಕೇಳಿದರೆ ಸಬ್ ರಿಜಿಸ್ಟ್ರಾರ್ ಕಚೇರಿ ವಿವರಗಳು ನಮ್ಮ ದಾಖಲಾತಿಯಲ್ಲಿ ಸ್ವಯಂ ಚಾಲಿತವಾಗಿ ನಮೂದಾಗುತ್ತಿಲ್ಲ ಎಂದು ಸ್ಪಷ್ಟನೆ ನೀಡುತ್ತಾರೆ. ಕೋಟ್ಯಾಂತರ ರೂ. ನೀಡಿ ಆಸ್ತಿ ಖರೀದಿ ಮಾಡಿದ ನಂತರ ನೋಂದಣಿ ವಿವರ ಅಗತ್ಯ ದಾಖಲಾತಿಯಲ್ಲಿ ಸ್ವಯಂ ಚಾಲಿತವಾಗಿ ನಮೂದಾಗುತ್ತಿಲ್ಲ ಎಂದು ಜನರು ಆತಂಕಗೊಂಡಿದ್ದಾರೆ. ಈ ಬಗ್ಗೆ ಸಬ್ ರಿಜಿಸ್ಟ್ರಾರ್ ಕಚೇರಿ ಅಧಿಕಾರಿಗಳನ್ನು ಕೇಳಿದರೆ ತಾಂತ್ರಿಕ ಸಮಸ್ಯೆ ಎಂದು ಉತ್ತರ ಹೇಳಿ ಕೈಚೆಲ್ಲಿ ಕೂತಿದ್ದಾರೆ.

ಒಟ್ಟಾರೆ ಹ್ಯಾಕ್ ಮಾಡಿರುವ ತಾಂತ್ರಿಕ ದಾಳಿಕೋರರು ಅಥವಾ ಹ್ಯಾಕರ್ಸ್ ಸರ್ಕಾರವನ್ನೆ ಆಟ ಆಡಿಸುತ್ತಿದ್ದಾರೆ. ಪ್ರಾಯಶಃ ಸರ್ಕಾರದ ಸಾಫ್ಟ್‌ವೇರ್‌ಗಳಲ್ಲಿ ಹಲವು ಮುಂಜಾಗ್ರತಾ ಭದ್ರತಾ ಕ್ರಮ ಕೈಗೊಂಡಿದ್ದರೆ ಇಷ್ಟೆಲ್ಲಾ ಆಗುತ್ತಿರಲಿಲ್ಲ. ಈಗಲಾದರೂ ಸರ್ಕಾರ ಇತ್ತ ಗಮನ ಹರಿಸುವುದೇ ಕಾದು ನೋಡಬೇಕು.

ಮೈಸೂರಲ್ಲಿ ಬಹು ಉಪಯುಕ್ತಕಾರಿ ಗೆಡ್ಡೆ-ಗೆಣಸು ಮೇಳ ಆರಂಭ

ಸಾವಿರಾರು ವರ್ಷ ಇತಿಹಾಸವುಳ್ಳ ಔಷಧಿ ಗುಣದ ಗಿರಿಜನರ ಆಹಾರ ಖರೀದಿಗೆ ಮುಗಿಬಿದ್ದ ನಗರ ಪ್ರದೇಶದ ಜನರು







ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಗೆಡ್ಡೆ-ಗೆಣಸು ಮೇಳದಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕಿಟ್ಟಿದ್ದ ಅಪರೂಪದ ಗೆಡ್ಡೆ-ಗೆಣಸು. ಖರೀದಿಯಲ್ಲಿ ತೊಡಗಿರುವ (ಬಲಚಿತ್ರ) ಗ್ರಾಹಕರು.

- ರಾಸಾಯನಿಕ ಅಂಶವಿಲ್ಲ, ಕಲಬೆರಕೆ ಇಲ್ಲವೇ ಇಲ್ಲ
- ಕಾಲ ಬದಲಾದಂತೆ ಮರೆಯಾಗುತ್ತಿರುವ ದೇಸಿ ಆಹಾರ
- ಮಳೆ ಬರಲಿ, ಬಾರದಿರಲಿ ಕೈ ಹಿಡಿಯುವ ಗೆಡ್ಡೆ-ಗೆಣಸು ಕೃಷಿ
- ಇದು ಆಹಾರ ಮಾತ್ರವಲ್ಲ, ರೋಗ ನಿರೋಧಕ ಶಕ್ತಿವುಳ್ಳ ಆಹಾರವೂ ಹೌದು

ಮೈಸೂರು, ಫೆ.8(ಬಿಎಲ್‌ಯು)- ಪೌಷ್ಟಿಕಾಂಶ ಮತ್ತು ಔಷಧಿ ಗುಣವಿರುವ, ಸರ್ವ ರೋಗಕ್ಕೂ ರಾಮಬಾಣವಾದ ಗೆಡ್ಡೆ-ಗೆಣಸು ಮೇಳ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದು ಆರಂಭವಾಯಿತು. ರೋಗ ನಿರೋಧಕ ಶಕ್ತಿವುಳ್ಳ ಬಲು ಅಪರೂಪದ ಗೆಡ್ಡೆ-ಗೆಣಸು ಖರೀದಿಗೆ ನಗರ ಪ್ರದೇಶದ ಜನರು ಮುಗಿಬಿದ್ದರು.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ ಮತ್ತು ರೋಟರಿ ಕ್ಲಬ್ ಮೈಸೂರು ಪಶ್ಚಿಮ ಸಂಯುಕ್ತವಾಗಿ ಆಯೋಜಿಸಿದ್ದ ಎರಡು ದಿನಗಳ ಗೆಡ್ಡೆ-ಗೆಣಸು ಮೇಳವನ್ನು ಗೆಡ್ಡೆ-ಗೆಣಸು ತಳಿ ಸಂರಕ್ಷಕ ಕೇರಳದ ವೈಯನಾಡಿನ ಶಾಜಿ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಶಾಜಿ ಅವರು, ಅನಾದಿ ಕಾಲದಿಂದಲೂ ಗೆಡ್ಡೆ-ಗೆಣಸು ಮನುಷ್ಯರ ಆಹಾರವಾಗಿದೆ. ಆದರೆ ಇತ್ತೀಚಿನ ಆಧುನಿಕ ಆಹಾರದ

ಸರ್ವ ರೋಗಕ್ಕೂ 600ಕ್ಕೂ ಹೆಚ್ಚು ಗೆಡ್ಡೆ-ಗೆಣಸು ರಾಮಬಾಣ

ಇವತ್ತಿಗೂ ಕೂಡ ಹಾಡಿಗಳಲ್ಲಿ ವಾಸ ಮಾಡುವ ಗಿರಿಜನರಿಗೆ ಗೆಡ್ಡೆ-ಗೆಣಸು ಪ್ರತಿದಿನ ಆಹಾರವಾಗಿದೆ. ಔಷಧಿ ಗುಣವಿರುವ ಗೆಡ್ಡೆ-ಗೆಣಸು ರಕ್ತ ಶುದ್ಧಿ ಸೇರಿದಂತೆ ನಾನಾ ರೋಗಗಳಿಗೆ ರಾಮಬಾಣವಾಗಿದೆ. ಇಂದಿನ ಗೆಡ್ಡೆ-ಗೆಣಸು ಮೇಳದಲ್ಲಿ ನೂರಾರು ವಿಧದ ಗೆಡ್ಡೆ-ಗೆಣಸುಗಳ ಮಾರಾಟ ಮತ್ತು ಪ್ರದರ್ಶನಕ್ಕಿಡಲಾಗಿತ್ತು. ಪರ್ಪಲ್ ಯಾಮ್, ಬಳ್ಳಿ ಬಟಾಟೆ, ಅರಾರೂಟ್, ಕೆಸು, ಹಳದಿ ಮತ್ತು ಸಿಹಿ ಗೆಡ್ಡೆ-ಗೆಣಸು, ಹಸಿರು, ಅರಿಶಿನ, ಕಪ್ಪುಶುಂಠಿ, ಮಾವಿನ ಶುಂಠಿ, ಸುವರ್ಣಗೆಡ್ಡೆ-ಗೆಣಸು, ಹುತ್ತರಿ ಗೆಡ್ಡೆಗಳು ಮೇಳದಲ್ಲಿವೆ. ಪ್ರತಿ ವರ್ಷ ತಾನಾಗಿಯೇ ಹುಟ್ಟಿ, ಬೆಳೆದು ಬಳ್ಳಿಯಲ್ಲಿ ಬಿಡುವ ಬಳ್ಳಿ ಆಲೂಗೆಡ್ಡೆ ಖರೀದಿಗೆ ಗ್ರಾಹಕರು ಆಸಕ್ತಿ ತೋರಿದರು. ಸಿರಿಧಾನ್ಯ, ಸಾವಯವ ಉತ್ಪನ್ನಗಳು, ಆಯುರ್ವೇದಿಕ್ ಔಷಧಿಗಳು, ಚಳಿಗಾಲದ ತರಕಾರಿ ಹಾಗೂ ಹಣ್ಣಿನ ಗಿಡಗಳು ಕೂಡ ಮೇಳದಲ್ಲಿವೆ. ಎಲಿವಾಲನ್ ನಂತಹ ಕೆಲವು ಗೆಡ್ಡೆ-ಗೆಣಸು ಭೂಮಿಯ ಆಳದಲ್ಲಿ ಬೆಳೆಯುತ್ತದೆ. ಅಂತಹ ಕೆಲವು ಗೆಡ್ಡೆ-ಗೆಣಸುಗಳನ್ನು ಇಲ್ಲಿ ಮಾರಾಟಕ್ಕಿಡಲಾಗಿತ್ತು. ಅಲ್ಸರ್, ಪೈಲ್ಸ್, ಸಂಧಿವಾತ, ಹೊಟ್ಟೆನೋವು, ಎದೆನೋವು, ದೇಹಕ್ಕೆ ತಂಪು ಸೇರಿದಂತೆ ಹಲವು ಗೆಡ್ಡೆ-ಗೆಣಸುಗಳಿವೆ. ತೆಂಗಿನ ಹಾಲಿನ ಸಿಹಿ ಉತ್ಪನ್ನ, ನೈಸರ್ಗಿಕ ಕೃಷಿಯಿಂದ ಮಾಡಿರುವ ಎಣ್ಣೆ ಅಂಶ ಕಡಿಮೆ ಇರುವ ಹಪ್ಪಳ, ಉಪ್ಪಿನಕಾಯಿ, ತೊಕ್ಕು ಸೇರಿದಂತೆ ಹಲವು ಆಹಾರ ಪದಾರ್ಥಗಳು ಮೇಳದಲ್ಲಿವೆ.



ಪ್ರಭಾವದಿಂದ ಗೆಡ್ಡೆ-ಗೆಣಸು ಬಳಕೆ ಬಹುತೇಕ ಕಡಿಮೆಯಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಲುಷಿತ ಆಹಾರ ಹಾಗೂ ಕಲಬೆರಕೆ ಇರುವ ಇತ್ತೀಚಿನ ಆಹಾರದಲ್ಲಿ ಗೆಡ್ಡೆ-ಗೆಣಸು ವಿಭಿನ್ನವಾಗಿದ್ದು, ಬಹಳ ಮಹತ್ವ ಪಡೆದಿದೆ. ಯಾವುದೇ ರಾಸಾಯನಿಕ ಅಂಶವಿಲ್ಲದೆ ನೈಸರ್ಗಿಕವಾಗಿ ಬೆಳೆಯುವ ಗೆಡ್ಡೆ-ಗೆಣಸುಗಳನ್ನು ಬಳಸುವುದರಿಂದ ಸ್ವಾಸ್ಥ್ಯ ಆರೋಗ್ಯ ಕಾಪಾಡಬಹುದು ಎಂದು ಸಲಹೆ ನೀಡಿದರು.

ವೈವಿಧ್ಯಮಯ ಗೆಡ್ಡೆ-ಗೆಣಸುಗಳನ್ನು ಸಂರಕ್ಷಿಸುವ ಅಗತ್ಯವಿದೆ. ಇದಕ್ಕಾಗಿ ಗೆಡ್ಡೆ ಗೆಣಸು ಕೃಷಿಯನ್ನು ಜನಪ್ರಿಯಗೊಳಿಸಲು ಯೋಜನೆ ರೂಪಿಸಬೇಕು ಎಂದು ಶಾಜಿ ಸಲಹೆ ನೀಡಿದರು. ಮೈಸೂರಿನ ನಾಗರಹೊಳೆ ಅಭಯಾರಣ್ಯದ ಬಳಿ ಗೆಡ್ಡೆ-ಗೆಣಸಿನ ಕೃಷಿ ಮಾಡುತ್ತಿರುವ ಮಚ್ಚೂರು ಹಾಡಿಯ ಪಾರ್ವತಿ ಮಾತನಾಡಿ, ಗೆಡ್ಡೆ-ಗೆಣಸು ನಮ್ಮ ಹಿರಿಕರ ಬೆಳೆಯಾಗಿದ್ದು, ಮಳೆ ಬರಲಿ, ಬಾರದಿರಲಿ ಈ ಬೆಳೆ ನಮ್ಮ ಕೈ ಬಿಡುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಮಾತನಾಡಿದ ರೋಟರಿ ಕ್ಲಬ್ ಮೈಸೂರು ಪಶ್ಚಿಮ ಅಧ್ಯಕ್ಷ ಎಂ.ಎಲ್. ನಾಗೇಶ್, ಗೆಡ್ಡೆ-ಗೆಣಸಲ್ಲಿ ಪೌಷ್ಟಿಕತೆ ಹಾಗೂ ಔಷಧಿ ಗುಣಗಳಿವೆ. ನಗರ ಪ್ರದೇಶದ ಜನರು ಇದನ್ನು ಬಳಕೆ ಮಾಡಿ ಅನಾರೋಗ್ಯದಿಂದ ಮುಕ್ತಾಗಬಹುದು. ಈ ಮೂಲಕ ಗೆಡ್ಡೆ-ಗೆಣಸು ಮಾರಾಟಕ್ಕೆ ಜನರು ಒತ್ತಾಸೆಯಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು.

ರೋಟರಿ ಕ್ಲಬ್ ಮೈಸೂರು ಪಶ್ಚಿಮದ ಕಾರ್ಯದರ್ಶಿ ಎಂ.ದೇವರಾಜು, ಇನ್ನರ್‌ವ್ಹೀಲ್ ಕ್ಲಬ್ ಮೈಸೂರು ಪಶ್ಚಿಮದ ಅಧ್ಯಕ್ಷ ಶಶಿಕಲಾ ಸುರೇಶ್, ಸಹಜ ಸಮೃದ್ಧ ಸಂಸ್ಥೆ ನಿರ್ದೇಶಕ ಜಿ.ಕೃಷ್ಣ ಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ.ಅಮ್ಮಸಂದ್ರ ಸುರೇಶ್‌ಗೆ ಲೋಕ ಸರಸ್ವತಿ ಗ್ರಂಥ ಪ್ರಶಸ್ತಿ




ಮೈಸೂರು, ಫೆ. 8-ಡಾ.ಅಮ್ಮಸಂದ್ರ ಸುರೇಶ್ ಅವರ 'ಆನೆಗೊಂದಿ ಪೇಟೆಯೊಳಗೆ' ಕೃತಿಗೆ ಕರ್ನಾಟಕ ಜಾನಪದ ಪರಿಷತ್ತು ಕೊಡಮಾಡುವ 2025ನೇ ಸಾಲಿನ "ಲೋಕ ಸರಸ್ವತಿ ಗ್ರಂಥ" ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಫೆ.9ರಂದು ಜಾನಪದ ಲೋಕದಲ್ಲಿ ನಡೆಯುವ ಮಹಿಳಾ ಜಾನಪದ ಲೋಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಜಾನಪದ ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ.ಬೋರಲಿಂಗಯ್ಯ ತಿಳಿಸಿದ್ದಾರೆ. ಮೈಸೂರು ಅಂಚೆ ವಿಭಾಗದ ಮಾರುಕಟ್ಟೆ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ಅಮ್ಮಸಂದ್ರ ಸುರೇಶ್ ಇದುವರೆಗೂ 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

21ನೇ ವರ್ಷದ ಕಂಡಾಯ ಉತ್ಸವ



ಮೈಸೂರು,ಫೆ.8-ಮೈಸೂರಿನ ಗಾಯತ್ರಿಪುರಂನ ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ, ಶ್ರೀದೊಡ್ಡಮ್ಮ ತಾಯಿ ಶ್ರೀಚನ್ನಾಜಮ್ಮ ತಾಯಿ, ಶ್ರೀ ಘನನೀಲ ಸಿದ್ದಪ್ಪಾಜಿ ಹಾಗೂ ಶ್ರೀ ಸುಬ್ರಮಣ್ಯ ಸ್ವಾಮಿ ದೇವಸ್ಥಾನದ ವತಿಯಿಂದ ಫೆ.10ರಂದು ಶ್ರೀಘನನೀಲ ಸಿದ್ದಪ್ಪಾಜಿ ದೇವ ಸ್ಥಾನದ 9ನೇ ವರ್ಷದ ವಾರ್ಷಿಕೋತ್ಸವ ಹಾಗೂ 21ನೇ ವರ್ಷದ ಕಂಡಾಯ ಉತ್ಸವ ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 6ರಿಂದ 12.30 ರವರೆಗೆ ಶ್ರೀಗಣಪತಿ ಪೂಜೆ, ಪುಣ್ಯಾವಾಚನ, ನವಗ್ರಹ ಪೂಜೆ, ಗಣಪತಿ ಹೋಮ, ಶ್ರೀ ಮಂಟೇಸ್ವಾಮಿ ಹೋಮ, ಶ್ರೀ ರಾಚಪ್ಪಾಜಿ ಹೋಮ, ಶ್ರೀದೊಡ್ಡಮ್ಮತಾಯಿ ಹೋಮ, ಶ್ರೀ ಸಿದ್ದಪ್ಪಾಜಿಯವರ ಹೋಮ, ಶ್ರೀ ಚೆನ್ನಾಜಮ್ಮ ತಾಯಿ ಹೋಮ, ಪೂರ್ಣಾಹುತಿ, ಅಭಿಷೇಕ, ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 5.30ಕ್ಕೆ ಅಲ್ಲೂರು ಆನಂದ್ ವೀರಗಾಸೆ ಕಲಾತಂಡದವರೊಂದಿಗೆ ಕಂಡಾಯ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 12.30ಕ್ಕೆ ಕ್ಯಾತಮಾರನಹಳ್ಳಿ ಮಹದೇವು ಮತ್ತು ಕಲಾವೃಂದದವರಿಂದ ಭಕ್ತಿಗೀತೆ, ಭಾವಗೀತೆ ಏರ್ಪಡಿಸಲಾಗಿದೆ. ಫೆ.11ರಂದು ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ.

ತನುಶ್ರೀ ಎಸ್.ಚಿನ್ನಯ್ಯ ಭರತನಾಟ್ಯ ರಂಗ ಪ್ರವೇಶ



ಮೈಸೂರು,ಫೆ.8-ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ, ಶ್ರೀಮತಿ ಸುಮಲತಾ ಎನ್.ಪಿ. ಮತ್ತು ವಿ.ಚಿನ್ನಯ್ಯ ಅವರ ಆಶ್ರಯದಲ್ಲಿ ಗುರು ವಿದುಷಿ ಡಾ.ಕೃಪಾ ಫಡ್ಕೆ ಅವರ ಶಿಷ್ಯೆ ಕು. ತನುಶ್ರೀ ಎಸ್.ಚಿನ್ನಯ್ಯ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವನ್ನು ಫೆ.9ರಂದು ಸಂಜೆ 5.30 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೃತಿಮಂಜರಿ ಪ್ರತಿಷ್ಠಾನ ಸ್ಥಾಪಕ ನಿರ್ದೇಶಕರಾದ ಗಾನಕಲಾ ಭೂಷಣ ವಿದುಷಿ ಡಾ.ಆರ್.ಎನ್.ಶ್ರೀಲತಾ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಟನಾ ರಂಗಶಾಲೆ ಸ್ಥಾಪಕ ನಿರ್ದೇಶಕ ಮಂಡ್ಯ ರಮೇಶ್, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ನಿರ್ದೇಶಕಿ ಶ್ರೀಮತಿ ಡಾ.ಎಂ.ಪುಷ್ಪಾವತಿ, ಚಾಮರಾಜನಗರ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ಸ್ಥಾಪಕ ನಿರ್ದೇಶಕಿ ಗುರು ವಿದುಷಿ ಡಾ.ಕೃಪಾ ಫಡ್ಕೆ ಭಾಗವಹಿಸಲಿದ್ದಾರೆ.

ಫೆ.14, ರಾಜ್ಯಾದ್ಯಂತ 'ರಾಜು ಜೇಮ್ಸ್ ಬಾಂಡ್' ಚಿತ್ರ ಬಿಡುಗಡೆ

ಮೈಸೂರು, ಫೆ.8(ಜಿಎ)-ಫಸ್ಟ್ ರ‍್ಯಾಂಕ್ ರಾಜು ಖ್ಯಾತಿಯ ನಟ ಗುರುನಂದನ್ ಅಭಿನಯದ 'ರಾಜು ಜೇಮ್ಸ್ ಬಾಂಡ್' ಸಿನಿಮಾ ಫೆ.14ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರದ ನಿರ್ದೇಶಕ ದೀಪಕ್ ಮಧುವನಹಳ್ಳಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸತ್ಯ ಪಿಕ್ಚರ್ಸ್ ಮೂಲಕ ರಾಜ್ಯಾದ್ಯಂತ 200ಕ್ಕೂ ಅಧಿಕ ಟಾಕೀಸ್‌ಗಳಲ್ಲಿ ಬಿಡುಗಡೆಯಾಗಲಿದ್ದು, ಹುಬ್ಬಳ್ಳಿಯ ಮೃದುಲಾ ನಾಯಕಿಯಾಗಿದ್ದು, ಲಂಡನ್‌ನಲ್ಲಿ ನೆಲೆಸಿರುವ ಕರ್ನಾಟಕ ಮೂಲದ ಮಂಜುನಾಥ್ ವಿಶ್ವಕರ್ಮ ಹಾಗೂ ಕಿರಣ್ ಬರ್ತೂರು ಸಿನಿಮಾ ನಿರ್ಮಾಣ ಮಾಡಿದ್ದಾರೆ ಎಂದರು.

ನಟ ಗುರುನಂದನ್ ಮಾತನಾಡಿ, ಈ ಹಿಂದೆ ನಾನು ಮಾಡಿದ ಚಿತ್ರಗಳಿಗಿಂತಲೂ ಈ ಚಿತ್ರದಲ್ಲಿ ಪಾತ್ರ ವಿಭಿನ್ನವಾಗಿದೆ. ಸಂಡೂರು ಹಾಗೂ ವಿದೇಶದಲ್ಲಿಯೂ ಚಿತ್ರೀಕರಣ ಮಾಡಲಾಗಿದೆ. ಈಗಾಗಲೇ ಚಿತ್ರದ ಟ್ರೈಲರ್, ಗೀತೆಗಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿತ್ರದಲ್ಲಿ ರವಿಶಂಕರ್, ಸಾಧು ಕೋಕಿಲ, ಅಚ್ಯುತ್‌ಕುಮಾರ್, ಚಿಕ್ಕಣ್ಣ, ಜೈಜಗದೀಶ್, ತಬಲಾ ನಾಣಿ, ಮಂಜುನಾಥ್ ಹೆಗಡೆ, ವಿಜಯ್ ಚೆಂಡೂರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಎಂದರು.

ನಾಯಕಿ ಮೃದುಲಾ ಮಾತನಾಡಿ, ನಾನು ಮೂಲತಃ ಹುಬ್ಬಳ್ಳಿಯ ಹುಡುಗಿ. ಇದು ನನ್ನ ಮೊದಲ ಸಿನಿಮಾ. ನನ್ನದು ಟೀಚರ್ ಪಾತ್ರ, ಚಿತ್ರದಲ್ಲಿ ನಾಯಕನಿಗೆ ಬದುಕಿನ ಪಾಠ ಹೇಳಿಕೊಟ್ಟಿದ್ದೇನೆ ಎಂದರು.

ನಿರ್ಮಾಪಕ ಕಿರಣ್ ಬರ್ತೂರು ಮಾತನಾಡಿ, ಹಳ್ಳಿಯ ಹುಡುಗ ರಾಜು, ಓದಿ ವಿದ್ಯಾವಂತನಾಗಿ ಬ್ಯಾಂಕ್ ಮ್ಯಾನೇಜರ್ ಆಗಬೇಕೆಂದು ಹೊರಡುತ್ತಾನೆ. ಹಾಗಂತ ಬ್ಯಾಂಕ್ ಮ್ಯಾನೇಜರ್ ಆಗಿ ಕೆಲಸ ಮಾಡುವುದು ಆತ ಅಂದುಕೊಂಡಷ್ಟು ಸುಲಭವಾಗಿರಲ್ಲ. ಆತನ ಮುಂದೆ ಹಲವಾರು ಸಂದಿಗ್ಧ ಪರಿಸ್ಥಿತಿಗಳು ಎದುರಾಗುತ್ತವೆ. ಆತ ಅದನ್ನೆಲ್ಲ ಹೇಗೆ ನಿಭಾಯಿಸಿ, ಹಳ್ಳಿ ಜನರ ಪಾಲಿಗೆ ಹೇಗೆ ಜೇಮ್ಸ್ ಬಾಂಡ್ ಆಗುತ್ತಾನೆ ಎನ್ನುವುದು ಚಿತ್ರದ ಒನ್‌ಲೈನ್ ಸ್ಟೋರಿ ಎಂದರು.

ಮದುಮಗನ ಸಿಬಿಲ್ ಸ್ಕೋರ್ ಕಡಿಮೆ: ಮದುವೆ ಕ್ಯಾನ್ಸಲ್!

ಮಹಾರಾಷ್ಟ್ರ: ಮದುವೆ ಮಾಡಿಕೊಳ್ಳುವ ಮದುಮಗನ ಬ್ಯಾಂಕ್ ಕ್ರೆಡಿಟ್ ಸಿಬಿಲ್ ಸ್ಕೋರ್ ಕಡಿಮೆ ಇದ್ದಿದ್ದರಿಂದ ವಧುವಿನ ಮನೆಯವರು ಮಗಳ ಮದುವೆಯನ್ನೇ ಮುರಿದುಕೊಂಡಿರುವ ಘಟನೆ ವರದಿಯಾಗಿದೆ. ಮಹಾರಾಷ್ಟ್ರದ ಮೂರ್ತಿಜಾಪುರದಲ್ಲಿ ಈ ಘಟನೆ ನಡೆದಿದೆ. ವಧು-ವರರು ಮತ್ತು ಅವರ ಕುಟುಂಬದವರು ಪರಸ್ಪರ ಇಷ್ಟಪಟ್ಟು ಮದುವೆ ಬಹುತೇಕ ಫಿಕ್ಸ್ ಆದ ನಂತರ, ವಧುವಿನ ಒಬ್ಬ ಮಾವ ವರನ ಸಿಬಿಲ್ ಸ್ಕೋರ್ ಚೆಕ್ ಮಾಡಬೇಕು ಎಂದು ಕೇಳಿದ್ದಾರೆ. ವರನಿಗೆ ಸಿಬಿಲ್ ಸ್ಕೋರ್ ತುಂಬಾ ಕಡಿಮೆ ಇತ್ತು. ಅಷ್ಟೇ ಅಲ್ಲ, ಅವನ ಹೆಸರಿನಲ್ಲಿ ವಿವಿಧ ಬ್ಯಾಂಕುಗಳಿಂದ ಹಲವು ಸಾಲಗಳು ಇದ್ದವು ಎಂದು ಗೊತ್ತಾಯ್ತು. ಕಡಿಮೆ ಸಿಬಿಲ್ ಸ್ಕೋರ್ ಅಂದರೆ ಕೆಟ್ಟ ಕ್ರೆಡಿಟ್ ಹಿಸ್ಟರಿ ಎಂದು ಅರ್ಥ. ಹಾಗಾಗಿ ಮದುವೆಯನ್ನು ಸಂಪೂರ್ಣವಾಗಿ ವಿರೋಧಿಸಿದ ವಧುವಿನ ಮಾವ, ಆರ್ಥಿಕ ಸಮಸ್ಯೆಗಳಿಂದ ಬಳಲುತ್ತಿರುವ ಪುರುಷ ತನ್ನ ಸೊಸೆಗೆ ಸೂಕ್ತವಲ್ಲ. ಭವಿಷ್ಯದಲ್ಲಿ ಹೆಂಡತಿಗೆ ಆರ್ಥಿಕ ಭದ್ರತೆ ಒದಗಿಸಲು ಅವನಿಗೆ ಸಾಧ್ಯವಿಲ್ಲ ಎಂದಿದ್ದಾರೆ. ಯುವತಿಯ ಕುಟುಂಬದ ಇತರ ಸದಸ್ಯರೂ ಆ ಅಭಿಪ್ರಾಯಕ್ಕೆ ಒಪ್ಪಿ ಮದುವೆಯಿಂದ ಹಿಂದೆ ಸರಿದರು.

ಮುಡಾದಿಂದಲೇ ಆಸ್ತಿಗಳಿಗೆ ಇ-ಖಾತೆ ಮಾಡಿಸಿಕೊಡಿ

ಡಿಸಿಗೆ ಎಂಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಮನವಿ


ಸುಧಾಕರ್ ಶೆಟ್ಟಿ

ಮೈಸೂರು,ಫೆ.8(ಆರ್‌ಕೆ)- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದಲೇ ಅದರ ವ್ಯಾಪ್ತಿಯಲ್ಲಿರುವ ಖಾಸಗಿ ಬಡಾವಣೆ ನಿವೇಶನಗಳಿಗೆ ಇ-ಖಾತಾ ಮಾಡಿಸಿಕೊಡಬೇಕೆಂದು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ (ಎಂಸಿಸಿಐ) ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ ಒತ್ತಾಯಿಸಿದ್ದಾರೆ.

ಈ ಕುರಿತು ಇಂದು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ಅವರು, ಪ್ರಾಧಿಕಾರದ ವ್ಯಾಪ್ತಿಯಲ್ಲಿದ್ದ ಖಾಸಗಿ ಬಡಾವಣೆಗಳನ್ನು ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿದೆ. ಅಂತಹ ಸ್ವತ್ತುಗಳಿಗೆ ತಕ್ಷಣವೇ ಇ-ಖಾತಾ ಮಾಡಿಕೊಡಬೇಕೆಂದು ಸರ್ಕಾರ ಆದೇಶಿಸಿದ್ದರೂ, ಪಂಚಾಯ್ತಿ ಕಚೇರಿಗಳಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು, ಇ-ಖಾತೆಯನ್ನೇ ತಮ್ಮ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳಲ್ಲಿ ಇ-ಖಾತೆ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟು, ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಈ ಹಿಂದೆ ಇದ್ದಂತೆ ಮುಡಾದಿಂದಲೇ ಇ-ಖಾತೆ ಮಾಡಿಸಿ ನಂತರ ಬಡಾವಣೆಗಳನ್ನು ಹಸ್ತಾಂತರಿಸಿ ಎಂದು ಅವರು ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಫೆ.13ರಂದು ರೈತ ಸಂಘ, ಹಸಿರು ಸೇನೆಯಿಂದ ಕಾನೂನು ಭಂಗ ಚಳುವಳಿ

ಮೈಕ್ರೋ ಫೈನಾನ್ಸ್‌ಗಳು ಹಾಕಿರುವ ಮನೆಗಳ ಬೀಗ ಒಡೆಯುವ ಕಾರ್ಯಕ್ರಮ

ಮೈಸೂರು, ಫೆ.8(ಜಿಎ)-ಮೈಕ್ರೋ ಫೈನಾನ್ಸ್‌ಗಳು ಹಾಕಿರುವ ಬೀಗ ಒಡೆಯುವ ಮೂಲಕ ಕಾನೂನು ಭಂಗ ಚಳುವಳಿ ಮಾಡಲು ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯೂ ನಿರ್ಧರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಮಂಜುಕಿರಣ್ ಈ ವಿಷಯ ತಿಳಿಸಿ, ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಕಾನೂನು ಬಾಹಿರವಾಗಿ ಸಾಲಗಾರರ ಮನೆಗಳಿಗೆ ಬೀಗ ಜಡಿದಿವೆ. ಹೀಗಾಗಿ ಫೆ.13ರಂದು ಸಿದ್ದಲಿಂಗಪುರ ಹಾಗೂ ನಂಜನಗೂಡಿನ ಒಂದು ಗ್ರಾಮದಲ್ಲಿ ಒಂದು ಮನೆಗೆ ಮೈಕ್ರೋಫೈನಾನ್ಸ್‌ಗಳು ಹಾಕಿರುವ ಬೀಗ ಒಡೆಯುವ ಮೂಲಕ ಮೈಕ್ರೋಫೈನಾನ್ಸ್ ವಿರುದ್ಧ ಕಾನೂನು ಭಂಗ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕದೇ ವಾಪಸು ಕಳಿಸಿರುವುದು ಖಂಡನೀಯ. ರಾಜ್ಯಪಾಲರ ನಡೆ ಸರಿಯಲ್ಲ. ಜೊತೆಗೆ ರಾಜ್ಯಪಾಲರ ಈ ನಡೆ ಮೈಕ್ರೋಫೈನಾನ್ಸ್‌ಗಳ ಪರವಾಗಿ ಇದೆ. ದುಡಿಯುವ ವರ್ಗದ ಜನರ ವಿರುದ್ಧವಾಗಿದ್ದು, ರಾಜ್ಯಪಾಲರ ಈ ನಡೆಯನ್ನು ಖಂಡಿಸಿ ಕಾನೂನು ಭಂಗ ಚಳುವಳಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮೋಹನ್‌ಕುಮಾರ್, ಮೋಹನ್ ಹಿನಕಲ್, ವೆಂಕಟೇಶ್, ಕಿರಣ್ ಉಪಸ್ಥಿತರಿದ್ದರು.

ಅಭಿನಂದನೆ



ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್‌ಗೆ ನೂತನವಾಗಿ ಚುನಾಯಿತರಾದ ಸೈಯದ್ ಅಬ್ರಾರ್, ನಿಶಾಂತ್ ಪಟೇಲ್, ದೀಪಕ್ ಶಿವಣ್ಣ, ದಿಲೀಪ್, ಪವನ್, ರಾಕೇಶ್, ವಿನಯ್ ಗೌಡ, ಲಖನ್, ಬುರಾನ್, ಸಲ್ಮಾನ್, ಚಂದ್ರು, ಕೆಂಪಿ, ವಿನೋದ್ ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಭಿನಂದಿಸಿ, ಗೌರವಿಸಿದರು.

ದೇಶ - ವಿದೇಶ

ಅಮೆರಿಕದಿಂದ ಮತ್ತೇ 487 ಭಾರತೀಯರ ಗಡಿಪಾರಿಗೆ ಸಿದ್ಧತೆ



ವಾಷಿಂಗ್ಟನ್: ಅಮೆರಿಕದಲ್ಲಿ ಅಕ್ರಮವಾಗಿ ನೆಲೆಸಿರುವ ಭಾರತೀಯರ ಮತ್ತೊಂದು ತಂಡವನ್ನು ದೇಶದಿಂದ ಹೊರಹಾಕಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಯಾವುದೇ ದಾಖಲೆ ಇಲ್ಲದೆ ಅಕ್ರಮವಾಗಿ ನೆಲೆಸಿದ್ದ 487 ವಲಸಿಗರನ್ನು ಪತ್ತೆ ಮಾಡಿರುವ ವಲಸೆ ವಿಭಾಗದ ಅಧಿಕಾರಿಗಳು ಗಡಿಪಾರು ಪ್ರಕ್ರಿಯೆ ಆರಂಭಿಸಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಹೊಸದಿಲ್ಲಿಯಲ್ಲಿ ಮಾತನಾಡಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ಅಮೆರಿಕ ಅಧಿಕಾರಿಗಳು ಅಕ್ರಮವಾಗಿ ನೆಲೆಸಿದ್ದ 487 ಭಾರತೀಯರನ್ನು ಗುರುತಿಸಿದ್ದಾರೆ. ಸ್ಥಳೀಯ ಕಾನೂನು ಅನುಸಾರ ಗಡಿಪಾರು ಮಾಡಲು ಸಿದ್ಧತೆ ಕೈಗೊಂಡಿದ್ದಾರೆ. ಯಾವುದೇ ಸಮಯದಲ್ಲಿ ಭಾರತಕ್ಕೆ ವಾಪಸ್ ಕಳುಹಿಸಬಹುದು. ಅಮೆರಿಕದ ಗಡಿಪಾರು ಪ್ರಕ್ರಿಯೆಯನ್ನು ಭಾರತ ಸರ್ಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ. ವೀಸಾ ಮತ್ತಿತರ ಸಮಸ್ಯೆಗಳಿಗೆ ಸಿಲುಕಿದವರ ಸಂಕಷ್ಟ ಪರಿಹರಿಸಲು ರಾಯಭಾರ ಅಧಿಕಾರಿಗಳ ಮೂಲಕ ಪ್ರಯತ್ನಿಸಲಾಗಿದೆ. ಸ್ಪಷ್ಟ ದಾಖಲೆ ಇಲ್ಲದೆ ನೆಲೆಸಿರುವ ವಲಸಿಗರು ಗಡಿಪಾರಾಗಲಿದ್ದಾರೆ. ಅಮೆರಿಕದಿಂದ ಹೊರಹಾಕಲ್ಪಡುವ ಭಾರತೀಯರ ಸುರಕ್ಷಿತ ವಾಪಸಾತಿಗೆ ಸರ್ಕಾರ ಕೆಲಸ ಮಾಡುತ್ತಿದೆ ಎಂದರು.

ಎನ್‌ಕೌಂಟರ್‌ಗೆ ನಟೋರಿಯಸ್ ಕ್ರಿಮಿನಲ್ ಬಲಿ

ಪಾಟ್ನಾ: ಬಿಹಾರದ ಗೋಪಾಲ್‌ಗಂಜ್ ಜಿಲ್ಲೆಯಲ್ಲಿ ಪೊಲೀಸರೊಂದಿಗೆ ನಡೆದ ಭೀಕರ ಎನ್‌ಕೌಂಟರ್‌ನಲ್ಲಿ ತಲೆಗೆ 50,000 ರೂ. ಬಹುಮಾನ ಹೊಂದಿದ್ದ ನಟೋರಿಯಸ್ ಕ್ರಿಮಿನಲ್ ಮನೀಶ್ ಯಾದವ್ ಹತನಾಗಿದ್ದಾನೆ. ಗುಂಡಿನ ಚಕಮಕಿಯಲ್ಲಿ ವಿಶೇಷ ಕಾರ್ಯಪಡೆ ಕಾನ್‌ಸ್ಟೆಬಲ್ ಕೂಡ ಗಾಯಗೊಂಡಿದ್ದಾರೆ. ಗಾಯಗೊಂಡ ರೋಷನ್ ಕುಮಾರ್ ಅವರನ್ನು ಚಿಕಿತ್ಸೆಗಾಗಿ ಗೋಪಾಲ್‌ಗಂಜ್‌ನ ಸದರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸ್ ಮೂಲಗಳ ಪ್ರಕಾರ, ಗೋಪಾಲ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯ ರಾಂಪುರ ಖುರ್ದ್ ಗ್ರಾಮದ ಬಳಿ ಮನೀಶ್ ಮತ್ತು ಅವರ ಸಹಚರರು ದೊಡ್ಡ ಅಪರಾಧ ಎಸಗಲು ಒಟ್ಟುಗೂಡಿದ್ದರು. ಖಚಿತ ಮಾಹಿತಿ ಪಡೆದ ಎಸ್‌ಟಿಎಫ್ ಮತ್ತು ಜಿಲ್ಲಾ ಪೊಲೀಸರ ಜಂಟಿ ತಂಡ ರಾಂಪುರ ಖುರ್ದ್ ಗ್ರಾಮಕ್ಕೆ ತೆರಳಿ, ಮನೀಶ್‌ಗೆ ಶರಣಾಗುವಂತೆ ಸೂಚಿಸಿದ್ದಾರೆ. ಆದರೆ ಕಾಲುವೆ ಕೆಳಗೆ ಅಡಗಿದ್ದ ಮನೀಶ್ ಪೊಲೀಸರ ಮೇಲೆ ಗುಂಡು ಹಾರಿಸಿದ್ದರಿಂದ ಕಾನ್‌ಸ್ಟೆಬಲ್ ರೋಷನ್‌ಗೆ ಗಾಯವಾಯಿತು. ತಕ್ಷಣ ಪೊಲೀಸರು ಆತ್ಮರಕ್ಷಣೆಗಾಗಿ ಮನೀಶ್ ಮೇಲೆ ಗುಂಡು ಹಾರಿಸಿದ್ದಾರೆ. ಮನೀಶ್, ಗಾಯಗೊಂಡ ಕಾನ್‌ಸ್ಟೆಬಲ್ ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಅಪರಾಧಿ ಸಾವನ್ನಪ್ಪಿದ್ದಾನೆ ಎಂದು ವೈದ್ಯರು ಘೋಷಿಸಿದರು.

ಅಮೆರಿಕದಲ್ಲಿ ಮತ್ತೊಂದು ವಿಮಾನ ಪತನ: 10 ಮಂದಿ ಸಾವು



ಅಲಾಸ್ಕಾ: ಪಶ್ಚಿಮ ಅಲಾಸ್ಕಾದಲ್ಲಿ ಸಣ್ಣ ವಿಮಾನವೊಂದು ಪತನಗೊಂಡಿದೆ. ಪ್ರಯಾಣಿಕ ವಿಮಾನದಲ್ಲಿದ್ದ ಎಲ್ಲಾ 10 ಜನರು ಸಾವನ್ನಪ್ಪಿದ್ದಾರೆ ಎಂದು ಅಮೆರಿಕದ ಕೋಸ್ಟ್ ಗಾರ್ಡ್ ಹೇಳಿದೆ

ಅಲಾಸ್ಕಾದ ಪಶ್ಚಿಮ ಕರಾವಳಿಯಲ್ಲಿ ನಿಯಂತ್ರಣ ಕಳೆದುಕೊಂಡು ನಾಪತ್ತೆಯಾದ ವಿಮಾನ ಪತನವಾಗಿರುವ ಸ್ಥಳವನ್ನು ಅಮೆರಿಕದ ಕೋಸ್ಟ್ ಗಾರ್ಡ್ ಪತ್ತೆ ಹಚ್ಚಿದೆ. ಅಲಾಸ್ಕಾದ ಕೋಸ್ಟ್ ಗಾರ್ಡ್ ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದು, ವಿಮಾನವು ನೋಮ್‌ನಿಂದ ಆಗ್ನೇಯಕ್ಕೆ 34 ಮೈಲುಗಳಷ್ಟು ದೂರದಲ್ಲಿ ಕಂಡು ಬಂದಿದೆ ಎಂದು ಹೇಳಿದೆ. ವಿಮಾನದಲ್ಲಿದ್ದ ಎಲ್ಲರೂ ಮೃತಪಟ್ಟಿದ್ದಾರೆ ಎಂದು ನಂಬಲಾಗಿದೆ. ಪ್ರತಿಕೂಲ ಹವಾಮಾನ ಮತ್ತು ಕಡಿಮೆ ಗೋಚರತೆಯಿಂದಾಗಿ ವಿಮಾನ ನಿಯಂತ್ರಣ ಕಳೆದುಕೊಂಡು ಪತನವಾಗಿದೆ. ಅಗ್ನಿಶಾಮಕ ಸಿಬ್ಬಂದಿ ನೋಮ್‌ನಿಂದ ಟಾಪ್‌ಕಾಕ್‌ವರೆಗೆ ತೀವ್ರ ಹುಡುಕಾಟ ನಡೆಸಿತು. ಇನ್ನು ಯುಎಸ್ ಕೋಸ್ಟ್ ಗಾರ್ಡ್ ಫ್ಲೈಟ್ ಸಿಬ್ಬಂದಿ ವಾಯುಪ್ರದೇಶದಲ್ಲಿ ಶೋಧ ಕೈಗೊಂಡಿತ್ತು.

ಅಲಾಸ್ಕಾ ಸಾರ್ವಜನಿಕ ಸುರಕ್ಷತೆ ಇಲಾಖೆಯ ಪ್ರಕಾರ ಬೆರಿಂಗ್ ಏರ್ ನಿರ್ವಹಿಸುವ ಟರ್ಬೊಪ್ರಾಪ್ ಸೆಸ್ನಾ ಕಾರವಾನ್ ಗುರುವಾರ ಕಾಣೆಯಾಗಿದೆ ಎಂದು ವರದಿಯಾಗಿತ್ತು.

ಕೈಕೊಟ್ಟ ಪ್ಯಾರಾಚೂಟ್; ವಾಯುಪಡೆ ಅಧಿಕಾರಿ ಸಾವು



ಆಗ್ರಾ: ಆಗ್ರಾದಲ್ಲಿ ನಡೆದ ಪ್ಯಾರಾಚೂಟ್ ತರಬೇತಿ ವೇಳೆ ಕರ್ನಾಟಕ ಮೂಲದ ವಾಯುಪಡೆಯ ವಾರಂಟ್ ಅಧಿಕಾರಿ ಮಂಜುನಾಥ್ ಪ್ರಾಣ ಕಳೆದುಕೊಂಡ ಆಘಾತಕಾರಿ ಘಟನೆ ನಡೆದಿದೆ. ವಾರಂಟ್ ಅಧಿಕಾರಿ ಮಂಜುನಾಥ್, ವಿಂಗ್ ಕಮಾಂಡರ್ ರೋಹಿತ್ ದಹಿಯಾ ಸೇರಿದಂತೆ 12 ತರಬೇತಿದಾರರು ಶುಕ್ರವಾರ ಬೆಳಿಗ್ಗೆ 8.30ಕ್ಕೆ ವಾಯುಪಡೆಯ ವಿಮಾನದಿಂದ ತರಬೇತಿಯ ಭಾಗವಾಗಿ ಕೆಳಗೆ ಹಾರಿದ್ದರು. ಈ ಪೈಕಿ 11 ಮಂದಿ ಸುರಕ್ಷಿತವಾಗಿ ಇಳಿದಿದ್ದರು. ಆದರೆ ಮಂಜುನಾಥ್ ಮಾತ್ರ ಕೆಳಗಿಳಿದಿರಲಿಲ್ಲ. ಈ ಹಿನ್ನೆಲೆಯಲ್ಲಿ ಸಮೀಪದ ಪ್ರದೇಶಗಳಲ್ಲಿ ತಪಾಸಣೆ ನಡೆಸಿದಾಗ ಗೋಧಿ ಹೊಲದಲ್ಲಿ ಮಂಜುನಾಥ್ ಶವ ಪತ್ತೆಯಾಗಿದೆ. ಪ್ರಾಥಮಿಕ ತನಿಖೆ ವೇಳೆ ಪ್ಯಾರಾಚೂಟ್ ಬಿಚ್ಚಿಕೊಳ್ಳದೇ ಅವರು 1500 ಅಡಿ ಎತ್ತರದಿಂದ ಕೆಳಗೆ ಬಿದ್ದಿರುವುದು ಕಂಡುಬಂದಿದೆ. ಸಾಮಾನ್ಯವಾಗಿ ವಿಮಾನದಿಂದ ಹಾರಿದ 5 ಸೆಕೆಂಡ್‌ನಲ್ಲಿ ಪ್ಯಾರಾಚೂಟ್ ತಂತಾನೆ ಬಿಚ್ಚಿಕೊಳ್ಳಬೇಕು. ಅದು ಆಗದೇ ಹೋದಲ್ಲಿ ತುರ್ತು ಸಂದರ್ಭಕ್ಕೆಂದು ಮೀಸಲಿಟ್ಟ ಇನ್ನೊಂದು ಪ್ಯಾರಾಚೂಟ್ ಅನ್ನು ಸ್ವತಃ ತೆರೆಯಬೇಕಾಗುತ್ತದೆ. ಆದರೆ ಅದು ಕೂಡ ತೆರೆಯದಾಗ ದುರಂತ ಸಂಭವಿಸಿರುವುದು ಘಟನಾ ಸ್ಥಳದಲ್ಲಿ ಪತ್ತೆಯಾಗಿದೆ.

ಇರಾನ್ ಮೇಲೆ ಆರ್ಥಿಕ ಒತ್ತಡ; ಮಾನವ ಹಕ್ಕುಗಳ ಮಂಡಳಿಯಿಂದ ಅಮೆರಿಕ ಹೊರಕ್ಕೆ



ವಾಷಿಂಗ್ಟನ್: 'ಅಮೆರಿಕ ಮೊದಲು' ಘೋಷಣೆಯ ಭಾಗವಾಗಿ ವಿಶ್ವಸಂಸ್ಥೆಯ ಆರೋಗ್ಯ ಸಂಸ್ಥೆಯಿಂದ (ಡಬ್ಲ್ಯುಎಚ್‌ಒ) ಹೊರಬಂದಿದ್ದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಂದು ಮಹತ್ವದ ನಿರ್ಧಾರಕ್ಕೆ ಸಹಿ ಹಾಕಿದ್ದಾರೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಿಂದ ಹೊರಕ್ಕೆ, ಪ್ಯಾಲೆಸ್ಟೈನ್ ನಿರಾಶ್ರಿತರ ಪರಿಹಾರ ಕಾರ್ಯಗಳಿಗೆ ನೀಡುತ್ತಿರುವ ಹಣ ಕಡಿತ ಮತ್ತು ಪರಮಾಣು ಒಪ್ಪಂದದಿಂದ ಹಿಂದೆ ಸರಿದಿರುವ ಇರಾನ್ ಮೇಲೆ ಆರ್ಥಿಕ ಒತ್ತಡ ಹೇರುವ ಕಾರ್ಯಕಾರಿ ಆದೇಶಕ್ಕೆ ಟ್ರಂಪ್ ಅಸ್ತು ಎಂದಿದ್ದಾಗಿ ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ಟ್ರಂಪ್, ಇರಾನ್ ಮೇಲೆ ಒತ್ತಡ ಹೇರುವ ಬಗ್ಗೆ ಕಠಿಣ ನಿರ್ಧಾರ ಕೈಗೊಂಡಿದ್ದೇವೆ. ಇದು ಕಷ್ಟವಾದರೂ ಮತ್ತು ಇಷ್ಟವಿಲ್ಲದಿದ್ದರೂ ಆದೇಶ ಹೊರಡಿಸಿದ್ದೇನೆ. ಆದಾಗ್ಯೂ ಕಾಲ ನಿರ್ಣಯದಂತೆ ಕ್ರಮ ವಹಿಸಬೇಕಾಗಿದೆ ಎಂದಿದ್ದಾರೆ.

ಇರಾನ್‌ನ ತೈಲ ರಫ್ತಿನ ಮೇಲೆ ಹೆಚ್ಚಿನ ಸುಂಕ ಸೇರಿದಂತೆ ಗರಿಷ್ಠ ಪ್ರಮಾಣದಲ್ಲಿ ಆರ್ಥಿಕ ನಿರ್ಬಂಧಗಳನ್ನು ವಿಧಿಸಲು ಟ್ರಂಪ್ ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಖಜಾನೆ ಇಲಾಖೆಗೆ ನಿರ್ದೇಶನ ನೀಡಲಾಗಿದೆ.ಮುಸ್ಲಿಂ ರಾಷ್ಟ್ರದ ಮೇಲೆ ಕ್ರಮಕ್ಕೆ ಅಮೆರಿಕದ ಹಲವು ಸೆನೆಟರ್‌ಗಳು ಕೂಡ ಒತ್ತಾಯಿಸಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು

ಬಿಜೆಪಿ ಕಾರ್ಯಕರ್ತರ ವಿಜಯೋತ್ಸವ



ಕುಶಾಲನಗರದ ಗಣಪತಿ ದೇವಸ್ಥಾನದ ಮುಂಭಾಗ ಕಾರ್ಯಕರ್ತರ ವಿಜಯೋತ್ಸವ.



ವಿರಾಜಪೇಟೆಯ ಗಡಿಯಾರ ಕಂಬದ ಬಳಿ ಬಿಜೆಪಿ ಕಾರ್ಯಕರ್ತರ ವಿಜಯೋತ್ಸವ

ಮಡಿಕೇರಿ, ಫೆ8– ದೆಹಲಿಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಮಡಿಕೇರಿ, ಕುಶಾಲನಗರ, ವಿರಾಜಪೇಟೆ ಸೇರಿದಂತೆ ಜಿಲ್ಲೆಯಾದ್ಯಂತ ವಿಜಯೋತ್ಸವ ಆಚರಿಸಿದರು.

ಕುಶಾಲನಗರದ ಗಣಪತಿ ದೇವಸ್ಥಾನದ ಮುಂಭಾಗದಲ್ಲಿ ಕುಶಾಲನಗರ ಬಿಜೆಪಿ ಮಹಾಶಕ್ತಿ ಕೇಂದ್ರದ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು. ಪ್ರಧಾನಿ ಮೋದಿ ಹಾಗೂ ಬಿಜೆಪಿ ಪರ ಜಯಕಾರ ಮೊಳಗಿಸಿದ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಚರಣ್, ಪ್ರಧಾನ ಕಾರ್ಯದರ್ಶಿ ಮಧುಸೂದನ್, ಮಂಡಲ ಅಧ್ಯಕ್ಷ ಗೌತಮ್, ಯುವ ಮೋರ್ಚಾ ನಗರ ಕಾರ್ಯದರ್ಶಿ ಸಚಿನ್, ಆದರ್ಶ್, ಪ್ರಮುಖರಾದ ಚಂದ್ರು, ಉಮಾಶಂಕರ್, ಕುಮಾರಪ್ಪ, ಪ್ರವೀಣ್, ಗಣಪತಿ, ಡಿ.ಕೆ.ತಿಮ್ಮಪ್ಪ, ಚಂದ್ರಶೇಖರ್ ಹೇರೂರು, ಜಿ.ಎಲ್.ನಾಗರಾಜು, ನಾಣಿ ನಾರಾಯಣ ಮತ್ತಿತರರು ಪಾಲ್ಗೊಂಡಿದ್ದರು.

ವಿರಾಜಪೇಟೆ: ವಿರಾಜಪೇಟೆಯ ಗಡಿಯಾರ ಕಂಬದ ಬಳಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ ವಿಜಯೋತ್ಸವ ಸಂದರ್ಭದಲ್ಲಿ ಮಾತನಾಡಿ, ಕಳೆದ ಹಲವು ವರ್ಷಗಳಿಂದಲೂ ದೆಹಲಿಯಲ್ಲಿ ಅಧಿಕಾರ ದೊರೆತಿರಲಿಲ್ಲ. ಇಂದು ಬಿಜೆಪಿ ಪಕ್ಷ ಬಹುಮತ ಪಡೆದಿದ್ದು ಅಧಿಕಾರ ವಹಿಸಿಕೊಳ್ಳಲಿದೆ. ಮುಂದಿನ ದಿನದಲ್ಲಿ ಎಲ್ಲಾ ರಾಜ್ಯಗಳಲ್ಲಿಯು ನಮ್ಮ ಪಕ್ಷ ಅಧಿಕಾರಕ್ಕೆ ಬರುವಂತೆ ಕೆಲಸ ಮಾಡುವುದಾಗಿ ಹೇಳಿದರು.

ವಿರಾಜಪೇಟೆ ಮಂಡಳದ ಅಧ್ಯಕ್ಷರಾದ ಸುವಿನ್ ಗಣಪತಿ ವಿಜಯೋತ್ಸವದ ಮುಂದಾಳತ್ವ ವಹಿಸಿ ಮಾತನಾಡಿದರು. ವಿಜಯೋತ್ಸವ ಸಂದರ್ಭ ರಾಜ್ಯ ಶಿಸ್ತು ಸಮಿತಿಯ ರೀನಾ ಪ್ರಕಾಶ್, ಪಕ್ಷದ ಪುರಸಭೆ ಸದಸ್ಯರಾದ ಜೂನಾ, ಅನಿತಾ, ಆಶಾ ಸುಬ್ಬಯ್ಯ, ಜಿಪಂ ಮಾಜಿ ಸದಸ್ಯ ಶಶಿ ಸುಬ್ರಹ್ಮಣ್ಯ ಮುಖಂಡರಾದ ರಘು ನಾಣಯ್ಯ, ಕುಟ್ಟಂಡ ತಿಮ್ಮಯ್ಯ, ನೆಲ್ಲಮಕ್ಕಡ ನಾಚಪ್ಪ, ವಿನೂಪ್ ಕುಮಾರ್, ಸುರೇಶ್, ಎಂ.ಕೆ.ಕುಶಾಲಪ್ಪ, ಉಣ್ಣಿಕೃಷ್ಣನ್, ಎನ್.ಎನ್.ಶಿವು, ಸುಮೇಶ್ ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಹುಚ್ಚುನಾಯಿ ಕಚ್ಚಿ ಹಸು ಸಾವು

ಸುಂಟಿಕೊಪ್ಪ: ಇಲ್ಲಿನ ವಿಕ್ರಂ ಬಡಾವಣೆಯಲ್ಲಿ ಹುಚ್ಚು ನಾಯಿಯೊಂದು ಹಸುವಿಗೆ ಕಚ್ಚಿದ ಪರಿಣಾಮ ಹಸು ಸಾವನ್ನಪ್ಪಿದ್ದು, ಗ್ರಾಮದ ನಿವಾಸಿಗಳಲ್ಲಿ ಆತಂಕ ಮೂಡಿದೆ.

ಇತ್ತೀಚೆಗೆ ಕೆದಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ 7ನೇ ಮೈಲ್ ಗ್ರಾಮದ ವಿಕ್ರಂ ಬಡಾವಣೆಯಲ್ಲಿ ಹುಚ್ಚುನಾಯಿಯೊಂದು ಹಸು ಸೇರಿದಂತೆ ಇತರೆ ಪ್ರಾಣಿಗಳಿಗೆ ಕಚ್ಚಿದೆ. ಹುಚ್ಚುನಾಯಿ ಕಡಿತಕ್ಕೀಡಾದ ಹಸು ಸಾವನ್ನಪ್ಪಿದ್ದು ಇದೀಗ ಸಾಕುನಾಯಿಗಳು ಸೇರಿದಂತೆ ಇತರೆ ಪ್ರಾಣಿಗಳು ಕೂಡ ಕಡಿತಕ್ಕೆ ಒಳಗಾಗಿರುವ ಸಂಶಯವನ್ನು ಈ ಭಾಗದ ನಿವಾಸಿಗಳು ವ್ಯಕ್ತಪಡಿಸಿದ್ದಾರೆ. ಗ್ರಾಮ ಪಂಚಾಯಿತಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಮುಂದಾಗುವ ಅನಾಹುತವನ್ನು ತಪ್ಪಿಸಬೇಕೆಂದು ಬಡಾವಣೆ ನಿವಾಸಿಗಳು ಆಗ್ರಹಿಸಿದ್ದಾರೆ.

ಇಂದು ಶ್ರೀ ಅಲ್ಲಮಪ್ರಭುಗಳ ವಿಚಾರಧಾರೆ ಉಪನ್ಯಾಸ

ಕುಶಾಲನಗರ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಕೊಡಗು ಜಿಲ್ಲಾ ಘಟಕ ಮತ್ತು ಕೊಡಗು ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಫೆ.9 ರಂದು ಶ್ರೀ ಅಲ್ಲಮಪ್ರಭುಗಳ ವಿಚಾರಧಾರೆ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಸಂಜೆ 4.30 ಗಂಟೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ಕಲ್ಮಠದ ಮಹಾಂತ ಸ್ವಾಮೀಜಿ ವಹಿಸುವರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕೊಡಗು ಜಿಲ್ಲಾ ಘಟಕ ಅಧ್ಯಕ್ಷ ಎಚ್.ವಿ.ಶಿವಪ್ಪ ಅಧ್ಯಕ್ಷತೆ ವಹಿಸುವರು. ಶ್ರೀ ಅಲ್ಲಮಪ್ರಭುಗಳ ವಿಚಾರ ಕುರಿತು ಆಧ್ಯಾತ್ಮ ಚಿಂತಕ ಡಾ. ವೀಣಾ ಬನ್ನಂಜೆ ಉಪನ್ಯಾಸ ನೀಡುವರು.

ಹಾಕಿ ಸ್ಟಿಕ್‌ನಿಂದ ಹೊಡೆದು ಪತಿಯನ್ನು ಕೊಂದ ಪತ್ನಿ



ಕೊಲೆಯಾದ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸುತ್ತಿರುವುದು.

ಮಡಿಕೇರಿ, ಫೆ.8– ಪತಿ ಪತ್ನಿಯ ನಡುವೆ ನಡೆದ ಕಲಹ ಪತಿಯ ಸಾವಿನಲ್ಲಿ ಅಂತ್ಯ ಕಂಡ ಘಟನೆ ಪೊನ್ನಂಪೇಟೆ ತಾಲೂಕಿನ ಹುದ್ದೂರು ಗ್ರಾಮದ ಸೀತಾ ಕಾಲೋನಿಯಲ್ಲಿ ಸಂಭವಿಸಿದೆ.

ಪಣಿ ಎರವರ ಮಣಿ(50) ಎಂಬವರೇ ಮೃತ ವ್ಯಕ್ತಿಯಾಗಿದ್ದು, ಕೊಲೆ ಆರೋಪದಲ್ಲಿ ಪತ್ನಿ ಸೀತೆ(40)ಯನ್ನು ಪೊಲೀಸರು ಬಂಧಿಸಿದ್ದಾರೆ.

ಶುಕ್ರವಾರ ರಾತ್ರಿ ಪಣಿ ಎರವರ ಮಣಿ ಹಾಗೂ ಪತ್ನಿ ಸೀತೆ ಮದ್ಯಪಾನ ಮಾಡಿಕೊಂಡು ಹೊಡೆದಾಡಿಕೊಂಡಿದ್ದಾರೆ. ಈ ವೇಳೆ ಗಂಡನ ಮುಖ ಹಾಗೂ ತಲೆಯ ಭಾಗಕ್ಕೆ ಪತ್ನಿ ಸೀತೆ ಹಾಕಿ ಸ್ಟಿಕ್‌ನಲ್ಲಿ ಹೊಡೆದಿದ್ದಾರೆ. ಹಲ್ಲೆಯಿಂದ ಗಂಭೀರ ಗಾಯಗೊಂಡಿದ್ದ ಪಣಿ ಎರವರ ಮಣಿ ಶನಿವಾರ ಬೆಳಗಿನ ಜಾವ ಶೌಚಾಲಯಕ್ಕೆ ತೆರಳಿ ಬಳಿಕ ಮನೆಯಲ್ಲಿ ಮಲಗಿದ್ದು ನಂತರ ಮೃತಪಟ್ಟಿದ್ದಾರೆ.

ಘಟನಾ ಸ್ಥಳಕ್ಕೆ ವಿರಾಜಪೇಟೆ ಡಿವೈಎಸ್‌ಪಿ ಎಸ್.ಮಹೇಶ್ ಕುಮಾರ್, ಗೋಣಿಕೊಪ್ಪ ವೃತ್ತ ನಿರೀಕ್ಷಕ ಶಿವರಾಜ್ ಆರ್.ಮುಧೋಳ್, ಪೊನ್ನಂಪೇಟೆ ಪೊಲೀಸ್ ಠಾಣಾಧಿಕಾರಿ ನವೀನ್ ಕುಮಾರ್, ಗೋಣಿಕೊಪ್ಪ ಎಎಸ್‌ಐ ದೇವರಾಜ್ ಪಿ.ಜಿ, ಪೊನ್ನಂಪೇಟೆ ಪೊಲೀಸ್ ಸಿಬ್ಬಂದಿಗಳಾದ ಎಸ್.ಬಿ. ಮಹಾದೇವ ಸ್ವಾಮಿ, ಹೆಚ್.ಸಿ ಸುರೇಂದ್ರ, ಮಜೀದ್, ಪಿ.ಎ. ಮಹಮ್ಮದ್ ಅಲಿ, ಪ್ರಸನ್ನ ಕುಮಾರ್, ಹರೀಶ್, ಪ್ರವೀಣ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾಡಾನೆ ದಾಳಿ: ಪ್ರಾಣಾಪಾಯದಿಂದ ಪಾರಾದ ರೈತ



ಆನೆ ದಾಳಿಯಿಂದ ಗಾಯಗೊಂಡಿರುವ ರೈತ ಪುಟ್ಟರಾಜ (ವಿಜಯ).



ಮನೆಯ ಮುಂದೆ ನಿಂತಿದ್ದ ಬೈಕನ್ನು ಜಖಂಗೊಳಿಸಿರುವ ಕಾಡಾನೆ

ಕುಶಾಲನಗರ , ಫೆ.8– ಸಮೀಪದ ತೊರೆನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಸಿದ್ದಲಿಂಗಾಪುರ ಬಳಿಯ ಅರಿಸಿಣಗುಪ್ಪೆ ಗ್ರಾಮದಲ್ಲಿ ತಮ್ಮ ಹೊಲಕ್ಕೆ ನೀರು ಹಾಯಿಸುತ್ತಿದ್ದ ವೇಳೆ ಕಾಡಾನೆ ದಾಳಿಗೆ ಮುನ್ನುಗ್ಗಿದ ವೇಳೆ ಕೂದಲೆಳೆ ಅಂತರದಲ್ಲಿ ರೈತನೋರ್ವ ಪಾರಾದ ಘಟನೆ ನಡೆದಿದೆ.

ಅರಿಸಿನಗುಪ್ಪೆ ಗ್ರಾಮದ ರೈತ ಪುಟ್ಟರಾಜ (ವಿಜಯ) ಎಂಬಾತನೆ ಕಾಡಾನೆ ದಾಳಿಯಿಂದ ತಪ್ಪಿಸಿಕೊಂಡಿದ್ದಾನೆ.

ಮನೆಯ ಸಮೀಪದ ಹೊಲದಲ್ಲಿ ಪೈಪ್ ಜೋಡಿಸುತ್ತಿದ್ದ ವೇಳೆ ಕಾಡಾನೆ ದಾಳಿಯಿಂದ ತಪ್ಪಿಸಿಕೊಳ್ಳಲು ತಕ್ಷಣ ಮನೆಯೊಳಗೆ ಓಡಿ ಹೋಗಿದ್ದಾನೆ. ಆಗ ಆನೆಯು ಕೋಪಗೊಂಡು ಮನೆಯ ಸುತ್ತಲೂ ಅತ್ತಿಂದಿತ್ತ ಓಡಾಡಿದೆ. ಈ ಮನೆಯೊಳಗೇ ಪುಟ್ಟರಾಜರವರ ಪತ್ನಿ ಹಾಗೂ ತಾಯಿ ಇದ್ದು, ಮೂವರು ಪ್ರಾಣಾ ಪಾಯದಿಂದ ಪಾರಾಗಿದ್ದಾರೆ. ಮನೆಯ ಮುಂಭಾಗ ನಿಲ್ಲಿಸಿದ್ದ ಬೈಕ್ ಹಾನಿ ಮಾಡಿದೆ. ನಂತರ ಬಾಣಾವರ ಅರಣ್ಯ ಹೋದ ಎರಪರೆ ಭಾಗಕ್ಕೆ ಕಾಡಾನೆ ಹೋಗಿದೆ. ವಿಷಯ ತಿಳಿದ ಬಾಣಾವರ ಉಪ ವಲಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ದೆಹಲಿ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು

ಮಂಡ್ಯದಲ್ಲಿ ಸಂಭ್ರಮಾಚರಣೆ



ಮಂಡ್ಯ ನಗರದಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸುತ್ತಿರುವುದು.

ಮಂಡ್ಯ, ಫೆ8– ರಾಷ್ಟ್ರ ರಾಜಧಾನಿ ದೆಹಲಿ ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಪ್ರಚಂಡ ಗೆಲುವು ಸಾಧಿಸಿರುವುದರಿಂದ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಸಂಭ್ರಮ ಆಚರಿಸಿದರು.

ನಗರದ ಜೆಸಿ ವೃತ್ತದಲ್ಲಿ ಜಮಾವಣೆಗೊಂಡ ಜಿಲ್ಲಾ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು, ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ನಾಯಕರ ಹೆಸರು ಕೂಗಿ ವಿಜಯೋತ್ಸವ ಆಚರಿಸಿದರು.

ಬಳಿಕ ಮಾತನಾಡಿದ ಜಿಲ್ಲಾ ಬಿಜೆಪಿ ಮುಖಂಡ ಎಚ್.ಆರ್.ಅರವಿಂದ್, ಕಳೆದ 20 ವರ್ಷಗಳ ಹಿಂದೆ ಭ್ರಷ್ಟಾಚಾರ ವಿರೋಧಿ ಆಂದೋಲನದ ನಾಯಕ ಅಣ್ಣಾ ಅಜಾರೆ ತಂಡ ದಲ್ಲಿ ಗುರುತಿಸಿಕೊಂಡಿದ್ದ ಕೇಜ್ರಿವಾಲ್ ಮತ್ತು ತಂಡ ಪಕ್ಷ ಕಟ್ಟಿ ದೆಹಲಿ ಚುನಾವಣೆಯಲ್ಲಿ ಅಧಿಕಾರ ನಡೆಸಿ, ಭ್ರಷ್ಟಾಚಾರದ ಆರೋಪದಲ್ಲಿ ಜೈಲು ಸೇರಿ, ಬಿಜೆಪಿ ಮತ್ತು ನರೇಂದ್ರ ಮೋದಿಯ ವರನ್ನು ಹೀಯ್ಯಾಳಿಸುತ್ತಿದ್ದರು. ಇಂದು ಹೀನಾಯ ಸೋಲುಕಂಡಿರುವುದು ನಾಚಿಕೆ ಗೇಡಿನ ಸಂಗತಿ ಎಂದು ಎಚ್ಚರಿಸಿದರು.

ಈ ಬಾರಿ ದೆಹಲಿಯ 70 ವಿಧಾನ ಸಭಾ ಕ್ಷೇತ್ರಗಳಿಗೆ ಫೆಬ್ರವರಿ 5ರಂದು ಮತದಾನ ನಡೆದಿದ್ದು, ಆಮ್‌ಆದ್ಮಿ ಪಕ್ಷ(ಎಎಪಿ), ಬಿಜೆಪಿ, ಮತ್ತು ಕಾಂಗ್ರೆಸ್ ಪಕ್ಷಗಳು ಮುಖ್ಯ ಪೈಪೋಟಿ ನೀಡಿದ್ದವು, ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ, ಬಿಜೆಪಿ ಬಹುಮತ ಪಡೆಯುವ ಸಾಧ್ಯತೆ ಇದೆ ಎಂದು ಹೇಳಲಾಗಿತ್ತು ಎಎಪಿ ಈ ಸಮೀಕ್ಷೆಗಳನ್ನು ನಿರಾಕರಿಸಿದ್ದು, ತಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದು ಸುಳ್ಳಾಗಿದೆ ಎಂದು ಹರ್ಷವ್ಯಕ್ತಪಡಿಸಿದರು.

27 ವರ್ಷಗಳ ವನವಾಸದ ನಂತರ ದೆಹಲಿಯಲ್ಲಿ ಬಿಜೆಪಿ ಪುನರಾಗಮನದ ಹಾದಿಯಲ್ಲಿದೆ, ಎಎಪಿ ಮತ್ತು ಕಾಂಗ್ರೆಸ್ ಹೀನಾಯ ಸೋಲು ಕಂಡಿವೆ,70 ಸ್ಥಾನಗಳ ಪೈಕಿ 48 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. 2020ರ ವಿಧಾನಸಭಾ ಚುನಾವಣೆಯಲ್ಲಿ ಒಂದಂಕಿ ಸ್ಥಾನಗಳನ್ನು ಪಡೆದಿದ್ದ ಬಿಜೆಪಿ ಈ ಬಾರಿ ಭರ್ಜರಿ ಯಶಸ್ಸಿನ ಮೂಲಕ ಪುನರಾಗಮನ ಮಾಡಿದೆ ಎಂದು ನುಡಿದರು.

ಬಿಜೆಪಿ ಮುಖಂಡರಾದ ಹೊಸಹಳ್ಳಿ ಶಿವು, ಶಿವಕುಮಾರ್ ಆರಾಧ್ಯ ಅರಸು, ಕೆಂಪಬೋರಯ್ಯ ಸಿ.ಟಿ.ಮಂಜುನಾಥ್, ನಾಗಾನಂದ್, ನಿತ್ಯಾನಂದ್ ಮತ್ತಿತರು ಭಾಗವಹಿಸಿದ್ದರು.

ಸಬ್ಬನಹಳ್ಳಿ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷೆ ಆಯ್ಕೆ



ಭಾರತೀನಗರ ಸಮೀಪದ ಸಬ್ಬನಹಳ್ಳಿ ಸೊಸೈಟಿಗೆ ಅಧ್ಯಕ್ಷರಾಗಿ ಸಬ್ಬನಹಳ್ಳಿ ಹೊನ್ನೇಗೌಡ, ಉಪಾಧ್ಯಕ್ಷೆಯಾಗಿ ಕಾಂತಮ್ಮ ಅವರು ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಗ್ರಾಮದ ಮುಖಂಡರು, ಯಜಮಾನರು, ಅಭಿನಂದಿಸಿ ಗೌರವಿಸಿದರು.

ಜಮೀನು ಖಾತೆಗೆ ಆಗ್ರಹಿಸಿ ಏಕಾಂಗಿ ಪ್ರತಿಭಟನೆ



ಪಾಂಡವಪುರ, ಫೆ8– ತಾಲೂಕಿನ ಅಂತನಹಳ್ಳಿ ಗ್ರಾಮದಲ್ಲಿ ಕಳೆದ 80 ವರ್ಷಗಳಿಂದ ಉಳುಮೆ ಮಾಡಿಕೊಂಡು ಅನುಭವದಲ್ಲಿ ಇರುವಂತಹ ಜಮೀನನ್ನು ತಮ್ಮ ಹೆಸರಿಗೆ ಖಾತೆ ಮಾಡಿಕೊಡುವಂತೆ ಆಗ್ರಹಿಸಿ ಗ್ರಾಮದ ನಿವಾಸಿ ಮಂಜುನಾಥ್ ಎಂಬಾತ ಪಟ್ಟಣದ ತಾಲೂಕು ಕಚೇರಿ ಎದುರು ಶುಕ್ರವಾರದಿಂದ ಅನಿರ್ದಿಷ್ಟ ಅವಧಿಗೆ ಏಕಾಂಗಿ ಪ್ರತಿಭಟನೆ ಆರಂಭಿಸಿದ್ದಾರೆ.

ತಾಲೂಕಿನ ಅಂತನಹಳ್ಳಿ ಗ್ರಾಮದ ಸರ್ವೆ 111 ರ ಸರಕಾರಿ ಜಮೀನಿನಲ್ಲಿ ನಮ್ಮ ತಾತ, ತಂದೆ ಅವರ ಕಾಲದಿಂದ ಸುಮಾರು ಎರಡು ಎಕರೆ ಪ್ರದೇಶದಲ್ಲಿ ಉಳುಮೆ ಮಾಡಿಕೊಂಡು ಬರುತ್ತಿದ್ದೇವೆ ನಾವು ಉಳುಮೆ ಮಾಡಿಕೊಂಡು ಅನುಭವದಲ್ಲಿ ಇರುವಂತಹ ಜಮೀನನ್ನು ನಮ್ಮ ಹೆಸರಿಗೆ ಖಾತೆ ಮಾಡಿಕೊಡುವಂತೆ ಅನೇಕ ಬಾರಿ ಜಿಲ್ಲಾಧಿಕಾರಿ, ತಹಸೀಲ್ದಾರ್ ಸೇರಿದಂತೆ ಅನೇಕರಿಗೆ ಮನವಿ ನೀಡಿದರೂ ಸಹ ಈವರೆಗೂ ಯಾರು ಸಹ ಖಾತೆ ಮಾಡಿಕೊಡುತ್ತಿಲ್ಲ ಎಂದು ಅವರು ಆಪಾದಿಸಿದರು.

ನಮಗೆ ಇರುವುದು ಇದೊಂದೆ ಜಮೀನು, ಭೂಮಿಯನ್ನು ಖಾತೆ ಮಾಡಿಕೊಡದ ಹಿನ್ನೆಲೆಯಲ್ಲಿ ನಮಗೆ ಯಾವುದೇ ಸೌಲಭ್ಯವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ನಾವು ಅನುಭವದಲ್ಲಿ ಇರುವ ಜಮೀನನ್ನು ಖಾತೆ ಮಾಡಿಕೊಡಬೇಕೆಂದು ಆಗ್ರಹಿಸಿ ತಾಲೂಕು ಕಚೇರಿ ಎದುರು ಏಕಾಂಗಿಯಾಗಿ ಅನಿರ್ದಿಷ್ಟ ಅವಧಿಗೆ ಪ್ರತಿಭಟನೆ ಆರಂಭಿಸಿದ್ದೇನೆ. ಸಂಬಂಧಿಸಿದ ಅಧಿಕಾರಿಗಳು ನನ್ನ ಮನವಿಯನ್ನು ಪುರಸ್ಕರಿಸುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಎಚ್ಚರಿಸಿದರು.

ಮಂಡ್ಯದಲ್ಲಿ ಮೈಸೂರು ಆಕಾಶವಾಣಿ-90 ಕಾರ್ಯಕ್ರಮ

ಸಮಯಪಾಲನೆಯಲ್ಲಿ ಆಕಾಶವಾಣಿ ಎಲ್ಲರಿಗೂ ಮಾದರಿ



'ಭಾವ ಜನಪದ ರಂಗ' ಕಾರ್ಯಕ್ರಮ ಉದ್ಘಾಟಿಸುತ್ತಿರುವುದು.

ಮಂಡ್ಯ, ಫೆ.8– ಆಕಾಶವಾಣಿಯಲ್ಲಿ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮಗಳು ಮೂಡಿ ಬರುತ್ತವೆ. ಸಮಯಕ್ಕೆ ಹೆಚ್ಚು ಮಹತ್ವ ನೀಡುವುದು ಆಕಾಶವಾಣಿಯ ವಿಶೇಷವಾಗಿದ್ದು, ಸಮಯಪಾಲನೆಯಲ್ಲಿ ಆಕಾಶವಾಣಿ ಮಾದರಿಯಾಗಿದೆ ಎಂದು ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಅಭಿಪ್ರಾಯಪಟ್ಟರು.

ಭಾರತ ಸರ್ಕಾರ, ಪ್ರಸಾರ ಭಾರತಿ, ಆಕಾಶವಾಣಿ ಮೈಸೂರು ಎಫ್.ಎಂ 100.6 ವತಿಯಿಂದ ಮೈಸೂರು ಆಕಾಶವಾಣಿ–90 ಪ್ರಯುಕ್ತ ಮಂಡ್ಯ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಏರ್ಪಡಿಸಿದ್ದ 'ಭಾವ ಜನಪದ ರಂಗ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮನೆಯಲ್ಲಿ ಗಡಿಯಾರದ ಸಮಯ ಹೊಂದಿಸುವಾಗ ರೇಡಿಯೋ ಟೈಮ್ ಕೇಳಿಕೊಂಡು ಸರಿ ಹೊಂದಿಸುವುದು ಸಾಮಾನ್ಯವಾಗಿದೆ ಎಂದರು.

ಆಕಾಶವಾಣಿ ವಿಶೇಷವಾಗಿ ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅತ್ಯುತ್ತಮವಾದಂತ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ನಮ್ಮ ಮಂಡ್ಯ ನಗರದಲ್ಲೂ ಆಯೋಜನೆ ಮಾಡಿದೆ. ಗ್ರಾಮೀಣ ಸೊಗಡನ್ನು ಬಿಂಬಿಸುವ ಅನೇಕ ಕಾರ್ಯಕ್ರಮಗಳನ್ನು ನೀಡುತ್ತಿದೆ. ವಿದ್ಯಾರ್ಹತೆಗಿಂತ ಅರ್ಹತೆಗೆ ಹೆಚ್ಚು ಪ್ರೋತ್ಸಾಹವನ್ನು ಆಕಾಶವಾಣಿ ನೀಡುತ್ತದೆ. ನಾವೆಲ್ಲರೂ ಇಂತಹ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳತಕ್ಕಂತ ಮತ್ತು ಉತ್ತೇಜಿಸುವಂತಹ ಕೆಲಸ ಮಾಡಬೇಕು. ಆಕಾಶವಾಣಿ ಸಿಬ್ಬಂದಿ ನೋಡಿ ನಾವು ಕಲಿಯುವಂತಹದ್ದು ಬಹಳ ಇದೆ. ಸಮಾಜದಲ್ಲಿ ನಡೆಯುತ್ತಿರುವ ವಿಷಯಗಳನ್ನು ತಿಳಿಸುವ ಒಂದು ಮುಖ್ಯವಾಹಿನಿ ಆಕಾಶವಾಣಿ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಂದೀಶ್, ಆಕಾಶವಾಣಿ ಮೈಸೂರು ವಿಭಾಗದ ಸಹಾಯಕ ನಿರ್ದೇಶಕ ಟಿ.ವಿ.ವಿದ್ಯಾಶಂಕರ್ ಮಾತನಾಡಿದರು. ಸಮಾರಂಭದಲ್ಲಿ ಆಕಾಶವಾಣಿ ಮೈಸೂರು ವಿಭಾಗದ ಸಹಾಯಕ ನಿರ್ದೇಶಕ ಕೇಶವಮೂರ್ತಿ, ಆಕಾಶವಾಣಿ ಹಿರಿಯ ಉದ್ಘೋಷಕ ಮೈಸೂರು ಉಮೇಶ್, ತಾಂತ್ರಿಕ ವಿಭಾಗದ ಮುಖ್ಯಸ್ಥ ಆನಂದನ್ ಮುಂತಾದವರು ಭಾಗವಹಿಸಿದ್ದರು.

ವೇದಿಕೆ ಕಾರ್ಯಕ್ರಮದ ನಂತರ ನಿತಿನ್ ರಾಜಾರಾಮ್ ಶಾಸ್ತ್ರಿ, ಜಯಂತಿ ವಿ ಭಟ್, ಸ್ವಾಮಿ ಗಾಮನಹಳ್ಳಿ ಅವರು ಭಾವಗೀತೆಗಳ ಗಾಯನ ಪ್ರಸ್ತುತಪಡಿಸಿದರು. ನಂತರ ಹೊನ್ನೆಮಡು ಗಂಗಾಧರ್ ಮತ್ತು ತಂಡದಿಂದ ವೀರಭದ್ರನ ಕುಣಿತ, ಕಾರಸವಾಡಿ ದೇವರಾಜು ಮತ್ತು ತಂಡದಿಂದ ಪೂಜಾ ಕುಣಿತ, ಹುಲಿವಾನ ದಿಲೀಪ್ ಕುಮಾರ್ ಮತ್ತು ತಂಡದವ ರಿಂದ ತಮಟೆ ವಾದನ ಕಾರ್ಯಕ್ರಮ ನಡೆಯಿತು.

ಮಂಡ್ಯದ ಡ್ಯಾಫೋಡಿಲ್ಸ್ ಮತ್ತು ಸದ್ವಿದ್ಯಾ ಶಾಲಾ ಮಕ್ಕಳಿಂದ ನೃತ್ಯ ರೂಪಕ, ಮಾಂಡವ್ಯ ರಂಗ ಕಲಾ ಟ್ರಸ್ಟ್ ಸದಸ್ಯರಿಂದ 'ಗದಾಯುದ್ಧ' ಪೌರಾಣಿಕ ನಾಟಕ ಪ್ರದರ್ಶಿತವಾಯಿತು.

ಫೆ.12ರಂದು ಸಾರ್ವಜನಿಕರ ಕುಂದುಕೊರತೆ ಸಭೆ

ಮಂಡ್ಯ, ಫೆ.8– ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಫೆ12 ರಂದು ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ತಾಲೂಕು ಕಚೇರಿ ಆವರಣದಲ್ಲಿ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಸಾರ್ವಜನಿಕರ ಕುಂದುಕೊರತೆ ಸಭೆ ನಡೆಸಿ ಸಾರ್ವಜನಿಕರಿಂದ ದೂರು/ಅಹವಾಲು ಸ್ವೀಕಾರ ಮತ್ತು ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ದೂರುಗಳನ್ನು ಸ್ವೀಕಾರ ಮಾಡಲಿದ್ದಾರೆ.

ಆಕ್ಸಿಜನ್ ದುರಂತ ಸಂತ್ರಸ್ತರಿಗೆ ಉದ್ಯೋಗಕ್ಕೆ ಆಗ್ರಹಿಸಿ ನಾಳೆ ಎಸ್‌ಡಿಪಿಐ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ ಅಬ್ರಾರ್ ಅಹಮ್ಮದ್ ಮಾತನಾಡಿದರು.

ಚಾಮರಾಜನಗರ, ಫೆ.8– ಕೊರೊನಾ ಸಂದರ್ಭದಲ್ಲಿ ನಗರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ ಮೃತಪಟ್ಟವರ ಕುಟುಂಬದ ಓರ್ವ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು ಹಾಗೂ ಜಾತಿ ಗಣತಿ ವರದಿಯನ್ನು ಶೀಘ್ರ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿ ನಗರದಲ್ಲಿ ಫೆ.10ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯರಾದ ಅಬ್ರಾರ್ ಅಹಮ್ಮದ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಭಾರತ್ ಜೋಡೋ ಯಾತ್ರೆಯ ವೇಳೆ ಸಂತ್ರಸರೊಂದಿಗೆ ರಾಹುಲ್ ಗಾಂಧಿ ಅವರು ಸಮಾಲೋಚನಾ ಸಭೆ ನಡೆಸಿದರು. ಸಭೆಯಲ್ಲಿ ಸ್ವತಃ ಸಿದ್ದರಾಮಯ್ಯರವರೇ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಂತ್ರಸ್ತರಿಗೆ ಸೂಕ್ತ ನ್ಯಾಯ ಕಲ್ಪಿಸಿಕೊಡುವುದಾಗಿ ಆಶ್ವಾಸನೆ ನೀಡಿದ್ದರು. ಆದರೆ ಇಲ್ಲಿಯವರೆಗೂ ಸಂತ್ರಸ್ತರ ಅಳಲಿಗೆ ಶಾಶ್ವತ ಪರಿಹಾರ ಸಿಕ್ಕಿಲ್ಲ ಎಂದು ದೂರಿದರು.

ಜಾತಿ ಗಣತಿ ವರದಿ ಬಿಡುಗಡೆಗೆ ಆಗ್ರಹ: 2015ರಲ್ಲಿ ಕಾಂತರಾಜು ಅವರ ನೇತೃತ್ವದಲ್ಲಿ 170 ಕೋಟಿ ಖರ್ಚು ಮಾಡಿ, ಸುಮಾರು 1.5 ಲಕ್ಷ ಜನರು ಸೇರಿ ನಡೆಸಿದ ಜಾತಿ ಗಣತಿಯನ್ನು ಇದುವರೆಗೂ ಬಿಡುಗಡೆಗೊಳಿಸಿಲ್ಲ. ಅನೇಕ ಬಾರಿ ಸಿದ್ದರಾಮಯ್ಯರವರು ಶೀಘ್ರದಲ್ಲೇ ವರದಿ ಬಿಡುಗಡೆಗೊಳಿಸಲಾಗುವುದು ಎಂದು ಹೇಳಿ ತದನಂತರ ರಾಜಕೀಯ ಒತ್ತಡಕ್ಕೆ ಮಣಿದು ತಮ್ಮ ನಿರ್ಧಾರವನ್ನು ಬದಲಾಯಿಸಿದ್ದಾರೆ. ಸಿದ್ದರಾಮಯ್ಯ ಅವರ ನಡೆ ಶೋಷಿತ ಸಮುದಾಯಕ್ಕೆ ಮಾಡಿದ ಘೋರ ಅನ್ಯಾಯವಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಕಲೀಲ್ ಉಲ್ಲಾ, ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್, ವಿವಿಧ ಸಂಘಟನೆಗಳ ಕೆ.ವೆಂಕಟರಾಜು, ಮಹೇಶ್‌ಕುಮಾರ್, ಮರಿಸ್ವಾಮಿ, ಸಂತ್ರಸ್ತೆ ಸವಿತಾ ಹಾಜರಿದ್ದರು.

ದೆಹಲಿ ವಿಧಾನಸಭಾ ಚುನಾವಣೆ ಗೆಲುವು

ಜಿಲ್ಲಾ ಬಿಜೆಪಿಯಿಂದ ವಿಜಯೋತ್ಸವ



ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಶನಿವಾರ ಚಾಮರಾಜನಗರ ಜಿಲ್ಲಾ ಬಿಜೆಪಿ ಘಟಕ ವಿಜಯೋತ್ಸವವನ್ನು ಆಚರಿಸಿತು.

ಚಾಮರಾಜನಗರ, ಫೆ.8– ರಾಷ್ಟ್ರ ರಾಜಧಾನಿ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆ ನಗರದಲ್ಲಿ ಶನಿವಾರ ಜಿಲ್ಲಾ ಬಿಜೆಪಿ ಘಟಕದಿಂದ ಪಟಾಕಿ ಸಿಡಿಸಿ, ವಿಜಯೋತ್ಸವ ಆಚರಿಸಲಾಯಿತು.


ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಪಕ್ಷದ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿ ನಾಯಕರ ಪರವಾಗಿ ಘೋಷಣೆ ಕೂಗಿದರು.

ಬಳಿಕ ಭುವನೇಶ್ವರಿ ವೃತ್ತದಲ್ಲಿ ಪಟಾಕಿ ಸಿಡಿಸಿದ ಕಾರ್ಯಕರ್ತರು ಪರಸ್ಪರ ಸಿಹಿ ವಿನಿಮಯ ಮಾಡಿಕೊಳ್ಳುವುದರ ಜೊತೆಗೆ ನೆರೆದಿದ್ದ ಜನತೆಗೂ ಸಿಹಿ ಹಂಚಿ ದೆಹಲಿಯಲ್ಲಿನ ಪಕ್ಷದ ಗೆಲುವನ್ನು ಸಂಭ್ರಮಿಸಿದರು. ಬಿಜೆಪಿ ಮುಖಂಡ ಜಿ. ನಿಜಗುಣರಾಜು ಮಾತನಾಡಿ, 27 ವರ್ಷಗಳ ಬಳಿಕ ಬಿಜೆಪಿ ದೆಹಲಿಯಲ್ಲಿ ಜಯಭೇರಿ ಬಾರಿಸಿದ್ದು, ಕಾಂಗ್ರೆಸ್ ಪಕ್ಷವು ಶೂನ್ಯದೊಂದಿಗೆ ಮತ್ತೆ ಮುಖಭಂಗವನ್ನು ಅನುಭವಿಸಿದೆ ಎಂದರು.

ನರೇಂದ್ರ ಮೋದಿಯವರ ಆಡಳಿತವನ್ನು ಮೆಚ್ಚಿ ಜನರು ಈ ಬಾರಿ ಬಿಜೆಪಿಯನ್ನು ಗೆಲ್ಲಿಸುವ ಮೂಲಕ, ಎಎಪಿ ಪಕ್ಷದ ದುರಾಡಳಿತವನ್ನು ಕೊನೆಗೊಳಿಸಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಮಂಡಲ ಅಧ್ಯಕ್ಷ ಶಿವರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಮಹೇಶ್, ಮುಖಂಡರಾದ ಡಾ.ಎ.ಆರ್. ಬಾಬು, ಮಹದೇವಯ್ಯ, ಬಸವರಾಜು, ಮೂರ್ತಿ, ಸೂರ್ಯಕುಮಾರ್, ಆನಂದ್ ಭಗೀರಥ, ನಾಗೇಂದ್ರ, ಮಂಜುನಾಥ್, ಮಣಿಕಂಠ, ರಾಜಪ್ಪ, ಕಾಡಳ್ಳಿ ಕುಮಾರ್ ಸೇರಿದಂತೆ ಇನ್ನಿತರರು ಇದ್ದರು.

ಮಹದೇವಯ್ಯ ನಿಧನ



ಚಾಮರಾಜನಗರ: ನಗರದ ಮೇಗಲ ಉಪ್ಪಾರ ಬೀದಿಯ ನಿವಾಸಿ, ಭುಜಂಗೇಶ್ವರ ಬಡಾವಣೆಯಲ್ಲಿ ವಾಸವಾಗಿದ್ದ ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಸಿ.ಎಸ್. ಮಹದೇವಯ್ಯ (86) ಶನಿವಾರ ನಿಧನರಾದರು.

ಮೃತರಿಗೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ ನಗರದ ಉಪ್ಪಾರ ರುದ್ರ ಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಸತ್ಯ–ಅಸತ್ಯ, ಪ್ರಾಮಾಣಿಕತೆ–ಅಪ್ರಾಮಾಣಿಕತೆ ಒಟ್ಟಿಗೆ ಇರಲು ಸಾಧ್ಯವಿಲ್ಲ?



ಹೆಗ್ಗಡಹಳ್ಳಿಯಲ್ಲಿ ನಂಜುಂಡೇಶ್ವರ ಪುನರ್‌ನಿರ್ಮಾಣ ಸಮಾರಂಭವನ್ನು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಉದ್ಘಾಟಿಸಿದರು. ಚಿತ್ರದಲ್ಲಿ ಸುತ್ತೂರು ಶ್ರೀ, ಇತರರು ಇದ್ದಾರೆ.

ಬೇಗೂರು: ಸತ್ಯ–ಅಸತ್ಯ, ಪ್ರಾಮಾಣಿಕತೆ–ಅಪ್ರಾಮಾಣಿಕತೆ ಒಟ್ಟಿಗೆ ಇರಲು ಸಾಧ್ಯವಿಲ್ಲ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹೇಳಿದರು.

ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದ ನಂಜುಂಡೇಶ್ವರ ಸ್ವಾಮಿ ದೇವಸ್ಥಾನ ಪುನರ್‌ನಿರ್ಮಾಣ, ಪುನರ್‌ಪ್ರತಿಷ್ಠಾಪನೆ, ಸಂಪ್ರೋಕ್ಷಣೆ, ವಿಮಾನ ಗೋಪುರ,ಕಳಶ ಸ್ಥಾಪನೆ, ಕುಂಭಾಭಿಷೇಕ ಹಾಗು ಧಾರ್ಮಿಕ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸತ್ಯ, ಪ್ರಾಮಾಣಿಕತೆಯಿಂದ ಸನ್ಮಾರ್ಗದಲ್ಲಿ ನಡೆದರೆ ಧಾರ್ಮಿಕ ಪ್ರಜ್ಞೆ ಇದೆ ಎಂದರ್ಥ. ಸತ್ಯ ಹೇಳಬಹುದು, ಧರ್ಮ ಹೇಳಲು ಆಗುವುದಿಲ್ಲ. ಧರ್ಮ ಆಚರಣೆ ಮಾಡಬೇಕು. ದೇವರಲ್ಲಿ ನಂಬಿಕೆ ಇದ್ದಾಗ ಮಾತ್ರ ಭಗವಂತ ಒಲಿಯುತ್ತಾನೆ. ಧರ್ಮ, ಆಧ್ಯಾತ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಅರ್ಥ ಬರಲಿದೆ. ಸತ್ಯದ ಕಡೆ ನಡೆಯುವುದು ವೈಯಕ್ತಿಕವಾಗಿ ಬರಬೇಕು. ಧಾರ್ಮಿಕ ಪ್ರಜ್ಞೆ ಅರಿವಿಗೆ ಬಂದಾಗ ಆಚರಣೆಗಳು ನಡೆಯುತ್ತವೆ ಎಂದರು.

ವಿವೇಚನೆ, ಆಲೋಚನೆ ಮನುಷ್ಯನಿಗೆ

ಸುತ್ತೂರು ಶ್ರೀಗಳ ಅಭಿಪ್ರಾಯ

ಇದೆ. ವಿವೇಚನೆ ಮತ್ತು ಆಲೋಚನೆ ಇಲ್ಲದೆ ಇರುವುದರಿಂದಲೇ ರಷ್ಯಾ, ಉಕ್ರೇನ್, ಇಸ್ರೇಲ್‌ನಲ್ಲಿ ಪ್ರತಿ ನಿತ್ಯ ಸಾವು, ನೋವು ನಡೆಯುತ್ತಲೇ ಇವೆ. ದೇವಸ್ಥಾನಗಳು ಜಾಗೃತಿ ಹಾಗೂ ನ್ಯಾಯ ಸ್ಥಾನಗಳಾಗಿದ್ದವು ಎಂದರು.

ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಸಮಾರಂಭ ಉದ್ಘಾಟಿಸಿ ಮಾತನಾಡಿ, ಧಾರ್ಮಿಕ ಆಚರಣೆಗಳಿಂದ ಜನರ ಮನಸ್ಸಿಗೆ ನೆಮ್ಮದಿ ತರಲಿದೆ ಎಂದರಲ್ಲದೆ, ಗ್ರಾಮದ ದೇವಸ್ಥಾನದ ರೂವಾರಿ ದಿವಂಗತ ಎಚ್.ಕೆ.ರಾಜಶೇಖರಪ್ಪ ಅವರ ಗುಣಗಾನ ಮಾಡಿದರು.

ಮೂಡುಗೂರು ಮಠಾಧೀಶ ಇಮ್ಮಡಿ ಉದ್ದಾನ ಸ್ವಾಮೀಜಿ ಮಾತನಾಡಿ, ದೇವರನ್ನು ಗುಡಿಯಲ್ಲಿ ಪೂಜಿಸುವುದು ಭಾರತೀಯ ಸಂಸ್ಕೃತಿ. ದೇವರನ್ನು ಪರಮಾತ್ಮನಲ್ಲಿ ಕಾಣಬೇಕು ಎಂದರು.

ಕಬ್ಬಹಳ್ಳಿ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಎಸ್.ಸಿದ್ದರಾಜಪ್ಪ, ಚಿಕ್ಕತುಪ್ಪೂರು ಮಠಾಧೀಶ ಚೆನ್ನವೀರ ಸ್ವಾಮೀಜಿ, ಮುಖ್ಯ ಭಾಷಣ ಮಾಡಿದರೆ, ಸಾಹಿತಿ ಪಿ.ಸಿ.ರಾಜಶೇಖರ, ನಿವೃತ್ತ ಉಪನ್ಯಾಸಕ ನಾಗಭೂಷಣ ಆರಾಧ್ಯ ಮಾತನಾಡಿದರು. ಕಾಡಾ ಮಾಜಿ ಅಧ್ಯಕ್ಷ ಎಚ್.ಎಸ್. ನಂಜಪ್ಪ, ಗೌಡಿಕೆ ಎಚ್.ಆರ್.ಸಿದ್ದೇಶ್, ಗ್ರಾಮದ ಯುವಕರು, ಹಿರಿಯರು ಸೇರಿದಂತೆ ಸುತ್ತ ಮುತ್ತಲಿನ ಸಾವಿರಾರು ಮಂದಿ ಸಭೆಯಲ್ಲಿದ್ದರು.

ಜಮೀನಿನಲ್ಲಿ ಕೇಬಲ್ ಕಳವು

ಬೇಗೂರು: ಸಮೀಪದ ಕಮರಹಳ್ಳಿ ಗ್ರಾಮದ ಬಳಿಯ ನಾಲ್ವರು ರೈತರ ಜಮೀನಿನಲ್ಲಿ ಕೇಬಲ್ ಕಳ್ಳತನ ಇತ್ತೀಚೆಗೆ ನಡೆದಿದೆ.

ಕಮರಹಳ್ಳಿ ಗ್ರಾಮದ ಮಹದೇವಪ್ಪ, ಕೆ.ಬಿ.ಮಹದೇವಸ್ವಾಮಿ,ನಾಗೇಂದ್ರ, ಲೋಕೇಶ್‌ಗೆ ಸೇರಿದ ಕೃಷಿ ಪಂಪ್‌ಸೆಟ್ ಕೇಬಲ್ ಕತ್ತರಿಸಿ ಕಳ್ಳರು ಪರಾರಿಯಾಗಿದ್ದಾರೆ. ಕೇಬಲ್ ಕಳ್ಳತನವಾಗಿರುವ ರೈತರು ಬೇಗೂರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಆದರೆ ಇಲ್ಲಿಯ ತನಕ ದೂರು ದಾಖಲಾಗಿಲ್ಲ ಎನ್ನಲಾಗಿದೆ.

ಕಲಾ ಭವನ 'ವೆಲ್ಲಿಂಗ್ಟನ್'

■ಮೋಹನ್ ಕಾಯಕ

ಅಪರೂಪದ ನಿಧಿ ಸಂರಕ್ಷಣೆ...

80 ಲಕ್ಷ ವೆಚ್ಚದಲ್ಲಿ ವೆಲ್ಲಿಂಗ್ಟನ್ ಕಟ್ಟಡ, 19 ಲಕ್ಷ ರೂ. ವೆಚ್ಚದಲ್ಲಿ ಕಲಾ ಗ್ಯಾಲರಿ ನವೀಕರಣಗೊಂಡಿದೆ. ಅಪರೂಪದ ಚಿತ್ರಕಲೆಗಳು, ಕಲಾಕೃತಿಗಳ ವೀಕ್ಷಿಸಲು ಅವಕಾಶ ಮಾಡಿಕೊಡಲಾಗಿದೆ. ಈಗಾಗಲೇ ಜಿಲ್ಲೆಯಾದ್ಯಂತ ಗ್ರಾಮವಾರು ಸರ್ವೆ ಮುಕ್ತಾಯಗೊಂಡಿದ್ದು, ದಾಖಲೀಕರಣವೂ ಮುಗಿದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪುರಾತನ ಕಾಲದ ಮೂರ್ತಿ ಶಿಲ್ಪಗಳು, ಅರಕ್ಷಿತ ಸ್ಮಾರಕಗಳನ್ನು ಹಂತ ಹಂತವಾಗಿ ಸಂರಕ್ಷಣೆ ಮಾಡಲಾಗುವುದು ಎಂದು ಹೇಳುತ್ತಾರೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು.



ಸಾಂಸ್ಕೃತಿಕ ನಗರಿ ಮೈಸೂರು ಮೊದಲೇ ಸಂಸ್ಕೃತಿಯ ತವರು. ಇದಕ್ಕೆ ಇಂಬು ನೀಡುವಂತೆ ಈ ಸಾಂಸ್ಕೃತಿಕ ತಾಣದಲ್ಲಿ ಭಾರತೀಯ ಸಮಕಾಲೀನ ಕಲೆಯ ಅನಾವರಣದೊಂದಿಗೆ ಮೈಸೂರು ಜೊತೆಗೆ ತಂಜಾವೂರಿನ ಸಾಂಪ್ರದಾಯಿಕ ಚಿತ್ರಕಲೆಗಳು, ನೂರಾರು ಕಲಾಕೃತಿಗಳು ಪ್ರವಾಸಿಗರ ಹೃನ್ಮನ ಸೆಳೆಯುತ್ತಿವೆ.

ಮೈಸೂರು ಇರ್ವಿನ್ ರಸ್ತೆಯಲ್ಲಿ ನವೀಕರಣಗೊಂಡ ವೆಲ್ಲಿಂಗ್ಟನ್ ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಯಲ್ಲಿ ಕಂಗೊಳಿಸುತ್ತಿವೆ ಭಾರತೀಯ ಚಿಕಣಿ ಚಿತ್ರಕಲೆ, ಗಂಜೀಫ ಕಲೆ, ಮೈಸೂರು ಸಾಂಪ್ರದಾಯಿಕ ಚಿತ್ರಕಲೆ, ತಂಜಾವೂರು ಸಾಂಪ್ರದಾಯಿಕ ಚಿತ್ರಕಲೆ, ಭಾರತೀಯ ಸಮಕಾಲೀನ ಚಿತ್ರಕಲೆ, ಮೈಸೂರು ರಾಜಮನೆತನದ ಪರಂಪರೆ, ಆಸ್ಥಾನ ಕಲಾವಿದರ ಸ್ವ-ಭಾವಚಿತ್ರಗಳು, ಜೊತೆಗೆ ಕಲಾವಿದರಾದ ಕೆ.ಕೆ.ಹೆಬ್ಬಾರ್ ಸಂಗ್ರಹಿಸಿಟ್ಟ ಕಲಾಕೃತಿಗಳು, ರುಮಾಲೆ ಚೆನ್ನಬಸಪ್ಪರ(ಮೈಸೂರು ಆಸ್ಥಾನ ಕಲಾವಿದರು) ಕಲಾಕೃತಿಗಳು ಸೇರಿದಂತೆ ಹತ್ತು ಹಲವು ವಿಶೇಷತೆಗಳು.

ಮೈಸೂರು ಸಾಂಪ್ರದಾಯಿಕ ಶೈಲಿಯ 'ಕೋದಂಡರಾಮ ದೇವರು', 'ಕೃಷ್ಣರಾಜ ಒಡೆಯರ್ ವೀರಭದ್ರನ ಆರಾಧನೆ', 'ಮಹಾರಾಜ ಮತ್ತು ಮಹಾರಾಣಿ ದೇವರ ಪೂಜೆ', 'ಕೃಷ್ಣನ ಅವತಾರಗಳು', 'ದೇವಿ ಶ್ರೀ ದೇವಿ ಮತ್ತು ಭೂ ದೇವಿಯೊಂದಿಗೆ ವಿಷ್ಣು', 'ದೇವಿ ರಾಜರಾಜೇಶ್ವರಿ', 'ತ್ರಿವಿಕ್ರಮ ಅವತಾರದಲ್ಲಿ ವಿಷ್ಣು', 'ಮತಾ ಯಶೋಧೆಯೊಂದಿಗೆ ಅಷ್ಟಭಾರ್ಯ ಸಮೇತ ಕೃಷ್ಣ', 'ಕೃಷ್ಣ ಮತ್ತು ರಾಧಾ ದಾಳ ಆಡುತ್ತಿರುವ ಚಿತ್ರಪಟ' ನಯನ ಮನೋಹರ.

ಹಾಗೆಯೇ 'ಚೌಸತ್ ಅವತಾರಗಳಲ್ಲಿ ಶಿವ', 'ಸಖಿಯರೊಂದಿಗೆ ಶ್ರೀ ಕೃಷ್ಣನ ಮಧುರ ಕ್ಷಣಗಳನ್ನು ತಂಜಾವೂರು ಸಾಂಪ್ರದಾಯಿಕ ಶೈಲಿಯ ಚಿತ್ರಪಟಗಳು ಕಣ್ಣಿಗೆ ಕಟ್ಟುತ್ತಿವೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಕಾರಿವಾರದ ಯುವರಾಣಿ ಪ್ರತಾಪ ಕುಮಾರಿ ಬಾಯಿ ವಿವಾಹದ ಭಾವಚಿತ್ರವನ್ನು ಒಳಗೊಂಡ ಮೈಸೂರು ರಾಜಮನೆತನದ ಪರಂಪರೆ ಅನಾವರಣಗೊಂಡಿದೆ. ವಿಶೇಷವಾಗಿ ಬೆಂಗಳೂರಿನಲ್ಲಿ ಅರಳುತ್ತಿರುವ ಹೂವಿನ ವೈಭವ, ಭೂದೃಶ್ಯ, ಬ್ರಿಟಿಷ್ ಲಾಂಛನದೊಂದಿಗೆ ಭಾರತೀಯ ಸಮಕಾಲೀನ ಕಲೆ ಮನ ಸೆಳೆಯುತ್ತಿದೆ.

ಮೈಸೂರು ಸಾಂಪ್ರದಾಯಿಕ ಕಲಾ ಶೈಲಿಯ ಚಿತ್ರಕಲೆಯಲ್ಲಿ ಇಡೀ ರಾಮಾಯಣ ಮಹಾಕಾವ್ಯದ ಪ್ರಮುಖ ಸನ್ನಿವೇಶಗಳನ್ನು ಪ್ರಸ್ತುತಪಡಿಸಲಾಗಿದೆ. ತಂಜಾವೂರು ಸಾಂಪ್ರದಾಯಿಕ ಶೈಲಿಯಲ್ಲಿ ವಿಷ್ಣುವಿನ 90 ಅವತಾರಗಳನ್ನು ಒಂದೇ ಫೋಟೋ ಫ್ರೇಮ್‌ನಲ್ಲಿ ಹಿಡಿದಿಟ್ಟಿರುವುದು ಕಲಾ ಪ್ರೌಢಿಮೆಗೆ ಸಾಕ್ಷಿ. ಇಷ್ಟು ಮಾತ್ರವಲ್ಲ, ಹತ್ತಾರು ಮರದ ಕೆತ್ತನೆಗಳು, ಪ್ರಾಚೀನ ಕಾಲದಲ್ಲಿ ಬೇಟೆಗೆ ಬಳಸುತ್ತಿದ್ದ ನುಣುಪಾದ ಆಯುಧಗಳು, ತಾಮ್ರದ ಪಾತ್ರೆಗಳು, ಕಿವಿಗೆ ಇಂಪು ನೀಡುವ ಸಂಗೀತ ಪರಿಕರಗಳು ಹೀಗೆ ಪ್ರತಿಯೊಂದು ಸಂಗ್ರಹಣೆ, ಕಲಾಕೃತಿ ವಿಶೇಷತೆಯಲ್ಲಿ ವಿಶೇಷ.

ವಸ್ತುಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಯಲ್ಲಿ ವಿಭಿನ್ನ ಕಾಲಘಟ್ಟದ ಒಂದರಿಂದ ಏಳು ವಿಷಯಾಧಾರಿತ ಗ್ಯಾಲರಿಗಳಿವೆ. ಹೀಗೆ ಒಟ್ಟು 101 ಕಲಾಕೃತಿಗಳಿವೆ. ಭಾರತೀಯ ಸಮಕಾಲೀನ ಕಲಾವಿದರಾದ ಎಂ.ಎ.ಹುಸೇನ್, ಎಂ.ಬಿ. ಪಾಟೀಲ್, ಎಸ್.ಜಿ.ವಾಸುದೇವ್, ಚಂದ್ರನಾಥ ಆಚಾರ್ಯ, ಜಿ.ಎಂ.ಎಸ್.ಮಣಿ, ಶೆನುಗುಪ್ತಾ, ಜಿ.ಎಸ್.ಶೆಣೈ, ರಾಮದಾಸ ಅಡ್ಯಂತಾಯರಂತಹ ಮಹಾನ್ ಕಲಾವಿದರ ಕಲಾಕೃತಿಗಳು ಮನಸೆಳೆಯುತ್ತಿವೆ. ಗಂಗರ ಕಾಲದಿಂದ ವಿಜಯನಗರೋತ್ತರವರೆಗಿನ ಶಿಲಾಶಿಲ್ಪಗಳು ವಸ್ತು ಸಂಗ್ರಹಾಲಯದ ಮುಂಭಾಗದ ಸುಂದರ ಉದ್ಯಾನವನದಲ್ಲಿ ಗಮನ ಸೆಳೆಯುತ್ತಿವೆ. ಮಹಿಷಮರ್ದಿನಿ, ಬ್ರಾಹ್ಮಿ, ವಿಷ್ಣು, ಭೈರವ, ಕಾಳಿ, ಭೈರವಿ, ವೀರಭದ್ರ ಸತಿಶಿಲ್ಪ, ವೀರಗಲ್ಲು, ತೀರ್ಥಂಕರ, ಪಾರ್ಶ್ವನಾಥ, ವ್ಯಾಳ, ಮತ್ಸ್ಯಾವತಾರ ಮುಂತಾದ ಮೈಸೂರು ಜಿಲ್ಲೆಯ ವಿವಿಧ ಪ್ರದೇಶಗಳಿಂದ ಸಂಗ್ರಹಿಸಿದ ಮೂರ್ತಿ ಶಿಲ್ಪಗಳ ರಾಶಿಯೇ ಇಲ್ಲಿದೆ.


ವೆಲ್ಲಿಂಗ್ಟನ್ ಹೌಸ್

ವೆಲ್ಲಿಂಗ್ಟನ್ ಭವನವು ರಾಜ್ಯದ ಸಂರಕ್ಷಿತ ಸ್ಮಾರಕ ಮತ್ತು ಪಾರಂಪರಿಕ ಕಟ್ಟಡ. ಮೈಸೂರಿನ ಪ್ರಮುಖ ಪ್ರಾಚೀನ ಐತಿಹಾಸಿಕ ಸ್ಮಾರಕಗಳಲ್ಲೊಂದು. 17ನೇ ಶತಮಾನದ ಕೊನೆಯಲ್ಲಿ 18ನೇ ಶತಮಾನದ ಆದಿಯಲ್ಲಿ ಮೈಸೂರು ರಾಜವಂಶಸ್ಥ ಮೂರನೇ ಕೃಷ್ಣರಾಜ ಒಡೆಯರ್ ಸಿಂಹಾಸನ ಏರಿದ ಕಾಲಕ್ಕೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ನಡುವಿನ ರಾಜತಾಂತ್ರಿಕ ಸಂಬಂಧಗಳ ಸುಲಭಗೊಳಿಸಲು ಮೈಸೂರಿನಲ್ಲಿ ಪ್ರಾತಿನಿಧಿಕ ನಿವಾಸವನ್ನು ಸ್ಥಾಪಿಸುವ ಅಗತ್ಯತೆಯಾಗಿ ಈ ಕಟ್ಟಡ ನಿರ್ಮಿಸಲಾಯಿತು.

1799 ರಿಂದ 1801 ರವರೆಗೆ ವೆಲ್ಲಿಂಗ್ಟನ್, ಮೈಸೂರಿನ ಕಮೀಷನರ್ ಆಗಿದ್ದರು. ಆಗ ಡ್ಯೂಕ್ ಆಫ್ ವೆಲ್ಲಿಂಗ್ಟನ್ ಎಂದು ಹೆಸರಾದ ಕರ್ನಲ್ ಆರ್ಥರ್ ವೆಲ್ಲೆಸ್ಲಿಗೆ ಅಧಿಕೃತ ನಿವಾಸವಾಗಿತ್ತು ಈ ಕಟ್ಟಡ. ಹೀಗಾಗಿ, ಇಂದಿಗೂ ಈ ಕಟ್ಟಡಕ್ಕೆ ವೆಲ್ಲಿಂಗ್ಟನ್ ಭವನ ಹೆಸರೇ ರೂಢಿಯಲ್ಲಿದೆ. ಕಟ್ಟಡವು ಎರಡು ಅಂತಸ್ತಿನ, ಆಯತಾಕಾರದ ಸರಳ ಅಲಂಕಾರಗಳಿಂದ, ಸೌಂದರ್ಯದ ಸಂವೇದನೆಯಿಂದ ಕೂಡಿದ್ದು, ನೆಲಮಹಡಿಯ ಪ್ರವೇಶದ್ವಾರಗಳು ಅರ್ಧವೃತ್ತಾಕಾರದ ಕಮಾನುಗಳೊಂದಿಗೆ ಸರಳವೂ ಭವ್ಯವೂ ಆದ ಮುಖಮಂಟಪ, ವಿಶಾಲವಾದ ಕೇಂದ್ರ ಸಭಾಂಗಣ ಮತ್ತು ಚಿಕ್ಕಕೋಣೆಗಳ ಸರಣಿಗೆ ಪೂರಕವಾಗಿದೆ.







ವಾರಭವಿಷ್ಯ



09.02.2025 ರಿಂದ 15.02.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಕರ, ಕುಂಭ, ಚಂದ್ರ-ಮಿಥುನ, ಕಟಕ, ಸಿಂಹ, ಕನ್ಯಾ, ಕುಜ-ಮಿಥುನ, ಬುಧ-ಕುಂಭ, ಗುರು-ವೃಷಭ, ಶುಕ್ರ-ಮೀನ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ನಿಮ್ಮ ಸಹವರ್ತಿಗಳ ಸಲಹೆಗಳನ್ನು ಸದುಪಯೋಗ ಮಾಡಿಕೊಳ್ಳುವ ಸಮಯವಿದು. ದೂರದೃಷ್ಟಿ ಇಟ್ಟುಕೊಂಡು ಮಾಡುವ ಪ್ರಯತ್ನಗಳು ಫಲಿಸಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗುವುವು. ವಿವಾಹ ಯೋಗ್ಯರಿದ್ದರೆ ಶುಭ ವಾದ್ಯ ಮೊಳಗುವುದು. ವಾರಾಂತ್ಯಕ್ಕೆ ಶತ್ರುಗಳಿಂದ ಭಯದ ವಾತಾವರಣ. ತೀರ ಅನಿವಾರ್ಯವಲ್ಲದ ದೂರ ಪ್ರಯಾಣ ಮಾಡದಿರಿ.

ಶ್ರೀ ಗಣಪತಿ ಪೂಜೆ. ಶುಭ ಸಂಖ್ಯೆ-3

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವೈಯಕ್ತಿಕ ವಿಷಯದಲ್ಲಿ ಅಭಿವೃದ್ಧಿ ಹೊಂದುವುದರಿಂದ ಸಪ್ತಾಹಕ್ಕೆ ಸ್ವಾಗತ. ಜನಸಂಪರ್ಕ ಹೆಚ್ಚುವುದರಿಂದ ಜ್ಞಾನ ವೃದ್ಧಿ. ಮಂಥನ ಮಾಡದೆ ಅಮೃತ ಸಿಗದು ಎಂಬಂತೆ ಪ್ರಯತ್ನವಿಲ್ಲದೆ ಫಲ ದೊರೆಯದು. ಕುಟುಂಬದಲ್ಲಿ ಕಲಹಗಳು ಉಂಟಾದೀತು. ತಾಳ್ಮೆಯಿಂದ ಪರಿಸ್ಥಿತಿಯನ್ನು ನಿಭಾಯಿಸಿಕೊಳ್ಳಿ. ದಾಯಾದಿಗಳಿಂದ ತೊಂದರೆ. ಗುರು ಜನರ ಭೇಟಿಯೊಂದಿಗೆ ವಾರಕ್ಕೆ ತೆರೆ.

ಶ್ರೀ ಗುರು ಚರಿತ್ರೆ ಪಠಿಸಿ. ಶುಭ ಸಂಖ್ಯೆ-8

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಜೀವನದಲ್ಲಿ ನವ ಉತ್ಸಾಹ, ಹರುಷ ಪ್ರಸಂಗಗಳನ್ನು ನೀಡಲಿದ್ದಾನೆ. ಗುರುತರವಾದ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಹೊಸ ಗೆಳತಿಯರ ಪರಿಚಯವಾಗುವುದು. ನೂತನ ವಸ್ತ್ರಾಭರಣ ಖರೀದಿಸುವಿರಿ. ರೆಡಿಮೇಡ್ ಅಂಗಡಿ ತೆರೆಯಲು ಸಮಯ ಪ್ರಶಸ್ತವಾಗಿದೆ. ನೆಗಡಿ, ಶ್ವಾಸ ಸಂಬಂಧಿ ಕಾಯಿಲೆ ಕಾಡಬಹುದು.

ಶ್ರೀ ವಿಷ್ಣು ಪ್ರಾರ್ಥನೆ. ಶುಭ ಸಂಖ್ಯೆ-1

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಸ್ವಂತ ವಿಚಾರಗಳಲ್ಲಿ ಸ್ಥಿರ ಮನೋಭಾವ ಇಲ್ಲದೆ ದ್ವಂದ್ವ ನಿರ್ಧಾರಗಳಿಂದ ಮಹತ್ವದ ಕೆಲಸಗಳು ಮುಂದುವರೆಯದು. ಹೊಸ ಅವಕಾಶ ನಿಮಗಾಗಿ ಕಾಯುತ್ತಿದ್ದು ಅರೆ ಮನಸ್ಸಿನಿಂದ ಕಾರ್ಯಗತವಾಗುತ್ತಿಲ್ಲ. ವಾರ ಮಧ್ಯೆ ಹಣಕಾಸು ಸ್ಥಿತಿ ಸುಧಾರಿಸುವುದು. ಇಷ್ಟಪಟ್ಟ ವಸ್ತುವನ್ನು ಪಡೆದುಕೊಳ್ಳುವಿರಿ. ಸಹೋದರ ಸಂಬಂಧಿಗಳಲ್ಲಿ ಸಹಕಾರದ ಕೊರತೆಯಿಂದ ಆಸ್ತಿ ಹಂಚಿಕೆ ವಿಚಾರಗಳು ಇತ್ಯರ್ಥವಾಗದು.

ಶ್ರೀ ದುರ್ಗಾ ಸ್ತುತಿ, ಶುಭ ಸಂಖ್ಯೆ-3

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಆದಿಗೆ ವ್ಯಾಪಾರ ವಹಿವಾಟುಗಳು ಭರಾಟೆಯಿಂದ ಸಾಗಿ ಹೆಚ್ಚಿನ ಧನಲಾಭವನ್ನು ಗಳಿಸುವಿರಿ. ಸರಾಫ್ ವ್ಯಾಪಾರಿಗಳಿಗೆ ನಿರೀಕ್ಷೆ ಮೀರಿದ ವ್ಯವಹಾರದಿಂದ ಉತ್ತಮ ಲಾಭವಾಗುವುದು. ವಿದ್ಯಾರ್ಥಿಗಳಿಗೆ ಉನ್ನತ ಪದವಿ ದೊರೆತು ಕ್ಯಾಂಪಸ್ ಸೆಲೆಕ್ಷನ್ ಯೋಗವಿದೆ. ಹಲವರಿಗೆ ವಿದೇಶ ಪ್ರಯಾಣ ಮಾಡುವ ಯೋಗವೂ ಇದೆ. ಅಷ್ಟಮ ಶನಿಯು ನಿಮ್ಮ ಸ್ವೇಚ್ಛಾಚಾರಗಳಿಂದ ತೊಂದರೆಗೆ ಗುರಿ ಮಾಡಲಿದ್ದಾನೆ.

ಶ್ರೀ ಶನಿ ಅಷ್ಟೋತ್ತರ ಪಠಿಸಿ, ಶುಭ ಸಂಖ್ಯೆ-4

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ವಾರದಲ್ಲಿ ಐಹಿಕ ಸುಖ ಭೋಗಗಳು ನಿಮ್ಮನ್ನು ಅರಸಿಕೊಂಡು ಬರುವುದು. ತತ್ವಜ್ಞಾನ, ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಮೂಡುವುದು. ಮನೆಯಲ್ಲಿ ಪ್ರೀತಿ-ವಾತ್ಸಲ್ಯದ ವಾತಾವರಣದಿಂದ ಮನಸ್ಸಿಗೆ ನೆಮ್ಮದಿ. ಬಂಧು-ಬಳಗದವರ ಉಪಚಾರಕ್ಕಾಗಿ ಹಣ ವ್ಯಯವಾಗುವುದು. ರಾಹು-ಕೇತುಗಳ ಕರ್ತರಿಯೋಗ ಇರುವ ಕಾರಣ ದುರ್ಘಟನೆ ವೇಳೆ, ಸ್ಥಳ ಹೇಳದೆ ಜರುಗಿ ಬಿಡುತ್ತದೆ. ಜಾಗೃತರಾಗಿರಿ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪ. ಶುಭ ಸಂಖ್ಯೆ-2

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ಸುವರ್ಣ, ರಜತ ಪದಾರ್ಥಗಳ ಖರೀದಿಯಿಂದ ಶ್ರೀಮತಿಗೆ ಸಂತೋಷ. ನಂಬಿಕಸ್ಥ ಹಿರಿಯ ವ್ಯಕ್ತಿಯೊಬ್ಬರಿಂದ ನಿಮ್ಮ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುವುದು. ಮಾತು ಬಲ್ಲವ ಮಾಣಿಕ್ಯ ತಂದ ಎಂಬ ನಾಣ್ಣುಡಿಯಂತೆ ಸಿಹಿ ಮಾತಿನಿಂದ ಶುಭ ಫಲ. ಕ್ರೀಡಾಳುಗಳಿಗೆ ಸಾಹಸ ಪ್ರವೃತ್ತಿಯಿಂದ ಗೆಲುವು. ಕಾಗದ ಪತ್ರಾಗಾರರಿಗೆ ಹೆಚ್ಚಿನ ಕಕ್ಷಿಗಾರರಿಂದ ಉತ್ತಮ ಗಳಿಕೆ.

ಶ್ರೀ ತ್ರಿಪುರ ಸುಂದರಿ ದರ್ಶನ. ಶುಭ ಸಂಖ್ಯೆ-1

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಕಳೆದುಕೊಂಡಿದ್ದ ಆರೋಗ್ಯ ಮರುಕಳಿಸುವುದು. ಹೊಸ ಉದ್ಯೋಗ ಅರಸುವವರಿಗೆ ಸಿಹಿ ಸುದ್ದಿ ಬರುವುದು. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚು ಶ್ರಮ ವಹಿಸುವರು. ಶಿಕ್ಷಣ ಕ್ಷೇತ್ರದವರಿಗೆ ಸರ್ಕಾರದಿಂದ ಮನ್ನಣೆ. ಗುರು ಕೃಪೆಯ ಪರಿಣಾಮ ಉನ್ನತ ಸ್ಥಾನ ಪ್ರಾಪ್ತಿ. ದಾನ-ಧರ್ಮ ಬುದ್ಧಿಯಿಂದ ಸಮಾಜದಲ್ಲಿ ಗೌರವ ದೊರೆಯುವುದು. ಕೂಡಿಟ್ಟ ದಾಸ್ತಾನು ಮಾರಾಟದಿಂದ ಹೆಚ್ಚಿನ ಲಾಭ.

ಶ್ರೀ ಸುಬ್ರಮಣ್ಯ ಅರ್ಚನೆ. ಶುಭ ಸಂಖ್ಯೆ-7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ ಮುಂದುವರೆಯುವುದು. ವಿದ್ಯಾರ್ಥಿಗಳು ಆಲಸಿಗರಾಗುವರು. ಹೊಸ ಉದ್ದಿಮೆ ಆರಂಭಿಸಲು ಪ್ರಯತ್ನ ಪಡುವಿರಿ. ರಾಜಕೀಯ ವ್ಯಕ್ತಿಗಳಿಗೆ ಜನಾಪವಾದ ಹಾಗೂ ತೆರಿಗೆ ಅಧಿಕಾರಿಗಳಿಂದ ತೊಂದರೆ. ವಾರ ಮಧ್ಯೆ ಮರು ಪ್ರಯತ್ನದಿಂದ ಕಾರ್ಯಸಾಧನೆ. ರಫ್ತು-ಆಮದು ವ್ಯಾಪಾರಿಗಳಿಗೆ ಉತ್ತಮ ವ್ಯವಹಾರಗಳು ಕುದುರುವುದು. ಶ್ರವಣದೋಷ ಕಾಡಬಹುದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-7

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಪುಣ್ಯ ಕೆಲಸಗಳನ್ನು ಮಾಡುವುದರಿಂದ ಪ್ರಸಿದ್ಧಿಗೆ ಬರುವಿರಿ. ಪ್ರಯತ್ನಶೀಲರಿಗೆ ದೈವ ಸಹಾಯವೂ ಒದಗುತ್ತದೆ. ಸುವರ್ಣಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ಶನಿ ಪ್ರಭಾವದಿಂದ ಸರ್ಕಾರಿ ಕಚೇರಿಗಳಿಗೂ, ನ್ಯಾಯಾಲಯಗಳಿಗೂ ವೃಥಾ ಅಲೆದಾಟ ಉಂಟಾಗುವುದು. ದೇಹಾರೋಗ್ಯವೂ ಅಷ್ಟಕ್ಕಷ್ಟೆ. ವಾಹನ ಡ್ರೈವ್‌ನಲ್ಲಿ ಸೇಫ್ಟಿ ಫಸ್ಟ್ ಸ್ಪೀಡ್ ನೆಕ್ಸ್ಟ್. ಸಟ್ಟಾ-ಜೂಜು ದೂರವಿಡಿ.

ಶ್ರೀ ಮಾರುತಿ ಪೂಜೆ, ಶುಭ ಸಂಖ್ಯೆ-4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆದಿಗೆ ಶತ್ರುಗಳ ತಂಟೆ ನಿವಾರಣೆ ಆಗುವುದು. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ. ಮಹತ್ತರ ಕೆಲಸಗಳು ಸುಖಕರವಾಗಿ ಸಂಪನ್ನವಾಗುವುದು. ಹೊರ ದೇಶಕ್ಕೆ ಹೋಗುವ ಯೋಗವಿದೆ. ನಂಬಿಕಸ್ಥ ಜನರಿಂದಲೇ ಮೋಸ ಹೋಗುವ ಸಾಧ್ಯತೆ ಇರುತ್ತದೆ. ನಿಮ್ಮ ವೈಯಕ್ತಿಕ ಬ್ಯಾಂಕ್ ವಿವರಗಳನ್ನು ಯಾರಲ್ಲೂ ಹಂಚಿಕೊಳ್ಳಬೇಡಿ. ವಾರಾಂತ್ಯಕ್ಕೆ ತೀರ್ಥಯಾತ್ರೆ ನೆಮ್ಮದಿ ತರುವುದು.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ, ಶುಭ ಸಂಖ್ಯೆ-9

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)


ವಾರದ ಆದಿಗೆ ಯೋಜಿಸಿದ ಕೆಲಸಗಳಿಗೆ ವಿಘ್ನಗಳು ಉಂಟಾಗುವುದು. ಕೃಷಿಕರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರಕುವುದು. ಪಶು ಸಂಪತ್ತಿನಲ್ಲಿ ವೃದ್ಧಿ. ಮುಖ್ಯ ವಿಷಯಗಳನ್ನು ಗುರುಜನರೊಡನೆ ಸಮಾಲೋಚಿಸಿ ಮುಂದುವರೆಯಿರಿ. ಶನಿದೇವ ಪ್ರಭಾವವಿರುವ ಕಾರಣ ಸರ್ಕಾರಿ ನೌಕರರು ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸದೆ ಮೇಲಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗುವರು.

ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ-1


ಮಕ್ಕಳ ಚಿತ್ರಕಥೆ

'ನಮಗೀಗ ದೇವರೇ ಗತಿ...!'


■ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಮ್ಮೆ ತಂದೆ ಹಾಗೂ ಮಗ ದೋಣಿಯೊಂದರಲ್ಲಿ ಸಮುದ್ರ ವಿಹಾರಕ್ಕೆಂದು ಹೋಗಿದ್ದರು. ಸ್ವಲ್ಪ ಸಮಯದ ನಂತರ ಸಮುದ್ರ ಮಧ್ಯದಲ್ಲಿ ದೋಣಿಯ ಯಂತ್ರ ಕೆಟ್ಟುಹೋಯಿತು. ಇಷ್ಟೇ ಸಾಲದೆಂಬಂತೆ ಭಾರಿ ಚಂಡಮಾರುತವೆರಗಿ ದೋಣಿ ಮುಳುಗ ತೊಡಗಿತು. ಇನ್ನೇನು ಬದುಕಲು ಸಾಧ್ಯವೇ ಇಲ್ಲವೆಂತಾದಾಗ ತಂದೆಗೆ ದೂರದಲ್ಲಿ ಎರಡು ದ್ವೀಪಗಳು ಕಾಣತೊಡಗಿತು.




ತಂದೆಯು ಮಗನನ್ನು ಕುರಿತು "ಆ ಎರಡು ದ್ವೀಪಗಳಲ್ಲಿ ಒಂದರಲ್ಲಿ ನಾನು ತಲುಪುವೆ ಮತ್ತೊಂದರಲ್ಲಿ ನೀನು ತಲುಪು. ಇಬ್ಬರೂ ನಮ್ಮ-ನಮ್ಮ ಸ್ಥಳಗಳಲ್ಲಿ ದೇವರನ್ನು ಪ್ರಾರ್ಥಿಸೋಣ, ಈ ಪರಿಸ್ಥಿತಿಯಲ್ಲಿ ನಮಗೆ ದೇವರೇ ಗತಿ. ಅವನೇ ನಮ್ಮನ್ನು ಬದುಕಿಸಬಲ್ಲ..!" ಎಂದು ಹೇಳಿದ. ಅದಕ್ಕೊಪ್ಪಿದ ಮಗ ಇಬ್ಬರೂ ಒಂದೊಂದು ದ್ವೀಪ ಸೇರಿಕೊಂಡರು.




ಮಗ ತಲುಪಿದ ದ್ವೀಪವು ಬರೀ ಮರಳು ಮತ್ತು ಸುಡು ಬಿಸಿಲಿನಿಂದ ಕೂಡಿತ್ತು. ಅಲ್ಲಿ ಯಾವ ಮರ-ಗಿಡಗಳೂ ಇರಲಿಲ್ಲ.ತೀವ್ರ ದಣಿದು ಹಸಿದಿದ್ದ ಮಗ ಕಣ್ಮುಚ್ಚಿ ದೇವರನ್ನು ಕುರಿತು ತನಗೆ ಆಹಾರ ನೀಡೆಂದು ಕೇಳಿಕೊಂಡ. ಏನಾಶ್ಚರ್ಯ, ಕೂಡಲೇ ಕಣ್ಣೆದುರಿಗೆ ಫಲಭರಿತವಾದ ಮರಗಳು ಸೃಷ್ಟಿಯಾಗಿಬಿಟ್ಟವು. ಇದರಿಂದ ತೀವ್ರ ಸಂತಸಗೊಂಡ ಆತ ಹಣ್ಣುಗಳನ್ನು ತಿಂದು ಹಸಿವನ್ನು ನೀಗಿಸಿಕೊಂಡ.



ನಂತರ ಆ ದ್ವೀಪದ ಸೌಂದರ್ಯಕ್ಕೆ ಮನ ಸೋತು, ಇಲ್ಲಿ ವಾಸಿಸಲು ಗುಡಿಸಲು ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂಬ ಆಸೆಯಿಂದ ದೇವರನ್ನು ಪ್ರಾರ್ಥಿಸಿದ. ಆತನ ಬಯಕೆಯಂತೆಯೇ ಅಲ್ಲಿ ಗುಡಿಸಲು ಸೃಷ್ಟಿಯಾಗುವುದರ ಜೊತೆಗೆ ಒಬ್ಬಳು ಸುಂದರ "ಸ್ತ್ರೀ" ಯನ್ನೂ ಸೃಷ್ಟಿ ಮಾಡಿಕೊಟ್ಟ ಭಗವಂತ. ಮಗ ಆಕೆಯನ್ನು ವಿವಾಹವಾಗಿಯೂಬಿಟ್ಟ. ಸ್ವಲ್ಪ ಸಮಯದ ನಂತರ ಸಂಸಾರ ಸಮೇತವಾಗಿ ತನ್ನ ಊರಿಗೆ ಸುರಕ್ಷಿತವಾಗಿ ಹಿಂದಿರುಗಲು ಬಯಸಿ, ಒಂದು ದೋಣಿಯನ್ನು ನೀಡುವಂತೆ ದೇವರಲ್ಲಿ ಪ್ರಾರ್ಥಿಸಿದ. ಥಟ್ಟನೆ ಸುಂದರವಾದ ದೋಣಿಯೊಂದು ದಡದಲ್ಲಿ ಪ್ರತ್ಯಕ್ಷವಾಯಿತು. ತೀವ್ರ ಸಂತೋಷಗೊಂಡ ಆತ, ಪತ್ನಿಯೊಂದಿಗೆ ದೋಣಿಯನ್ನೇರಿ ಮತ್ತೆ ಸಮುದ್ರ ಪಯಣ ಆರಂಭಿಸಿದ.



ಸಮುದ್ರಮಾರ್ಗ ಮಧ್ಯದಲ್ಲಿ ದೇವರು ಪ್ರತ್ಯಕ್ಷನಾಗಿ "ಏನಪ್ಪಾ, ನೀನು ಮಾತ್ರ ಊರಿನೆಡೆಗೆ ಹೊರಟುಬಿಟ್ಟೆ. ನಿನ್ನ ತಂದೆಯನ್ನೂ ಕರೆದುಕೊಂಡು ಹೋಗುವುದಿಲ್ಲವೇ...?" ಎಂದು ಪ್ರಶ್ನಿಸಿತು. ಅದಕ್ಕೆ ಮಗ, "ನನ್ನ ತಂದೆಯು ಇದ್ದಲ್ಲಿಯೇ ಇರಲಿ ಬಿಡಿ, ಅವನ ಕರ್ಮದ ಫಲ ಅವನೇ ಅನುಭವಿಸಲಿ. ಅವನ ಕರ್ಮಫಲದಿಂದಾಗಿಯೇ ನಾನು ಇಷ್ಟೆಲ್ಲಾ ತಿರುಗಾಡಿ ಕಷ್ಟಪಡಬೇಕಾಯಿತು. ಅವನ ಕರ್ಮದ ಫಲ ಚೆನ್ನಾಗಿದ್ದರೆ ನೀನೂ ಕೂಡ ಅವನಿಗೆ ಕೇಳಿದ್ದನ್ನು ನೀಡುತ್ತಿದ್ದೆ. ಆ ದ್ವೀಪದಲ್ಲಿ ಏನೂ ಇಲ್ಲದೆ ಒಂಟಿಯಾಗಿ ಹೇಗೆ ಕುಳಿತ್ತಿದ್ದಾನೆ ನೋಡು. ಆದರೆ ಈಗ ನನ್ನ ನೋಡು, ನನಗೆ ಹಣ್ಣುಗಳು, ಅಂದವಾದ ಗುಡಿಸಲು ಜೊತೆಗೆ ಒಬ್ಬಳು ಕನ್ಯೆ, ಈ ಸುಂದರವಾದ ದೋಣಿ ಎಲ್ಲವೂ ಸಿಕ್ಕಿದೆ" ಎಂದ.



ಮತ್ತೆ ದೇವರು "ಹೋಗಲಿ ಬಿಡು, ಕನಿಷ್ಠ ನಿನ್ನ ತಂದೆ ದೇವರನ್ನು ಏನು ಬೇಡುತ್ತಿದ್ದಾನೆ ಎಂದು ತಿಳಿಯುವ ಬಯಕೆಯೂ ಇಲ್ಲವೇ ನಿನಗೆ...?" ಎಂದಿತು. ಆಗ ಮಗನು "ಹೌದೌದು, ನನ್ನ ತಂದೆ ಏನೆಂದು ಬೇಡುತ್ತಿದ್ದಾನೆ...?" ಎಂದು ಕುತೂಹಲದಿಂದ ಕೇಳಿದ. ಆಗ ದೇವರು, "ನನ್ನ ಮಗ ಏನೇನು ಬಯಸಿ ಬೇಡುತ್ತಾನೋ ಅವೆಲ್ಲವನ್ನೂ ಕರುಣಿಸು ಭಗವಂತ!" ಎಂದು ಮಾತ್ರ ಪ್ರಾರ್ಥಿಸುತ್ತಿದ್ದ...! ಎಂದಿತು. ಮಗನಿಗೆ ತನ್ನ ತಪ್ಪಿನ ಅರಿವಾಗಿ ಕಣ್ಣಂಚಿನಲ್ಲಿ ನೀರು ತುಂಬಿ ಬಂತು.

ನೀತಿ:- ಮಕ್ಕಳೇ, ಯಾವಾಗಲೂ ದೇವರಲ್ಲಿ ಪ್ರಾರ್ಥಿಸುವಾಗ, ನಿಮ್ಮ-ನಿಮ್ಮ ತಂದೆ-ತಾಯಿಗೆ ದೀರ್ಘ ಆಯುಸ್ಸು ನೀಡೆಂದು ಪ್ರಾರ್ಥಿಸಿ. ಏಕೆಂದರೆ, ಇಡೀ ಜಗತ್ತಿನಲ್ಲಿ ನಿಸ್ವಾರ್ಥವಾಗಿ ತನ್ನ ಸುಖ-ದುಃಖಗಳ ಬಗ್ಗೆ ಯೋಚಿಸದೇ ಮಕ್ಕಳ ಉನ್ನತಿ ಬಯಸುವವರು ತಂದೆ-ತಾಯಿಯರು ಮಾತ್ರ.

ನಾಳೆಯಿಂದ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಕುಂಭಮೇಳ

●ಮೂರು ದಿನಗಳ ಕಾಲ ನಡೆಯುವ ಧಾರ್ಮಿಕ ಕಾರ್ಯಕ್ರಮ ●ಮೂರು ಕಡೆ ಸ್ನಾನಘಟ್ಟ ವ್ಯವಸ್ಥೆ ●ಫೆ.11ರ ರಾತ್ರಿ ವಾರಣಾಸಿ ಮಾದರಿ ಗಂಗಾರತಿ



ಎಸ್.ಕುಮಾರ್

ತಿ.ನರಸೀಪುರ, ಫೆ.8– ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಕುಂಭಮೇಳದ ಪವಿತ್ರ ಸ್ನಾನ ನಡೆಯುತ್ತಿದ್ದರೆ, ಇತ್ತ ದಕ್ಷಿಣ ಭಾರತದ ಮೈಸೂರು ಜಿಲ್ಲೆಯ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ನಡೆಯುವ ಕುಂಭಮೇಳದ ಸಿದ್ಧತೆಗಳು ಪೂರ್ಣಗೊಂಡಿದ್ದು, ನಾಳೆಯಿಂದ ಆರಂಭಗೊಳ್ಳುವ (ಫೆ10 ರಿಂದ 12ರವರೆಗೆ) ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಲು ಭಕ್ತರು ಹಾತೊರೆಯುತ್ತಿದ್ದಾರೆ.

ತಲಕಾವೇರಿಯಲ್ಲಿ ಜನ್ಮತಾಳಿ ಭಾಗಮಂಡಲದಲ್ಲಿ ತ್ರಿವೇಣಿ ಸಂಗಮ ಸೃಷ್ಟಿಸಿ ಹರಿಯುವ ಕಾವೇರಿ ತಾನು ಹರಿದ ಕಡೆಗಳಲ್ಲೆಲ್ಲಾ ಪವಿತ್ರ ಕ್ಷೇತ್ರಗಳನ್ನು ಸೃಷ್ಟಿಸಿದ್ದು ಅದರಲ್ಲಿ ತಿರುಮಕೂಡಲು ಒಂದಾಗಿದೆ.

1989 ರಿಂದ ಪ್ರತಿ 3 ವರ್ಷಗಳಿಗೊಮ್ಮೆ ಕುಂಭಮೇಳ ನಡೆಸಿಕೊಂಡು ಬರಲಾಗುತ್ತಿದ್ದು, ಕಳೆದ 11 ಕುಂಭಮೇಳಗಳನ್ನು ತಿ.ನರಸೀಪುರದ ತಿರುಮಕೂಡಲಿನಲ್ಲಿ ನಡೆಸಲಾಗಿದೆ. 2022ರಲ್ಲಿ ಕೋವಿಡ್ ಕಾರಣದಿಂದ 12ನೇ ಕುಂಭಮೇಳ ನಡೆದಿರಲಿಲ್ಲ. ಇದೀಗ 6 ವರ್ಷದ ಬಳಿಕ ಕುಂಭಮೇಳ ನಡೆಯುತ್ತಿದೆ.

ಈ ಬಾರಿಯ ಕುಂಭಮೇಳಕ್ಕೆ ತಿ.ನರಸೀಪುರ ಸಜ್ಜಾಗಿದ್ದು, ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಂಡಿದೆ. ಪವಿತ್ರ ತೀರ್ಥ ಸ್ನಾನಕ್ಕಾಗಿ ಸಾವಿರಾರು ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಭಕ್ತರ ಅನುಕೂಲಕ್ಕಾಗಿ ಕಾವೇರಿ, ಕಪಿಲೆ ಮತ್ತು ಸ್ಫಟಿಕ ಸರೋವರಗಳು ಸೇರುವ ತ್ರಿವೇಣಿ ಸಂಗಮದಲ್ಲಿ ಮೂರು ಕಡೆ ಸ್ನಾನಘಟ್ಟದ ವ್ಯವಸ್ಥೆ ಮಾಡಲಾಗಿದೆ.

ಸ್ನಾನಘಟ್ಟ ನಿರ್ಮಾಣ, ಬೋಟ್ ವ್ಯವಸ್ಥೆ: ಅಗಸ್ತೇಶ್ವರ, ಗುಂಜಾ ನರಸಿಂಹಸ್ವಾಮಿ ಮತ್ತು ಭಿಕ್ಷೇಶ್ವರ ಸ್ವಾಮಿ ದೇವಾಲಯದ ಬಳಿ ಸ್ನಾನಘಟ್ಟ ನಿರ್ಮಿಸಲಾಗಿದೆ. ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಿರುವ ಕಾರಣ, 6 ಅಡಿ ಆಳವಿರುವುದರಿಂದ ವೃದ್ಧರು ಮತ್ತು ಮಕ್ಕಳು ಮುಳುಗದಂತೆ ಕ್ರಮ ವಹಿಸಲಾಗಿದೆ. ಸ್ನಾನ ಮಾಡುವವರು 3 ಅಡಿ ಆಳದವರೆಗೆ ಹೋಗಿ ಸ್ನಾನ ಮಾಡಲು ಅವಕಾಶವಿದ್ದು, ಮೂರು ಅಡಿ ಆಳದ ನಂತರ ಬ್ಯಾರಿಕೇಡ್ ನಿರ್ಮಾಣ ಮಾಡಿ, ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ.

ನದಿಯಲ್ಲಿ ನೀರಿನ ಪ್ರವಾಹ ಹೆಚ್ಚಿರುವುದರಿಂದ ಈ ಬಾರಿ ತೇಲುವ ಸೇತುವೆ ನಿರ್ಮಾಣ ಮಾಡಿಲ್ಲ. ಜೊತೆಗೆ ಮುಂಜಾಗ್ರತಾ ಕ್ರಮವಾಗಿ ರಂಗನತಿಟ್ಟು ಪಕ್ಷಿಧಾಮದಿಂದ 2, ಸ್ಥಳೀಯವಾಗಿ 12, ರೆಸಾರ್ಟ್‌ಗಳಿಂದ 4 ಬೋಟ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಈಜು ತಜ್ಞರನ್ನು ಸಜ್ಜುಗೊಳಿಸಲಾಗಿದೆ. ಪವಿತ್ರ ಸ್ನಾನ ಮಾಡುವ ಸಲುವಾಗಿ ಲಕ್ಷಾಂತರ ಭಕ್ತರು ಒಮ್ಮೆಗೆ ಆಗಮಿಸುವುದರಿಂದ ಕಾಲ್ತುಳಿತ ಉಂಟಾಗದಂತೆ ಪ್ರತ್ಯೇಕವಾಗಿ ಪ್ರವೇಶ ಮತ್ತು ನಿರ್ಗಮನಕ್ಕೆ ವ್ಯವಸ್ಥೆ ಮಾಡಲಾಗಿದೆ.

ಗಂಗಾರತಿ ಮಾದರಿ ಮಹಾ ಆರತಿ: ಸಂಚಾರ ದಟ್ಟಣೆ ಹೆಚ್ಚಾಗದಂತೆ ತ್ರಿವೇಣಿ ಸಂಗಮದ ಬಳಿ ವಾಹನ ಸಂಚಾರ ನಿಷೇಧಿಸಿದ್ದು, ವಾಹನ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಕುಂಭಮೇಳದಲ್ಲಿ ಧಾರ್ಮಿಕ ಕಾರ್ಯಕ್ರಮದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಒತ್ತು ನೀಡಲಾಗಿದೆ. ಅದಕ್ಕಾಗಿ ಸಂಗಮದ 3 ಕಡೆ ವೇದಿಕೆ ನಿರ್ಮಾಣ ಮಾಡಲಾಗಿದೆ. 3 ದಿನಗಳ ಕಾಲವೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಇದರೊಂದಿಗೆ ಬೆಳ್ಳಿ ರಥದ ಮೂಲಕ ಸಂತರ, ಮಠಾಧೀಶರ ಮೆರವಣಿಗೆ ಇರಲಿದೆ. ಜೊತೆಗೆ ಸಂಕಲ್ಪ ಹೋಮ, ಅಗಸ್ತೇಶ್ವರನಿಗೆ ರುದ್ರಾಭಿಷೇಕ, ಅನುಜ್ಞೆ, ಧ್ವಜಾರೋಹಣ, ಹೋಮ– ಹವನ ಸೇರಿ ಅನೇಕ ಧಾರ್ಮಿಕ ಕಾರ್ಯ ನೆರವೇರಲಿವೆ. ಕುಂಭಮೇಳದ ಎರಡನೇ ದಿನವಾದ ಮಂಗಳವಾರ(ಫೆ.11) ರಾತ್ರಿ ತ್ರಿವೇಣಿ ಸಂಗಮದಲ್ಲಿ ಕಾಶಿಯಲ್ಲಿ ನಡೆಯುವ ಗಂಗಾರತಿ ಮಾದರಿ ಮಹಾ ಆರತಿ ನಡೆಯಲಿದೆ. ಇದಕ್ಕಾಗಿ ಕಾಶಿಯಿಂದ 15 ಮಂದಿಯನ್ನು ಕರೆಸಿಕೊಳ್ಳಲಾಗುತ್ತಿದ್ದು, ಪ್ರತ್ಯೇಕ ವೇದಿಕೆ ನಿರ್ಮಾಣ ಮಾಡಲಾಗಿದೆ.

ಫೆ.10 ರಿಂದ ಧಾರ್ಮಿಕ ಕೈಂಕರ್ಯದ ಜೊತೆಗೆ ಪವಿತ್ರ ಸ್ನಾನ: ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವೇದಿಕೆ ನಿರ್ಮಿಸಲಾಗಿದ್ದು, ಭದ್ರತೆಗೆ ಪೊಲೀಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ನಿಯೋಜಿಸಲಾಗಿದೆ. ಕುಂಭಮೇಳ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ 3 ದಿನ ದೀಪಾಲಂಕಾರದ ವ್ಯವಸ್ಥೆ ಮಾಡಲಾಗಿದೆ. ಯಾವುದೇ ಸಮಸ್ಯೆ ಆಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದ್ದು, 3 ಕಡೆ ನಿರ್ಮಿಸಿರುವ ಸ್ನಾನ ಘಟ್ಟಗಳಲ್ಲಿ ಬಟ್ಟೆ ಬದಲಿಸಲು ತಾತ್ಕಾಲಿಕ 20 ಕೊಠಡಿ ನಿರ್ಮಾಣ ಮತ್ತು ಪ್ರತಿ ಸ್ನಾನ ಘಟ್ಟದ ಬಳಿ 10 ಶೌಚಾಲಯ ನಿರ್ಮಿಸಲಾಗಿದೆ.

ಫೆ.10ರಂದು ಬೆಳಗ್ಗೆ 9 ಗಂಟೆಗೆ ಮಾಘ ಶುದ್ಧ ತ್ರಯೋದಶಿ ಪುಷ್ಯ ನಕ್ಷತ್ರ ಶ್ರೀಅಗಸ್ತ್ಯೇಶ್ವರ ಸನ್ನಿಧಿಯಲ್ಲಿ ಅನುಜ್ಞೆ, ಪುಣ್ಯಾಹ, ಕಲಶ ಸ್ಥಾಪನೆ, ಗಣಹೋಮ, ಅಭಿಷೇಕ, ದೇವತಾರಾಧನೆ, ಯಾಗಶಾಲಾ ಪ್ರವೇಶ, ಪುಣ್ಯಾಹ, ವಾಸ್ತುಹೋಮಗಳು ನಡೆಯಲಿವೆ. ಅಂದು ಸಂಜೆ ಧರ್ಮಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಧ್ವಜಾರೋಹಣ ನಡೆಯಲಿದೆ.

ಫೆ.11ರಂದು ಬೆಳಗ್ಗೆ 6ಕ್ಕೆ ಮಾಘಶುದ್ಧ ಚತುರ್ದಶಿ ಆಶ್ಲೇಷ ನಕ್ಷತ್ರ, ಪುಣ್ಯಾಹ, ನವಗ್ರಹಪೂಜೆ, ಜಪ, ನವಗ್ರಹ ಹೋಮ, ಪೂರ್ಣಾಹುತಿ. ಬೆ.11ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಸಂಜೆ 4 ಗಂಟೆಗೆ ಗುಂಜಾ ನರಸಿಂಹಸ್ವಾಮಿ ದೇವಸ್ಥಾನ, ವಿಶ್ವಕರ್ಮ ಬೀದಿ, ಭಗವಾನ್ ಟಾಕೀಸ್ ವೃತ್ತ, ಲಿಂಕ್ ರಸ್ತೆ, ಬಸ್ ನಿಲ್ದಾಣದ ಮೂಲಕ ತ್ರಿವೇಣಿ ಸಂಗಮಕ್ಕೆ ಮಂಗಳವಾದ್ಯ, ಕಲಾತಂಡ, ಸ್ತಬ್ಧ ಚಿತ್ರಗಳೊಂದಿಗೆ ಸ್ವಾಮೀಜಿಗಳ ಭವ್ಯ ಮೆರವಣಿಗೆ. ಸಂಜೆ 6ಕ್ಕೆ ಸುದರ್ಶನ ಪೂಜೆ, ಹೋಮ, ಪೂರ್ಣಾಹುತಿ ನಡೆಯಲಿದೆ. ಸಂಜೆ 7ಕ್ಕೆ ವಾರಣಾಸಿ ಮಾದರಿಯಲ್ಲಿ ದೀಪಾರತಿ ಕಾರ್ಯಕ್ರಮ ಇರಲಿದೆ.

ಫೆ.12ರ ಮುಂಜಾನೆ 5.30ಕ್ಕೆ ಮಾಘ ಶುದ್ಧ ವ್ಯಾಸ ಪೂರ್ಣಿಮಾ ಮಖಾನಕ್ಷತ್ರ, ಚಂಡಿಹೋಮ, ಪುಷ್ಯನಕ್ಷತ್ರ, ಪುಣ್ಯಾಹ, ಸಪ್ತನದೀತರಥ ಕಲಶ ಪೂಜೆ, ಹೋಮ, ಕುಂಭಲಗ್ನದಲ್ಲಿ ಪೂರ್ಣಾಹುತಿ, ಕುಂಭೋದ್ವಾಸನ ಹಾಗೂ ಸಪ್ತ ಪವಿತ್ರ ನದಿಗಳಿಂದ ತಂದ ತೀರ್ಥಗಳನ್ನು ತ್ರಿವೇಣಿ ಸಂಗಮದಲ್ಲಿ ಸಂಯೋಜನೆ, ಪುಣ್ಯ ಸ್ನಾನ ಹಾಗೂ ಧಾರ್ಮಿಕ ಸಭೆ ಮಾಡಲಾಗುವುದು. ಪ್ರಾತಃಕಾಲ 9.35ರಿಂದ 9.50ರ ಮೀನಲಗ್ನ, ಬೆಳಗ್ಗೆ 11.30ರಿಂದ 12ಗಂಟೆಯ ವೃಷಭ ಲಗ್ನ, ಅಭಿಜಿನ್ ಮುಹೂರ್ತ, ವಿಧಿ ಮುಹೂರ್ತ ಹಾಗೂ ವೇದ ಮುಹೂರ್ತಗಳಲ್ಲಿ ಮಹೋದಯ ಪುಣ್ಯಸ್ನಾನ ನಡೆಯಲಿದೆ.



ಭಕ್ತರು ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡಿ



ತಿ.ನರಸೀಪುರ, ಫೆ.8– ಉತ್ತರ ಪ್ರದೇಶದ ಮಹಾ ಕುಂಭಮೇಳದಲ್ಲಿ ಭಾಗವಹಿಸದ ಭಕ್ತರು ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳ ಜನರು ತಿರುಮಕೂಡಲು ತ್ರಿವೇಣಿ ಸಂಗಮದಲ್ಲಿ ಫೆ10, 11 ಹಾಗೂ 12ರಂದು 3 ದಿನಗಳ ಕಾಲ ನಡೆಯುವ ಕುಂಭಮೇಳದಲ್ಲಿ ಪುಣ್ಯ ಸ್ನಾನ ಮಾಡುವಂತೆ ಪುರಸಭೆ ಅಧ್ಯಕ್ಷೆ ಬಿ.ವಸಂತ ಶ್ರೀಕಂಠ ಮನವಿ ಮಾಡಿದ್ದಾರೆ.

ಜೀವನದಿ ಕಾವೇರಿ, ರೈತರ ಬದುಕನ್ನು ಹಸನುಗೊಳಿಸಿದ ಕಪಿಲಾ ನದಿಗಳು ತಿರುಮಕೂಡಲಿನಲ್ಲಿ ಗುಪ್ತಗಾಮಿನಿ ಆಗಿರುವ ಸ್ಫಟಿಕ ಸರೋವರದೊಂದಿಗೆ ಸಂಗಮಗೊಳ್ಳುವ ತ್ರಿವೇಣಿ ಸಂಗಮದಲ್ಲಿ ಈ ಬಾರಿ 12ನೇ ಕುಂಭಮೇಳ ಅದ್ಧೂರಿಯಾಗಿ ನಡೆಯುತ್ತಿದ್ದು, ರಾಜ್ಯ ಸರ್ಕಾರ ಅನುದಾನ ಮಂಜೂರು ಮಾಡಿದ್ದರಿಂದ ಜಿಲ್ಲಾಡಳಿತ ಪೂರ್ವ ಸಿದ್ಧತಾ ಕಾಮಗಾರಿಗಳನ್ನು ತ್ವರಿತವಾಗಿ ನಡೆಸಿದೆ. ಹಾಗಾಗಿ ಉತ್ತರ ಪ್ರಯಾಗಕ್ಕೆ ಹೋಗದವರು ದಕ್ಷಿಣ ಪ್ರಯಾಗ ತಿರುಮಕೂಡಲು ನರಸೀಪುರದ ಕುಂಭಮೇಳದಲ್ಲಿ ಭಾಗವಹಿಸಬೇಕು ಎಂದರು.

ಗಂಗೆಯಷ್ಟೇ ಪಾವಿತ್ರ್ಯತೆಯನ್ನು ಕಾವೇರಿ ನದಿಯೂ ಹೊಂದಿದ್ದು, ಪ್ರತಿ ವರ್ಷ ಯುಗಾದಿ ಹಬ್ಬದಂದು ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿ, ಪೂಜೆ ಹೋಗುವ ಪದ್ಧತಿ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈ ಮಹಿಮೆ ಅರಿತು ವಿವಿಧ ಮಠಗಳ ಹರಗುರು ಚರಮೂರ್ತಿಗಳು ದಕ್ಷಿಣ ಭಾರತದ ಕುಂಭಮೇಳಕ್ಕೆ ತಿರುಮಕೂಡಲು ಕ್ಷೇತ್ರ ಆಯ್ಕೆ ಮಾಡಿದ್ದಾರೆ. ಹರಿಯುವ ನದಿ ಮಧ್ಯೆ ಇರುವ ಶ್ರೀನಡುಹೊಳೆ ಬಸಪ್ಪ, ರುದ್ರ ಪಾದವನ್ನು ಸ್ಪರ್ಶಿಸಿ, ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿ, ತೀರದಲ್ಲಿ ಹರಹರಿ ಪ್ರತಿರೂಪದಂತೆ ಪ್ರತಿಷ್ಠಾಪನೆಯಾಗಿರುವ ಶ್ರೀಅಗಸ್ತೇಶ್ವರ ದೇವಾಲಯ ಹಾಗೂ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ದೇವರ ದರ್ಶನ ಪಡೆದು ಪರಮ ಪುನೀತರಾಗುವ ಅವಕಾಶ ಸಾರ್ವಜನಿಕರಿಗೆ ಮೂರು ದಿನಗಳ ಕಾಲ ಲಭ್ಯವಿದೆ ಎಂದರು.

ತಾತ್ಕಾಲಿಕವಾಗಿ ರಸ್ತೆಗಳ ದುರಸ್ಥಿ: ಕುಂಭಮೇಳ ಉತ್ಸವ ನಡೆಯುವ ವೇಳೆ ಲಕ್ಷಾಂತರ ಜನರು ಆಗಮಿಸುವ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಹದಗೆಟ್ಟಿದ್ದ ರಸ್ತೆಗಳನ್ನು ತಾತ್ಕಾಲಿಕವಾಗಿ ಪುರಸಭೆ ಅನುದಾನದಲ್ಲಿ ದುರಸ್ಥಿಗೊಳಿಸಿ ಡಾಂಬರ್ ಹಾಕಲಾಗಿದೆ. ಕುಂಭಮೇಳ ಮುಗಿದ ಬಳಿಕ ವರುಣ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಿಗೆ 11 ಕೋಟಿ ಹಾಗೂ ನರಸೀಪುರ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳ ರಸ್ತೆಗಳ ಅಭಿವೃದ್ಧಿಗೆ 6 ಕೋಟಿ ಅನುದಾನದಲ್ಲಿ ಯೋಜನೆ ರೂಪಿಸಿದ್ದು, ಸಚಿವರು ಸೇರಿದಂತೆ ಸಂಸದ ಹಾಗೂ ವಿಧಾನ ಪರಿಷತ್ ಸದಸ್ಯರನ್ನು ಆಹ್ವಾನಿಸಿ ಶಿಷ್ಟಾಚಾರದಂತೆ ಕಾಮಗಾರಿ ಆರಂಭಿಸಲಾಗುವುದು ಎಂದರು.

ಸನ್ಮಾನ



ಜಂತುಪುರ ಗ್ರಾಮದ ದೇವು ಚಾಮಮ್ಮ ದೇವಾಲಯದ ದೇವಿ ವಿಗ್ರಹ ಕೆತ್ತನೆ, ದೇವಾಲಯಕ್ಕೆ ಪೇಂಟಿಂಗ್ ಮಾಡಿಸಲು 50ಸಾವಿರ ದೇಣಿಗೆ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಅಭಿನಂದಿಸಿದರು.

ತುಂಬಸೋಗೆ ಕಾಲೇಜಲ್ಲಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



ಮೈಸೂರು ವಿವಿಯಲ್ಲಿ 11 ಚಿನ್ನದ ಪದಕ ಪಡೆದ ಕಾವ್ಯ, ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದ ಕನ್ನಿಕಾ ಅವರನ್ನು ಅಭಿನಂದಿಸಲಾಯಿತು.

ಹೆಚ್.ಡಿ.ಕೋಟೆ, ಫೆ.8– ಪೋಷಕರು ತಮ್ಮ ಮಕ್ಕಳ ಭವಿಷ್ಯ ರೂಪಿಸುವುದು ಬಿಟ್ಟರೆ ಬೇರೆ ಯಾವ ಸಾಧನೆಯತ್ತ ಗಮನ ಹರಿಸುವುದಿಲ್ಲ. ಆದ್ದರಿಂದ ಪೋಷಕರ ಶ್ರಮಕ್ಕೆ ಕುಂದು ಬಾರದಂತೆ ವಿದ್ಯಾರ್ಥಿಗಳು ಶ್ರಮ ವಹಿಸಬೇಕು ಎಂದು ಹುಣಸೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಾಮೇಗೌಡ ತಿಳಿಸಿದರು.

ತಾಲೂಕಿನ ತುಂಬಸೋಗೆ ಗ್ರಾಮದ ಎಂ.ಎಂ.ಕೆ. ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಮತ್ತು ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಂಜುಂಡಪ್ಪ ವರದಿ ಅನ್ವಯ ಹೆಚ್.ಡಿ. ಕೋಟೆಗೆ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಶಾಲಾ ಕಾಲೇಜಿನ ಫಲಿತಾಂಶ ಗಮನಿಸಿದಾಗ ಆ ಹಣೆಪಟ್ಟಿ ದೂರವಾಗುತ್ತಾ ಸಾಗಿದೆ ಎಂದರು.

ಎಂ.ಎಂ.ಕೆ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ಮಾತನಾಡಿದರು. ಮೈಸೂರು ವಿವಿಯಲ್ಲಿ 11 ಚಿನ್ನದ ಪದಕ ಪಡೆದ ಕಾವ್ಯ ಮತ್ತು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿ ಕನ್ನಿಕಾ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಮಂಜು, ವೈದ್ಯನಾಥ್, ಕೃಷ್ಣೇಗೌಡ, ಸಕಲೇಶ್, ಅಶೋಕ್, ಶ್ರೀಧರ್, ಭೋಧಕ ಸಿಬ್ಬಂದಿಗಳಾದ ವಿರೂಪಾಕ್ಷ ಜಾನ್, ಸಿದ್ದರಾಜು, ಸಿದ್ಧಾರ್ಥ್, ಮೋಹನ್, ಮನೋಜ್, ಪ್ರಸನ್ನ, ಮಾದೇವಿ, ಸುಪ್ರಿಯಾ, ಮುಸ್ಕಾನ್, ಶೃತಿ, ನೀಲಮ್ಮ, ಭಾಗ್ಯ, ಶಾಂತರಾಜು, ತನುಜಾ ಇದ್ದರು.

ಸುಜ್ಜಲೂರಲ್ಲಿ ಬೋರ್‌ವೆಲ್ ಪೈಪ್ ನಾಶ



ಬೋರ್‌ವೆಲ್ ಪೈಪ್ ಅನ್ನು ದುಷ್ಕರ್ಮಿಗಳು ಕತ್ತರಿಸಿರುವುದು.

ತಿ.ನರಸೀಪುರ, ಫೆ.8– ಬಾಳೆ ತೋಟಕ್ಕೆ ನೀರು ಹಾಯಿಸಲು ಅಳವಡಿಸಿದ್ದ ಬೋರ್‌ವೆಲ್ ಪೈಪ್ ಅನ್ನು ದುಷ್ಕರ್ಮಿಗಳು ಕತ್ತರಿಸಿರುವ ಘಟನೆ ತಾಲೂಕಿನ ಸುಜ್ಜಲೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಎಂ.ಲೋಕೇಶ್ ಅವರಿಗೆ ಸೇರಿದ 2.10 ಎಕರೆ ಜಮೀನಿನಲ್ಲಿ ನೇಂದ್ರ ಬಾಳೆ ಬೆಳೆದಿದ್ದು, ಕಟಾವಿಗೆ 15 ದಿನ ಬಾಕಿ ಇತ್ತು. ಆದರೆ ದುಷ್ಕರ್ಮಿಗಳು ಬೋರ್‌ವೆಲ್‌ನ 12 ಲೆಂತ್ ಪೈಪ್ ಅನ್ನು ಕತ್ತರಿಸಿ ವಿಕೃತಿ ಮೆರೆದಿದ್ದು, ಶನಿವಾರ ಬೆಳಗ್ಗೆ ಲೋಕೇಶ್ ಅವರು ತೋಟಕ್ಕೆ ಹೋದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ.

ಮೋಟಾರ್ ಸಮೇತ ಅಳವಡಿಸಲಾಗಿದ್ದ ಪೈಪ್ ಅನ್ನು ಆಕ್ಸಲ್ ಬ್ಲೇಡ್‌ನಿಂದ ಕತ್ತರಿಸಿರುವ ಕಿಡಿಗೇಡಿಗಳು 12 ಲೆಂತ್ ಪೈಪ್ ಅನ್ನು ಭೂಮಿ ಒಳಕ್ಕೆ ಬಿಟ್ಟಿರುವುದರಿಂದ ತೀವ್ರ ತೊಂದರೆ ಉಂಟಾಗಿದೆ. ಮುಂದಿನ 15 ದಿನದಲ್ಲಿ ಕಟಾವು ಆಗಬೇಕಿದ್ದ ಬಾಳೆಗೆ ನಿತ್ಯ ನೀರು ಹಾಯಿಸಬೇಕಿದ್ದು, ಪೈಪ್ ಕತ್ತರಿಸಿರುವುದರಿಂದ 15 ಲಕ್ಷ ರೂ. ಮೌಲ್ಯದ ಬೆಳೆ ಕೈ ತಪ್ಪುವ ಆತಂಕಕ್ಕೆ ಲೋಕೇಶ್ ಒಳಗಾಗಿದ್ದಾರೆ.

4 ಲಕ್ಷ ರೂ. ಖರ್ಚು ಮಾಡಿ ಬಾಳೆ ಬೆಳೆದು ಈಗ ಬೆಳೆ ಕೈ ಸೇರುವ ಹೊತ್ತಿನಲ್ಲಿ ಈ ಘಟನೆ ನಡೆದಿರುವುದರಿಂದ ತೋಟದ ಮಾಲೀಕ ಲೋಕೇಶ್ ತಿ.ನರಸೀಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಘಟನೆಯಿಂದ ಹೊಸದಾಗಿ ಬೋರ್‌ವೆಲ್ ಕೊರೆಸುವ ಅನಿವಾರ್ಯತೆ ಎದುರಾಗಿದ್ದು, ಕೂಡಲೇ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿದ್ದಾರೆ.

ಜಮೀನು ಮಾಲೀಕ ಲೋಕೇಶ್ ಮಾತನಾಡಿ, 4 ಲಕ್ಷ ಖರ್ಚು ಮಾಡಿ ಬಾಳೆ ಬೆಳೆದಿದ್ದೆ. 15 ದಿನದಲ್ಲಿ ಕಟಾವಿಗೆ ಬರುತ್ತಿತ್ತು. ನೇಂದ್ರ ಬಾಳೆ ಕೆಜಿಗೆ 70 ರೂ. ಇದ್ದು ಲಾಭದ ನಿರೀಕ್ಷೆಯಲ್ಲಿದ್ದೆ. ಆದರೆ ದುಷ್ಕರ್ಮಿಗಳು ಪೈಪ್ ಕತ್ತರಿಸಿದ್ದಾರೆ. ಈಗ ನೀರು ಬಿಡದಿದ್ದರೆ ಬಾಳೆ ಬೆಳೆ ನಾಶವಾಗಲಿದೆ ಎಂದು ಅಳಲು ತೋಡಿಕೊಂಡರು. ಈ ವೇಳೆ ಗ್ರಾಮಸ್ಥರಾದ ಗಜೇಂದ್ರ, ನಾಗರಾಜು, ಉಮೇಶ್, ಅಭಿ, ಮಹದೇವಸ್ವಾಮಿ ಇದ್ದರು.

ಚನ್ನಂಗೆರೆ ಗ್ರಾಪಂಗೆ ಕೃಷ್ಣಪ್ಪ ಉಪಾಧ್ಯಕ್ಷ



ಚನ್ನಂಗೆರೆ ಗ್ರಾಪಂ ಉಪಾಧ್ಯಕ್ಷ ಸಿ.ಕೃಷ್ಣಪ್ಪ ಅವರನ್ನು ಮುಖಂಡರು ಅಭಿನಂದಿಸಿದರು.

ಚುಂಚನಕಟ್ಟೆ, ಫೆ.8– ಇಲ್ಲಿಗೆ ಸಮೀಪದ ಚನ್ನಂಗೆರೆ ಗ್ರಾಪಂ ಉಪಾಧ್ಯಕ್ಷರಾಗಿ ಸಿ.ಕೃಷ್ಣಪ್ಪ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷ ಸೋಮಶೇಖರ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ಚುನಾವಣೆ ನಡೆಯಿತು. ಉಪಾಧ್ಯಕ್ಷ ಸ್ಥಾನಕ್ಕೆ ಸದಸ್ಯರಾದ ರವಿಕುಮಾರ್, ಧನಲಕ್ಷ್ಮಿ, ಕೃಷ್ಣಪ್ಪ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಕೃಷ್ಣಪ್ಪ 7 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೇ, ಧನಲಕ್ಷ್ಮಿ, ರವಿಕುಮಾರ್ ತಲಾ 5 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ತೋಟಗಾರಿಕಾ ಇಲಾಖೆ ಸಹಾಯಕ ನಿರ್ದೇಶಕಿ ಭಾರತಿ ಕಾರ್ಯ ನಿರ್ವಹಿಸಿದರು.

ಚುನಾವಣೆಯಲ್ಲಿ ಸದಸ್ಯರಾದ ಸವಿತಾ, ರತ್ನಮಣಿ, ಚೈತ್ರ, ಅನಿತಾ, ಮಾದಯ್ಯ, ಸೋಮಶೇಖರ, ರಾಜೇಶ್ವರಿ, ಸುನೀತಾ, ಗಿರಿಜಾ, ಅಶ್ವತ್ ಕುಮಾರ, ಶೀಲಾ, ರಾಮಚಂದ್ರ ಸುನೀತಾ ಸೇರಿದಂತೆ ಎಲ್ಲಾ 17 ಸದಸ್ಯರು ಭಾಗವಹಿಸಿದ್ದರು.

ನೂತನ ಉಪಾಧ್ಯಕ್ಷ ಕೃಷ್ಣಪ್ಪ ಅವರನ್ನು ಮುಖಂಡರಾದ ಗಂಗಾಧರ, ಮಂಜುನಾಥ, ಪ್ರಕಾಶ, ಬೋರೇಗೌಡ, ಕಾಂತರಾಜು, ದಿನೇಶ, ರಘುನಾಯಕ, ಹರೀಶ, ಲಾರಿ ಮಂಜು, ಮಲ್ಲಿಕಾರ್ಜುನ, ತಮ್ಮೇಗೌಡ, ಚಂದ್ರಶೇಖರ, ರಮೇಶ, ರಾಜೇಗೌಡ, ಅಭಿ ಕುಮಾರ್ ನಾಯಕ, ಲೋಕೇಶ ಮತ್ತಿತರರು ಅಭಿನಂದಿಸಿದರು.

ಸರಗೂರು: ನಡಹಾಡಿಯಲ್ಲಿ ನಂದಿ ಬಸವೇಶ್ವರಸ್ವಾಮಿ ದೇವಾಲಯ ಉದ್ಘಾಟನೆ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಸರಗೂರು, ಫೆ.8– ದೇವರ ಮೇಲೆ ನಂಬಿಕೆ ಇರಲಿ. ಆದರೆ ಮೂಢನಂಬಿಕೆ ಬೇಡ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ನಡಹಾಡಿ ಗ್ರಾಮದಲ್ಲಿ ಶನಿವಾರ ನಡೆದ ನಂದಿ ಬಸವೇಶ್ವರ ಸ್ವಾಮಿ ನೂತನ ಆಲಯ ಪ್ರತಿಷ್ಠಾಪನೆ ಹಾಗೂ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ನಾವು ಏನೇ ಮಾಡಿದರೂ ದೇವರ ಮೇಲೆ ಭಾರ ಹಾಕಿದರೆ ಯಶಸ್ವಿ ಆಗಲು ಸಾಧ್ಯವಿಲ್ಲ. ದೇವರ ಮೇಲೆ ನಂಬಿಕೆ ಇರಲಿ. ಆದರೆ ಮೂಢನಂಬಿಕೆ ಇರಬಾರದು. ಚಾಮರಾಜನಗರಕ್ಕೆ ಹೋದರೆ ಅಧಿಕಾರ ಹೋಗುತ್ತೆ ಎಂದರು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು 23 ಬಾರಿ ಹೋಗಿ ಬರಲ್ಲಿಲ್ಲವೇ ಎಂದ ಅವರು ಕಾಡಂಚಿನ ನಡಹಾಡಿ ಗ್ರಾಮಕ್ಕೆ ಇದೇ ಮೊದಲ ಬಾರಿಗೆ ಬಂದಿದ್ದೇನೆ ಎಂದ ಅವರು ಪ್ರಕೃತಿ ದತ್ತವಾದ ಸ್ಥಳದಲ್ಲಿ ನಂದಿ ಬಸವೇಶ್ವರಸ್ವಾಮಿ ನೂತನ ಆಲಯ ಪ್ರತಿಷ್ಠಾಪನೆ ಮಾಡಿರುವ ಗ್ರಾಮಸ್ಥರಿಗೆ ಅಭಿನಂದನೆ ತಿಳಿಸಿದರು.

ಮೈಸೂರು ಕಾಗಿನೆಲೆ ಗುರುಪೀಠದ ಶಿವನಂದಪುರಿ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ದೂರ ಇರುವ ದೇವರುಗಳ ಬಹಳ ಗೌರವಿಸುತ್ತೇವೆ. ಆದರೆ ಗ್ರಾಮದಲ್ಲಿರುವ ದೇವರನ್ನು ನಾವು ವಾರದಲ್ಲಿ ಒಂದು ದಿನ, ಅಮಾವಾಸ್ಯೆ, ಪೌರ್ಣಮಿಯಂದು ಪೂಜಿಸುತ್ತೇವೆ. ಭಾವನೆಯಲ್ಲಿ ದೇವರಿದ್ದಾನೆ. ನಮ್ಮ ಮೈಯಲ್ಲಿ ದೇವರಿಲ್ಲ. ಗ್ರಾಮದ ದೇವರನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸಿ ಎಂದರು.

ಶಾಸಕ ಅನಿಲ್ ಮಾತನಾಡಿ, ಈ ದೇವಸ್ಥಾನ ನಿರ್ಮಾಣಕ್ಕೆ 7.50 ಲಕ್ಷ ರೂ. ಅನುದಾನ ನೀಡಿದ್ದೇನೆ. ತಾಲೂಕಿನಲ್ಲಿ ಇನ್ನೂ 15 ಕನಕ ಭವನ ನಿರ್ಮಿಸುವ ಯೋಜನೆ ಇದೆ. ಅಲ್ಲದೇ ಗ್ರಾಮಕ್ಕೆ ಬೇಕಾಗುವ ಮೂಲ ಸೌಕರ್ಯಕ್ಕೆ ಒತ್ತು ನೀಡಲಾಗುವುದು. ಎರಡೂ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಸಿಎಂ ಸಿದ್ದರಾಮಯ್ಯ ಅವರಿಂದ ಹೆಚ್ಚು ಅನುದಾನ ತರುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಎಂ.ಬಿ.ಆನಂದ್, ಜಿಲ್ಲಾ ಕುರುಬ ಸಮಜದ ಅಧ್ಯಕ್ಷ ಶಿವಪ್ಪಕೋಟೆ, ಕುರುಬ ಸಂಘದ ನಿಕಟ ಪೂರ್ವ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ನಡಾಡಿ ಗ್ರಾಮದ ಗುಡಿಗೌಡ ಪುಟ್ಟೇಗೌಡ, ಜಿಪಂ ಮಾಜಿ ಅಧ್ಯಕ್ಷ ಪಿ.ರವಿ, ಬಿ.ಮಟಕೆರೆ ಗ್ರಾಪಂ ಅಧ್ಯಕ್ಷ ನಾಗೇಂದ್ರ, ತಾಲೂಕು ನಾಮಧಾರಿಗೌಡ ಸಮಾಜದ ಅಧ್ಯಕ್ಷ ಎಂ.ಎನ್. ಭೀಮರಾಜು, ಎಂ.ಕೆ.ಹರಿದಾಸ್, ಗುಣಪಾಲ್, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಚಿನ್ನಯ್ಯ, ಮಂಜು, ಶಿವಮಲ್ಲಪ್ಪ, ಎಂ.ಕೆ.ಕೃಷ್ಣಪ್ಪ, ರಾಜೇಗೌಡ, ದೇವದಾಸ್, ಎಂ.ಎಸ್. ದೇವರಾಜು, ಬೀರೇಗೌಡ, ಬೀರೇಗೌಡ, ಅಭಿಕುಮಾರ್ ಜೆ.ವಿ.ಸೀತಾರಾಮ್, ಈರೇಗೌಡ, ಗಿರಿಗೌಡ, ಸಿದ್ದರಾಮೇಗೌಡ, ಮಲ್ಲರಾಜು, ರಮೇಶ್, ನಾಗೇಶ್, ಹುಚ್ಚೇಗೌಡ, ಅಪ್ಪಾಜಿ, ಸಂತೋಷ್, ಮಂಜು, ಮಾದಪ್ಪ, ಮಲ್ಲೇಶ್ ನಾಯಕ, ಎಂ.ಕೆಂಡಗಣ್ಣಸ್ವಾಮಿ, ಚಿಕ್ಕಣ್ಣ, ನಟರಾಜು, ಶಿವರಾಜು ಹಾಗೂ ಗ್ರಾಮಸ್ಥರು ಯುವಕ ಸಂಘದವರು ಹಾಜರಿದ್ದರು.

ಸಾರ್ವಜನಿಕರ ಕಲ್ಯಾಣಕ್ಕಾಗಿ ಮಠಮಾನ್ಯಗಳು ಶ್ರಮಿಸುತ್ತಿವೆ

ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಕಾರ್ಯಕ್ರಮವನ್ನು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ನಂಜನಗೂಡು, ಫೆ.8– ಮಠಮಾನ್ಯಗಳು ಸಾರ್ವಜನಿಕರ ಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ ಎಂದು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಶಿರಮಳ್ಳಿಯಲ್ಲಿ ಶ್ರೀಮುರಘಿ ಮಠದ ರಾಜದ್ವಾರ ಹಾಗೂ ಬಸವರಾಜ ಸ್ವಾಮೀಜಿಗಳ ಗದ್ದುಗೆ ಲೋಕಾರ್ಪಣೆ, ಇಮ್ಮಡಿ ಮುರಘಿ ಸ್ವಾಮೀಜಿಯವರ 11ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಮಠಮಾನ್ಯಗಳು ಭಕ್ತರಿಗೆ ಜ್ಞಾನದೀವಿಗೆ ನೀಡಿ, ಹಸಿವು ನೀಗಿಸಿ ಭಕ್ತರ ಸಂಕಟ ಪರಿಹರಿಸುವ ಮೂಲಕ ಅವರ ಬಾಳಿನಲ್ಲಿ ಬದಲಾವಣೆ ತಂದು ಸುಖ ಶಾಂತಿ ನೆಲೆಸಲು ಕಾರಣವಾಗಿವೆ. ಎಲ್ಲಾ ಧರ್ಮದ ಮಂದಿರ, ಮಠಗಳ ಆಚಾರ ವಿಚಾರಗಳಲ್ಲಿ ಅನೇಕ ಬದಲಾವಣೆ ಇದ್ದರೂ, ಜನತೆಯ ಕಲ್ಯಾಣಕ್ಕಾಗಿ ಏಕಭಾವದಿಂದ ಕೆಲಸ ಮಾಡುತ್ತಿವೆ. ಮನುಷ್ಯ ಸಕಾರಾತ್ಮಕವಾಗಿ ಜೀವನ ರೂಪಿಸಿಕೊಳ್ಳಲು ಬೇಕಾದ ಮಾರ್ಗದರ್ಶನ ನೀಡುತ್ತಿವೆ ಎಂದರು.

ಭಾರತ ಸಾಂಸ್ಕೃತಿಕವಾಗಿ ಸಂಪತ್ಭರಿತ ದೇಶವಾಗಿದ್ದು, ಜಗತ್ತಿನ ಮುಂದುವರಿದ ದೇಶಗಳಿಗೂ ಮಾರ್ಗದರ್ಶನ ಮಾಡುವ ಶಕ್ತಿಯುತ ರಾಷ್ಟ್ರವಾಗಿದೆ. ಭಾರತೀಯರು ಬಡವರಾಗಿದ್ದು, ಶ್ರೀಮಂತಿಕೆ ಇಲ್ಲದಿದ್ದರೂ ಇನ್ನೊಬ್ಬರ ಶ್ರೀಮಂತಿಕೆ ನೋಡಿ ಸಂತೋಷ ಪಟ್ಟು ಶುಭ ಹಾರೈಸುವ ಪ್ರವೃತ್ತಿ ಹೊಂದಿದ್ದಾರೆ. ಆದ್ದರಿಂದಲೇ ಜಗತ್ತಿನ ಇತರೆ ಮುಂದುವರಿದ ರಾಷ್ಟ್ರಗಳು ಸುಖ ಶಾಂತಿಗಾಗಿ ಭಾರತದತ್ತ ತಿರುಗಿ ನೋಡುವ ಸನ್ನಿವೇಶ ನಿರ್ಮಾಣವಾಗಿದೆ. ದೇಶದ ಸಂಪ್ರದಾಯ, ಪರಂಪರೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಭಾರತೀಯರು ವಿದೇಶಿ ಸಂಪ್ರದಾಯಕ್ಕೆ ಮಾರು ಹೋಗಿ ನಮ್ಮ ಸಂಸ್ಕೃತಿ ಮರೆಯುತ್ತಿದ್ದಾರೆ. ಅಲ್ಲದೇ ನಗರ ಪ್ರದೇಶಗಳಲ್ಲಿ ತಂದೆ ತಾಯಿಯನ್ನು ಪ್ರೀತಿಸದೆ ಉದಾಸೀನವಾಗಿ ಕಾಣುತ್ತಿದ್ದಾರೆ. ಭಾರತೀಯರು ನಮ್ಮ ಸಂಸ್ಕೃತಿಯನ್ನು ಎಂದಿಗೂ ಮರೆಯಬಾರದು. ಸಮಾಜದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡುವ ಮೂಲಕ ಗುರು ಹಿರಿಯರಲ್ಲಿ ಹಾಗೂ ಎಲ್ಲರಲ್ಲೂ ಪರಸ್ಪರ ಪ್ರೀತಿ ನಂಬಿಕೆ ವಿಶ್ವಾಸ ಮೂಡಿಸುವಂತಹ ಜವಾಬ್ದಾರಿ ಮಠಮಾನ್ಯಗಳ ಮೇಲಿದೆ ಎಂದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಮಠ ಮಾನ್ಯಗಳು ದಾಸೋಹ, ಶಿಕ್ಷಣ ಕ್ರಾಂತಿಗಳ ಮೂಲಕ ಎಲ್ಲರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿವೆ. ಆದರೆ ಸಮಾಜದಲ್ಲಿ ಜಾತೀಯತೆ, ಅಸ್ಪೃಶ್ಯತೆ ಇನ್ನೂ ಜೀವಂತವಾಗಿದ್ದು ಮಠಮಾನ್ಯಗಳು ಮಾರ್ಗದರ್ಶನ ನೀಡಿ, ಅವುಗಳಿಗೆ ಕಡಿವಾಣ ಹಾಕಿ ಅಂತರ್ಜಾತಿ ವಿವಾಹಗಳ ಪ್ರೋತ್ಸಾಹದ ಮೂಲಕ ಜಾತಿ ನಿವಾರಣೆಗೆ ಶ್ರಮಿಸಬೇಕು ಎಂದರು.

> ಮಠಮಾನ್ಯಗಳು ಅನ್ನ ಮತ್ತು ಶಿಕ್ಷಣ ದಾಸೋಹ ಸೇರಿದಂತೆ ತಮ್ಮ ಸೇವಾ ಕಾರ್ಯದ ಮೂಲಕ ಜನರ ಕಷ್ಟಗಳನ್ನು ನಿವಾರಿಸಿ ಜನರ ಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ. ಶಿರಮಳ್ಳಿ ಮಠವು ಸಹ ಈ ಭಾಗದ ಜನರಿಗೆ ಮಾರ್ಗದರ್ಶನ ನೀಡಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದೆ. ನಾನು ಕ್ಷೇತ್ರದ ಶಾಸಕನಾಗಿ ನನ್ನ ತಂದೆ ಆರ್.ಧ್ರುವನಾರಾಯಣ್ ಅವರಂತೆ ನಾನು ಮಠಮಾನ್ಯಗಳ ಸೇವಾ ಕಾರ್ಯಗಳಿಗೆ ಸಹಕಾರ ನೀಡುವ ಕೆಲಸ ಮಾಡುತ್ತೇನೆ.
> – ದರ್ಶನ್, ಶಾಸಕ.

ಸಮಾರಂಭದಲ್ಲಿ ದೇವನೂರು ಮಠದ ಮಹಾಂತ ಸ್ವಾಮೀಜಿ, ಹುಲ್ಲಹಳ್ಳಿ ಮಠದ ಚೆನ್ನಮಲ್ಲಿ ದೇಶೀಕೇಂದ್ರ ಸ್ವಾಮೀಜಿ, ದೇಗುಲ ಮಠದ ಚನ್ನಬಸವ ಸ್ವಾಮೀಜಿ, ಶಿರಮಳ್ಳಿ ಮುರಘಿ ಮಠದ ಇಮ್ಮಡಿ ಮುರಘಿ ಸ್ವಾಮೀಜಿ, ಚಿತ್ರ ನಟ ಸುಚೇಂದ್ರ ಪ್ರಸಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠ ನಾಯಕ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ಮುಖಂಡರಾದ ಹಗಿನವಾಳು ಚೆನ್ನಪ್ಪ ಎನ್.ಸಿ.ಬಸಪ್ಪಣ್ಣ, ಶಿವಮಲ್ಲು, ಮಹೇಶ್, ಅಶೋಕ್, ಮಠದ ಕಾರ್ಯದರ್ಶಿ ಶಿವಪಾದು ಸೇರಿದಂತೆ ಹಲವರಿದ್ದರು.

ಬಿಜೆಪಿಗೆ ದೆಹಲಿ ಗದ್ದುಗೆ; ಮೈಸೂರಲ್ಲಿ ಬಿಜೆಪಿ ಸಂಭ್ರಮಾಚರಣೆ

ಮೈಸೂರು,ಫೆ.8(ಎಂಟಿವೈ)– ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಮೈಸೂರು ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ದೆಹಲಿ ವಿಧಾನಸಭಾ ಚುನಾವಣಾ ಮತ ಎಣಿಕಾ ಕಾರ್ಯ ಪೂರ್ಣಗೊಳ್ಳುತ್ತಿದ್ದಂತೆಯೇ ಮೈಸೂರಿನ ಚಾಮರಾಜಪುರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಕಾರ್ಯಕರ್ತರ ಸಂಭ್ರಮ ಮನೆ ಮಾಡಿತ್ತು. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ದೆಹಲಿ ಗೆಲುವಿನ ವಿಜಯೋತ್ಸವ ಆಚರಿಸಿ, ಕಚೇರಿ ಮುಂದೆ ಪಟಾಕಿ ಸಿಡಿಸಿ, ಸಿಹಿ ಹಂಚಿದರು.

ಈ ಸಂದರ್ಭದಲ್ಲಿ ಸಂಸದ ಯದುವೀರ್ ಮಾತನಾಡಿ, ದೆಹಲಿಯಲ್ಲಿ 27 ವರ್ಷದ ನಂತರ ಬಿಜೆಪಿ ಸ್ಪಷ್ಟ ಬಹುಮತ ಪಡೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವ ಹಾಗೂ ಅವರು ದೇಶಕ್ಕೆ ನೀಡಿದ ಕೊಡುಗೆಯನ್ನು ಮನಗಂಡು ದೆಹಲಿ ಜನತೆ ಬಿಜೆಪಿಗೆ ಬೆಂಬಲ ನೀಡಿದ್ದಾರೆ. ದೆಹಲಿಯ ವಿವಿಧ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿ ಪರ ನಾನು ಸಹ ಪ್ರಚಾರ ಮಾಡಿದ್ದೆ. ಗೆಲುವಿನ ಮುನ್ಸೂಚನೆ ಇತ್ತು. ಆಮ್ ಆದ್ಮಿ ಪಕ್ಷದ ದುರಾಡಳಿತದಿಂದ ಅಲ್ಲಿನ ಜನತೆ ಬೇಸತ್ತಿದ್ದರು. ಆಪ್ ಸರ್ಕಾರ ಹಲವು ಭ್ರಷ್ಟಾಚಾರ ನಡೆಸಿ ಅಲ್ಲಿನ ಜನರ ಕೆಂಗಣ್ಣಿಗೆ ಗುರಿಯಾಗಿತ್ತು. ಭ್ರಷ್ಟ ಸರ್ಕಾರವನ್ನು ದೆಹಲಿ ಜನತೆ ಕಿತ್ತೆಸೆದಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲೂ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂದರು.



ದೆಹಲಿಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ದೆಹಲಿಯಲ್ಲಿ ನಿರೀಕ್ಷೆಯಂತೆ ಬಿಜೆಪಿಗೆ ಸ್ಪಷ್ಟ ಬಹುಮತ ಲಭಿಸಿದೆ. ಇದಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಪಕ್ಷದ ಕಾರ್ಯಕರ್ತರು ಶ್ರಮಿಸಿದ್ದಾರೆ. ಅಲ್ಲದೆ, ವ್ಯವಸ್ಥಿತವಾಗಿ ಪ್ರಚಾರ ಮಾಡಿದ್ದು ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಸಹಕಾರಿಯಾಗಿದೆ. ದೆಹಲಿ ಚುನಾವಣೆಯ ತಂತ್ರಗಾರಿಕೆಯನ್ನೇ ಮುಂಬರುವ ದಿನಗಳಲ್ಲಿ ಎಲ್ಲಾ ರಾಜ್ಯಗಳ ಚುನಾವಣೆಯಲ್ಲೂ ಅಳವಡಿಸಿಕೊಳ್ಳುತ್ತೇವೆ. ಅರವಿಂದ್ ಕೇಜ್ರಿವಾಲ್ ಜೈಲಿಗೆ ಹೋದರೂ ರಾಜೀನಾಮೆ ನೀಡಲಿಲ್ಲ. ಜೈಲಿನಿಂದಲೇ ಆಡಳಿತ ನಡೆಸುತ್ತೇನೆಂದು ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಂಡರು. ಆಪ್ ಸರ್ಕಾರದ ಹಲವು ಸಚಿವರು ಹಗರಣದಲ್ಲಿ ಭಾಗಿಯಾಗಿ ಜೈಲುವಾಸ ಅನುಭವಿಸಿದರು. ಆಪ್ ಸರ್ಕಾರದ ವ್ಯಾಪಕ ಭ್ರಷ್ಟಾಚಾರದಿಂದ ಬೇಸತ್ತ ದೆಹಲಿಯ ಜನರು ಬಿಜೆಪಿಗೆ ಅಧಿಕಾರ ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಎ1 ಆರೋಪ ಹೊತ್ತಿರುವವರ ನೇತೃತ್ವದ ಸರ್ಕಾರವಿದೆ. ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ಭಾಗಿಯಾಗಿಲ್ಲ ಎನ್ನುತ್ತಿದ್ದಾರೆ. ಹಾಗಾದರೆ ವಿವಾದಿತ 14 ನಿವೇಶನಗಳನ್ನು ಅವರ ಪತ್ನಿ ಪಾರ್ವತಿ ಮುಡಾಕ್ಕೆ ಏಕೆ ವಾಪಸ್ ನೀಡಿದರು. ಮುಡಾ ಹಗರಣ ಸಂಬಂಧ ಮೂರು ರೀತಿಯ ತನಿಖೆ ನಡೆಯುತ್ತಿವೆ. ಈ ಹಂತದಲ್ಲಿ ಸಿಬಿಐ ತನಿಖೆಯ ಅಗತ್ಯವಿರಲಿಲ್ಲ ಆದರೂ ದೂರುದಾರರು ಆತುರದಿಂದ ಸಿಬಿಐ ತನಿಖೆಗೆ ವಹಿಸುವಂತೆ ನ್ಯಾಯಾಲಯದ ಮೊರೆ ಹೋದರು. ದೂರುದಾರರು ಏಕೆ ಆತುರಕ್ಕೆ ಬಿದ್ದರೋ ಗೊತ್ತಿಲ್ಲ. ದೆಹಲಿ ಮಾದರಿಯಲ್ಲೇ ರಾಜ್ಯದಲ್ಲೂ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು.

ಬಿಜೆಪಿ ಆಂತರಿಕ ಬಿಕ್ಕಟ್ಟಿನಿಂದ ನೋವಾಗಿದೆ: ಬಿಜೆಪಿಯಲ್ಲಿ ಇತ್ತೀಚೆಗೆ ನಡೆಯುತ್ತಿರುವ ಕೆಲ ಬೆಳವಣಿಗೆ ಪಕ್ಷದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಪಕ್ಷದಲ್ಲಿನ ಆಂತರಿಕ ಬೆಳವಣಿಗೆಗಳಿಂದ ಮನಸ್ಸಿಗೆ ನೋವಾಗಿದೆ. ಪಕ್ಷದ ಕಾರ್ಯಕರ್ತರಿಗೂ ಬೇಸರ ತರಿಸಿದೆ. ಕೇಂದ್ರ ನಾಯಕರು ದೆಹಲಿ ಚುನಾವಣೆಯತ್ತ ಗಮನಹರಿಸಿದ್ದರು. ಹಾಗಾಗಿ ರಾಜ್ಯದ ವಿದ್ಯಮಾನದ ಬಗ್ಗೆ ಗಮನ ನೀಡಿರಲಿಲ್ಲ ಸದ್ಯದಲ್ಲೇ ಎಲ್ಲಾ ನಾಯಕರನ್ನು ಒಟ್ಟಿಗೆ ಕೂರಿಸಿ, ಮಾತನಾಡಿ ಸಮಸ್ಯೆ ಬಗೆಹರಿಸುವ ವಿಶ್ವಾಸವಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಗಿರಿಧರ್, ನಗರ ವಕ್ತಾರ ಎಂ.ಜಿ.ಮೋಹನ್, ಮಾಧ್ಯಮ ಸಂಚಾಲಕ ಮಹೇಶ್ ರಾಜ್ ಅರಸ್, ಮಾಜಿ ಮೇಯರ್ ಶಿವಕುಮಾರ್, ಮಾಜಿ ಉಪಮೇಯರ್ ಶೈಲೇಂದ್ರ ಮುಖಂಡರಾದ ಬಿ.ಪಿ.ಮಂಜುನಾಥ್, ಶಿವಕುಮಾರ್, ಬಿ.ಎಂ.ರಘು, ರಮೇಶ್, ರಾಕೇಶ್ ಹಾಗೂ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡಾಕು ಮಹಾರಾಜ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಂಡೇಲ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ತಲ್ವಾರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾಕು ಮಹಾರಾಜ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ರಾ.7.05ಕ್ಕೆ, ವಿದ್ದಾಮುಯರ್ಚಿ (ತ): ರಾ.10ಕ್ಕೆ.
ಸ್ಕ್ರೀನ್ 3	ಭೂ ಮಂತರ್ (ಕ): ಬೆ.10.45ಕ್ಕೆ, ರಾ.7.15ಕ್ಕೆ, ಕಾಡು ಮಲ್ಲೆ (ಕ): ಮ.1.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ಪೊನ್ಮನ್ (ಮ): ರಾ.10.15.
ಸ್ಕ್ರೀನ್ 4	ಮ್ಯಾಕ್ಸ್ (ಕ): ಮ.1ಕ್ಕೆ, ದೇವ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪೌರಕಾರ್ಮಿಕರನ್ನು ಕಾಯಂಗೊಳಿಸಿ, ಅವರ ಬೇಡಿಕೆ ಈಡೇರಿಸಬೇಕು

ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಆಗ್ರಹ

ಮೈಸೂರು, ಫೆ.8(ಜಿಎ)–ಪೌರ ಕಾರ್ಮಿಕರನ್ನು ಕಾಯಂಗೊಳಿಸುವುದರೊಂದಿಗೆ ವಿವಿಧ ಬೇಡಿಕೆ ಈಡೇರಿಸುವಂತೆ ಸಫಾಯಿ ಕರ್ಮಚಾರಿ ಆಯೋಗ ಮತ್ತು ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಉಸ್ತುವಾರಿಯ ಮಾಜಿ ಸದಸ್ಯ ಎಂ.ವಿ.ವೆಂಕಟೇಶ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೇರ ಪಾವತಿಯಲ್ಲಿ ಕರ್ತವ್ಯ ನಿರ್ವಹಿಸುವ ಕಾರ್ಮಿಕರು ಮರಣ ಹೊಂದಿದರೆ ಬಿಬಿಎಂಪಿ ಆದೇಶದ ರೀತಿಯಲ್ಲಿ ಹತ್ತು ಲಕ್ಷ ರೂ. ಇತರರಿಗೂ ಕಲ್ಪಿಸಿ, ಅನುಕಂಪದ ಆಧಾರದ ಮೇಲೆ ಉದ್ಯೋಗ ಹಾಗೂ ಪಿಂಚಣಿ ನೀಡಬೇಕು. ರಾಜ್ಯದಲ್ಲಿ ನಗರಪಾಲಿಕೆ, ಪುರಸಭೆ, ಪಟ್ಟಣ ಪಂಚಾಯಿತಿ ಮೊದಲಾದ ಕಡೆಗಳಲ್ಲಿನ ಒಳಚರಂಡಿ ಕಾರ್ಮಿಕರನ್ನು ಐಪಿಡಿ ಸಾಲಪ್ಪ ವರದಿಯಂತೆ ಗುತ್ತಿಗೆ ಪದ್ಧತಿಯಿಂದ ನೇರವಾಗಿ ಕಾಯಂ ಪದ್ಧತಿಗೆ ವಿಲೀನಗೊಳಿಸಬೇಕು. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಕ್ಕೆ ಪ್ರತಿ ವರ್ಷ ನೂರು ಕೋಟಿ ಅನುದಾನ ನೀಡಬೇಕು, ರಾಜ್ಯದಲ್ಲಿ ಉಳಿಕೆ ಆಗಿರುವಂತೆ ಪೌರಕಾರ್ಮಿಕರು ಹಾಗೂ ಕಸ ಸಾಗಾಣಿಕೆ ಚಾಲಕರು, ಲೋಡರ್‌ಗಳಂತಹ ಒಟ್ಟಾರೆ ಕಾರ್ಮಿಕರಿಗೆ ವಿಶೇಷ ನೇಮಕಾತಿ ಆದೇಶ ನೀಡಬೇಕೆಂದು ಕೋರಿದರು.

ಜೆಎಸ್‌ಎಸ್ ಕಾನೂನು ಕಾಲೇಜು ಇಂಟರ್ ಕಾಲೇಜ್ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ರೋಹನ್ ಗಂಗಡ್ಕರ್ ಅಮೋಘ ಸಾಧನೆ



ಅತಿಥಿ ಗಣ್ಯರೊಂದಿಗೆ ಬಹುಮಾನ ವಿಜೇತ ವಿದ್ಯಾರ್ಥಿಗಳನ್ನು ಕಾಣಬಹುದು

ಮೈಸೂರು, ಫೆ.8–ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನಡೆದ ಜೆಎಸ್‌ಎಸ್ ಕಾನೂನು ಕಾಲೇಜು ಇಂಟರ್ ಕಾಲೇಜ್ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ಕಾನೂನು ವಿದ್ಯಾರ್ಥಿ ರೋಹನ್ ಗಂಗಡ್ಕರ್ ಅತ್ಯುದ್ಭತವಾದ ಪ್ರದರ್ಶನ ನೀಡಿ, ಮೊದಲ ಸ್ಥಾನ ಪಡೆಯುವುದರ ಜೊತೆಗೆ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಕಾಲೇಜಿನ ಆವರಣದಲ್ಲಿ ನಡೆದ ಸ್ಪರ್ಧೆಯಲ್ಲಿ ಮೈಸೂರಿನ ಕೌಟುಂಬಿಕ ನ್ಯಾಯಾಲಯದ ಎರಡನೇ ಹೆಚ್ಚುವರಿ ನ್ಯಾಯಾಧೀಶರಾದ ಟಿ.ಶ್ರೀನಿವಾಸ್, ಕಾರ್ಮಿಕ ನ್ಯಾಯಾಲಯದ ಪ್ರೆಸಿಡಿಂಗ್ ಅಧಿಕಾರಿ ರವಿಕಾಂತ್ ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್ ಅವರ ಸಮ್ಮುಖದಲ್ಲಿ ಸ್ಪರ್ಧೆ ನಡೆಸಲಾಯಿತು.

ಇದರಲ್ಲಿ ಮೊದಲ ಬಹುಮಾನವನ್ನು ವಿದ್ಯಾರ್ಥಿಗಳಾದ ರೋಹನ್ ಗಂಗಡ್ಕರ್, ಅನನ್ಯ ಹಾಗೂ ಲಿಸಾ ಪಡೆದುಕೊಂಡರು. ಪ್ರಾರ್ಥನ, ದೀಪಿಕಾ, ಜೋಶಿ ಹಾಗೂ ಅಫ್ರಿನ್ ತಾಜ್ ಅವರ ತಂಡ ಎರಡನೇ ಸ್ಥಾನ ಪಡೆಯಿತು. ಉತ್ತಮ ಸಂಶೋಧನೆ ವಿಭಾಗದಲ್ಲಿ ಸೀನಿಯರ್ ವಿಭಾಗದಲ್ಲಿ ರೋಹನ್ ಗಂಗಡ್ಕರ್, ಜ್ಯೂನಿಯರ್ ವಿಭಾಗದಲ್ಲಿ ದಿವ್ಯ ಪ್ರಶಸ್ತಿ ಪಡೆದರು. ಉತ್ತಮ ಸ್ಪೀಕರ್ ಪ್ರಶಸ್ತಿ ಲಿಶಾ ಹಾಗೂ ಪ್ರಿಶಾ ಗ್ಲೋರಿಯ ಪಡೆದುಕೊಂಡರು. ಬೆಸ್ಟ್ ಮೆಮೋರಿಯಲ್ ಪ್ರಶಸ್ತಿಗೆ ರೋಹನ್ ವಿ ಗಂಗಡ್ಕರ್, ಲಿಶಾ ಹಾಗೂ ಅನನ್ಯ ಭಾಜನರಾದರು. ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜಿನ ಎಕ್ಸಿಕ್ಯೂಟಿವ್ ಅಧಿಕಾರಿ ಪ್ರೊ.ಸುರೇಶ್, ಪ್ರಾಂಶುಪಾಲರಾದ ವಾಣಿಶ್ರೀ ಸಂಯೋಜಕರಾದ ಅಸ್ಮತ್ ಉನ್ನಿಸಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಟಿ20 ವಿಶ್ವಕಪ್ ವಿಜೇತರಿಗೆ ವಜ್ರದ ಉಂಗುರ ಗಿಫ್ಟ್

ಮುಂಬೈ, ಫೆ.8– 2024ರ ಟಿ20 ವಿಶ್ವಕಪ್ ಗೆದ್ದ ತಂಡದ ಆಟಗಾರರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ವಿಶೇಷ ಉಂಗುರವನ್ನು ನೀಡಿ ಗೌರವಿಸಿತು. ಈ ಉಂಗುರವನ್ನು ಮಂಡಳಿಯು ಶುಕ್ರವಾರ ಅನಾವರಣಗೊಳಿಸಿದ್ದು ಈ ವಜ್ರದ ಉಂಗುರದ ಮೇಲೆ "ಚಾಂಪಿಯನ್ಸ್ ರಿಂಗ್", ಇಂಡಿಯಾ ಜೊತೆಗೆ ವಿಶ್ವ ಚಾಂಪಿಯನ್ ಎಂದು ಬರೆಯಲಾಗಿದೆ.

ಫೆಬ್ರವರಿ 1ರಂದು ನಡೆದ ವಾರ್ಷಿಕ ನಮನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಿಸಿಸಿಐ ಇದನ್ನು ವಿಶ್ವಕಪ್ ವಿಜೇತ ತಂಡದ ಆಟಗಾರರಿಗೆ ನೀಡಿದೆ. ಮಂಡಳಿಯು ಉಂಗುರದ ಮೇಲೆ ಪ್ರತಿಯೊಬ್ಬ ಆಟಗಾರನ ಹೆಸರು ಮತ್ತು ಸಂಖ್ಯೆಯನ್ನು ಮಧ್ಯದಲ್ಲಿ ಅಶೋಕ ಚಕ್ರದೊಂದಿಗೆ ಬರೆಯಲಾದ ವೀಡಿಯೊವನ್ನು ಟ್ವೀಟ್ ಮಾಡಿದೆ.

ಟಿ20 ವಿಶ್ವಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿದ್ದಕ್ಕಾಗಿ ಟೀಮ್ ಇಂಡಿಯಾಗೆ ಚಾಂಪಿಯನ್ಸ್ ರಿಂಗ್ ಅನ್ನು ನೀಡುತ್ತಿರುವುದು ಶಾಶ್ವತವಾಗಿ ನೆನಪಿನಲ್ಲಿ ಉಳಿಯಬಹುದು. ಆದರೆ ಈ ಗೆಲುವು ಖಂಡಿತವಾಗಿಯೂ ಶತಕೋಟಿ ಹೃದಯಗಳಲ್ಲಿ ಅಮರವಾಗಿದೆ. ಈ ನೆನಪುಗಳು ಯಾವಾಗಲೂ ನಮ್ಮೊಂದಿಗೆ ಇರುತ್ತವೆ ಮತ್ತು ಯಾವಾಗಲೂ ಇರುತ್ತವೆ ಎಂದು ವೀಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದೆ.

ನೂರಾರು ವರ್ಷಗಳ ಹಳೆಯ ಮನೆಗಳಿಗೆ ಇ–ಖಾತೆ ಸೌಲಭ್ಯ

ಮೈಸೂರು, ಫೆ.8(ಜಿಎ)–ಇ–ಖಾತೆಗೊಂದಲಕ್ಕೆ ರಾಜ್ಯ ಸರ್ಕಾರ ಕೈಗೊಂಡ ನಿರ್ಧಾರದಿಂದ ನಗರದ ಮಧ್ಯ ಭಾಗದಲ್ಲಿ ನೂರಾರು ವರ್ಷಗಳಿಂದ ಇರುವ ಹಳೆಯ ಮನೆಗಳಿಗೆ ಇ–ಖಾತೆ ಮಾಡಿಸಿಕೊಳ್ಳುವ ಸೌಲಭ್ಯ ದೊರೆತಿದೆ. ಹೀಗಾಗಿ ಅಂತಹವರು ಪ್ರಯೋಜನ ಪಡೆಯಬೇಕೆಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಹಳೇ ಬಡಾವಣೆಗಳಾದ ಅಶೋಕಪುರಂ, ಕೆ.ಜಿ.ಕೊಪ್ಪಲ್, ಪಡುವಾರಹಳ್ಳಿ, ಬಂಡಿಕೇರಿ, ಒಕ್ಕಲಗೇರಿ, ಕುರುಬಗೇರಿ, ಕುರುಬಾರಹಳ್ಳಿ ಮೊದಲಾದ ರೀತಿಯ ಗ್ರಾಮಗಳಿಗೆ ಈಗ ಇ–ಖಾತಾ ಮಾಡಿಕೊಡುವ ಸೌಲಭ್ಯ ಶೀಘ್ರದಲ್ಲೇ ಆರಂಭವಾಗಲಿದೆ. ಆದ್ದರಿಂದ ಕೌಟುಂಬಿಕ ವಿವಾದ ಮೊದಲಾದ ಸಮಸ್ಯೆ ಬಗೆಹರಿಸಿಕೊಂಡು ಖಾತೆ ಮಾಡಿಸಿಕೊಳ್ಳಬಹುದಾಗಿದೆ. ಇದರಿಂದಾಗಿ ಸಾಲ ಸೌಲಭ್ಯ ಮೊದಲಾದ ಪ್ರಯೋಜನ ದೊರಕಲಿವೆ ಎಂದರು.

ರೆವಿನ್ಯೂ ನಿವೇಶನ, ಜನತಾ ನಿವೇಶನ ಹಾಗೂ ಗ್ರಾಮ ಠಾಣಾ ನಿವೇಶನಕ್ಕೆ ಬಿ ಖಾತಾ ಮಾಡಿಕೊಡಲು ಆದೇಶಿಸಲಾಗಿದೆ. ರಾಜ್ಯಪಾಲರ ಅನುಮೋದನೆ ದೊರೆತಿದೆ. ಇದರಿಂದ ಸುಮಾರು 90 ಸಾವಿರ ನಿವೇಶನಗಳಿಗೆ ಅನುಕೂಲವಾಗಲಿದೆ. ಇದರಿಂದ ಪಾಲಿಕೆಗೆ ಆದಾಯ ಬರಲಿರುವ ಹಿನ್ನೆಲೆಯಲ್ಲಿ ಪಾಲಿಕೆ ಅಧಿಕಾರಿಗಳು ಈ ಪ್ರಕ್ರಿಯೆಯನ್ನು ಶೀಘ್ರವಾಗಿ, ಸಮಸ್ಯೆಯುಂಟು ಮಾಡದೇ ಮುಗಿಸಬೇಕೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ವಾಸು ಉಪಸ್ಥಿತರಿದ್ದರು.

ರಾಜ್ಯ ಬಜೆಟ್‌ನಲ್ಲಿ ವಿಶ್ವಕರ್ಮ ನಿಗಮಕ್ಕೆ 200 ಕೋಟಿ ರೂ. ಅನುದಾನ ನೀಡಲು ಆಗ್ರಹ

ಮೈಸೂರು, ಫೆ8(ಜಿಎ)– ರಾಜ್ಯ ಬಜೆಟ್‌ನಲ್ಲಿ ವಿಶ್ವಕರ್ಮ ಸಮುದಾಯದ ನಿಗಮಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಕನಿಷ್ಠ 200 ಕೋಟಿ ಅನುದಾನ ನೀಡಬೇಕೆಂದು ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಕೆ. ಕಂಡಣ್ಣ ವಿಶ್ವಕರ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಬಜೆಟ್‌ಗಳಲ್ಲಿ ಕೇವಲ ಐದರಿಂದ ಹತ್ತು ಕೋಟಿ ನೀಡಿರುವುದರಿಂದ ಸಮುದಾಯದ ಅಭಿವೃದ್ಧಿ ಆಗಿಲ್ಲ. ನಿಗಮದಲ್ಲಿ ನೇರ ಸಾಲ, ಅರಿವು, ಗಂಗಾ ಕಲ್ಯಾಣ ಮತ್ತು ಸ್ವಾವಲಂಬಿ ಸಾರಥಿ ಮೊದಲಾದ ಯೋಜನೆಗಳಲ್ಲಿನ ಹಲವಾರು ಸೌಲಭ್ಯ ಸಿಗುವಂತಾಗಲು ಈಗಲಾದರೂ ಕನಿಷ್ಠ 200 ಕೋಟಿ ನೀಡಬೇಕಾಗಿದೆ ಎಂದರು.

ಮತ್ತೊಂದೆಡೆ ವಿಧಾನಪರಿಷತ್ ಹಾಗೂ ವಿಧಾನಸಭೆಗಳೆರಡರಲ್ಲಿಯೂ ಸಮುದಾಯದ ಜನಪ್ರತಿನಿಧಿಗಳಿಲ್ಲ. ಇದರಿಂದಾಗಿ ಸಮುದಾಯದ ಪರ ಧ್ವನಿಯೆತ್ತುವವರು ಇಲ್ಲದಂತಾಗಿದೆ. ಆದ್ದರಿಂದ ವಿಶ್ವಕರ್ಮ ನಿಗಮ ಮಂಡಳಿ ಅಧ್ಯಕ್ಷರನ್ನು ನೇಮಕ ಮಾಡಿ ಎಂದು ಆಗ್ರಹಿಸಿದರು.

ಸಾಮಾಜಿಕ ನ್ಯಾಯ ಪರ ಮಾತನಾಡುವ ಕಾಂಗ್ರೆಸ್ ಸರ್ಕಾರ ಸಮುದಾಯದ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕು. ಹಾಸನದ ಬೇಲೂರಿನ ಚನ್ನಕೇಶವ ದೇವಾಲಯ ಎದುರು ಜಕಣಾಚಾರಿ ಪ್ರತಿಮೆ ನಿರ್ಮಿಸಬೇಕು. ಅವರ ಹುಟ್ಟೂರು ಕೈದಾಳದಲ್ಲಿ ನಿರ್ಮಾಣವಾಗಿರುವ ಸ್ಮಾರಕ ಭವನ ಅಭಿವೃದ್ಧಿಪಡಿಸಲು ಈ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಟಿ.ಎ.ಸಿದ್ದರಾಜು, ಲೋಕೇಶ್ ಮಾವಿನಹಳ್ಳಿ, ರಾಜು ಅಡಕನಹಳ್ಳಿಹುಂಡಿ ಉಪಸ್ಥಿತರಿದ್ದರು.

ಫೆ.12, 13ರಂದು 'ಪರಮೇಶಿ ಪ್ರೇಮ ಪ್ರಸಂಗ' ನಾಟಕ

ಮೈಸೂರು, ಫೆ.8(ಜಿಎ)–ಮೈಸೂರಿನ ರಂಗವಲ್ಲಿ ತಂಡದ ವತಿಯಿಂದ ರವಿಪ್ರಸಾದ್ ನಿರ್ದೇಶನದಲ್ಲಿ ಫೆ.12 ಮತ್ತು 13ರಂದು ಸಂಜೆ 6.30ಕ್ಕೆ ನಗರದ ಕಲಾಮಂದಿರದ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ 'ಪರಮೇಶಿ ಪ್ರೇಮ ಪ್ರಸಂಗ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಜುನಾಥ ಶಾಸ್ತ್ರಿ ಈ ವಿಷಯ ತಿಳಿಸಿ, ಶ್ರೀನಿವಾಸಪ್ರಭು ರಚಿಸಿರುವ ಈ ನಾಟಕವು ಸುಮಾರು ಎರಡೂ ಕಾಲು ಗಂಟೆ ಅವಧಿಯ ನಾಟಕವಾಗಿದೆ. ಸಂಪೂರ್ಣ ಹಾಸ್ಯದಿಂದ ಕೂಡಿದ್ದು, ಕಠೋರ ಬ್ರಹ್ಮಚಾರಿಯೊಬ್ಬ ಪ್ರೇಮಕ್ಕೆ ಬಿದ್ದಾಗ ಆತನ ಬದುಕಿನಲ್ಲಿ ಆಗುವ ಬದಲಾವಣೆ ಮೇಲೆ ನಾಟಕ ಸಾಗುತ್ತದೆ ಎಂದು ತಿಳಿಸಿದರು. ಈ ವೇಳೆ ನಾಟಕದ ಪೋಸ್ಟರ್ ಅನ್ನು ಸಾಹಿತಿ ಬನ್ನೂರು ಕೆ.ರಾಜು ಬಿಡುಗಡೆಗೊಳಿಸಿದರು. ಸುದ್ದಿಗೋಷ್ಠಿಯಲ್ಲಿ ಹರಿಪ್ರಸಾದ್, ಫಾಲಿಕ ರವಿ ಪ್ರಸಾದ್ ಉಪಸ್ಥಿತರಿದ್ದರು.

ಪ್ರತಿಭಾವಂತ ನೃತ್ಯಪಟುಗಳಿಗೆ ಪ್ರಮಾಣ ಪತ್ರ ವಿತರಣೆ



30ಕ್ಕೂ ಹೆಚ್ಚು ಪ್ರತಿಭಾವಂತ ನೃತ್ಯಪಟುಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು,ಫೆ.8(ಎಸ್‌ಪಿಎನ್)– ನೃತ್ಯ ವಿದ್ಯಾಪೀಠದ ವಿದ್ಯಾರ್ಥಿಗಳು ವಿವಿಧ ಜೂನಿಯರ್, ಸೀನಿಯರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದ 30ಕ್ಕೂ ಹೆಚ್ಚು ಪ್ರತಿಭಾವಂತ ನೃತ್ಯಪಟುಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು ಕಲಾಮಂದಿರದಲ್ಲಿ ಮೈಸೂರು ನೃತ್ಯ ವಿದ್ಯಾಪೀಠದ ವತಿಯಿಂದ ವಿದುಷಿ ಸಿ.ಎನ್.ಅನಿತಾ ನೇತೃತ್ವದಲ್ಲಿ ನಡೆದ ಪ್ರತಿಭಾವಂತ ನೃತ್ಯಪಟುಗಳಿಗೆ ಪ್ರಮಾಣ ಪತ್ರ ವಿತರಣೆ ಹಾಗೂ ಶಾಸ್ತ್ರೀಯ ನೃತ್ಯ ಪ್ರದರ್ಶನಕ್ಕೆ ನಿವೃತ್ತ ಸೇನಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಕೆ.ಎ.ಗೀತಾ ಚಾಲನೆ ನೀಡಿ, ಶುಭ ಹಾರೈಸಿದರು.

ನಂತರ ಜೂನಿಯರ್ ಮತ್ತು ಸೀನಿಯರ್ ನೃತ್ಯ ವಿಭಾಗದಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಕೆ.ಚೇತನ್, ಎಂ.ಎಸ್.ಚರಿತ, ಆರ್.ಧಾತ್ರಿ ವಿ. ಗಾನಶ್ರೀ, ಜಿ.ಎನ್. ತ್ರಿವೇಣಿ, ಆರ್.ಚಂದನ, ಕೆ.ಆರ್.ಭವ್ಯ, ಉನ್ನತಿ ಎಂ.ಗೌಡ, ಕೆ.ಜೆ.ಅಶ್ವತಿ, ಹರ್ಷಿತಾ, ಸಮಿತಾ ಕುಡ್ಲಿ, ಮಾನಸ ಬೃಂದಶ್ರೀ, ಪೂರ್ವಿತಾ ಕೆ.ಗೌಡ, ಕೆ.ಎ.ಅನರ್ವ, ಸಂಜನ ಜೋಶಿ, ಸಿ.ವೋನಿಷಾ, ಬಿ.ಮನಸ್ವಿ, ಡಿ.ಶಿವಿಕಾ, ನಿರಲಿ ಚಿದಂಬರಂ, ಎಚ್.ಎಂ.ಮನಸ್ವಿ, ಜಿ.ಎನ್.ಚಿತ್ಕಲಾ, ಆರ್.ಆದಿತಿ, ಜಾನವಿಕ ಎನ್.ನಾಯಕ್, ಎಚ್.ಎಂ.ಖುಷಿ, ಆರುಷಿ, ಕೆ.ಸ್ಮಿತಾ ಶೆಟ್ಟಿ, ಎಸ್.ವರ್ಷಿಕಾ ಸೇರಿದಂತೆ ಇತರರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಈ ವೇಳೆ ವಿವಿಧ ರಾಗ ಸಂಯೋಜನೆಯ ಗೀತೆಗಳಿಗೆ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿ, ಎಲ್ಲರ ಮೆಚ್ಚುಗೆಗಳಿಸಿದರು. ವೇದಿಕೆಯಲ್ಲಿ ಮೈಸೂರಿನ ರಂಗರಾವ್ ಸ್ಮಾರಕ ವಿಶೇಷಚೇತನರ ಶಾಲೆಯ ಸಂಗೀತ ಶಿಕ್ಷಕಿ ವಿದುಷಿ ಸಿ.ಎಸ್.ಲಕ್ಷ್ಮೀ, ಹೊಳೆನರಸೀಪುರದ ಸ್ವರ್ಣ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲೆ ಶೋಭಾ ಬಾಲಕೃಷ್ಣ, ಎಲ್ ಅಂಡ್ ಟಿ ಟೆಕ್ನಾಲಜಿ ವ್ಯವಸ್ಥಾಪಕಿ ಜಿ.ಕೆ.ಕಮಲ, ನೃತ್ಯ ವಿದ್ಯಾಪೀಠದ ಅಧ್ಯಕ್ಷೆ ವಿದುಷಿ ಸಿ.ಎನ್.ಅನಿತಾ ಸೇರಿದಂತೆ ಇತರರಿದ್ದರು.

ಆಲನಹಳ್ಳಿ ಬಳಿಯ ವೃತ್ತದಲ್ಲಿ ರಾತ್ರೋರಾತ್ರಿ ನಾಡಪ್ರಭು ಕೆಂಪೇಗೌಡ ಪ್ರತಿಮೆ ಪ್ರತ್ಯಕ್ಷ

ಮೈಸೂರು, ಫೆ.8(ಆರ್‌ಕೆ)– ಮೈಸೂರಿನ ಲಲಿತಮಹಲ್ ಪ್ಯಾಲೆಸ್ ಹೋಟೆಲ್ ಬಳಿ, ಎಂಜಿ ರಸ್ತೆ ಹಾಗೂ ಟಿ.ನರಸೀಪುರ ರಸ್ತೆ ಕೂಡುವ ಜಂಕ್ಷನ್ ವೃತ್ತದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ಕಳೆದ ರಾತ್ರಿ ಪ್ರತಿಷ್ಠಾಪಿಸಲಾಗಿದೆ.

ಇಂದು ಬೆಳಗ್ಗೆ ಸರ್ಕಲ್‌ನಲ್ಲಿ ದಿಢೀರ್ ಪ್ರತಿಮೆ ಪ್ರತ್ಯಕ್ಷವಾಗುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ನಜರ್‌ಬಾದ್, ಆಲನಹಳ್ಳಿ ಠಾಣೆ ಪೊಲೀಸರಿಗೆ ಆಲನಹಳ್ಳಿಯ ಒಕ್ಕಲಿಗ ಯುವಕರ ಸಂಘದ ಸದಸ್ಯರು ಹಾಗೂ ಕೆಂಪೇಗೌಡರ ಅಭಿಮಾನಿಗಳು ಕಳೆದ ರಾತ್ರಿ ಪ್ರತಿಮೆ ಪ್ರತಿಷ್ಠಾಪಿಸಿರುವ ವಿಚಾರ ತಿಳಿದುಬಂತು.

ತಕ್ಷಣ ಸಂಘದ ಪದಾಧಿಕಾರಿಗಳನ್ನು ಕರೆಸಿದ ಪೊಲೀಸರು, ಸಾರ್ವಜನಿಕ ಸ್ಥಳಗಳಲ್ಲಿ ಏಕಾಏಕಿ ಯಾವುದೇ ಪ್ರತಿಮೆ ಸ್ಥಾಪಿಸಬಾರದು ಎಂದು ಸುಪ್ರೀಂ ಕೋರ್ಟ್ ಆದೇಶವಿದೆ. ಅಲ್ಲದೆ ಮಹಾ ನಗರಪಾಲಿಕೆಯ ಪೂರ್ವಾನುಮತಿಯನ್ನು ಪಡೆಯದೆ ಪ್ರತಿಮೆ ಪ್ರತಿಷ್ಠಾಪಿಸಿರುವುದು ಸರಿಯಲ್ಲ. ಅದನ್ನು ತೆರವುಗೊಳಿಸುವಂತೆ ಸೂಚಿಸಿದರು.

ಮೈಸೂರು ನಗರಾದ್ಯಂತ ಗಣ್ಯರ ಹಲವು ಪ್ರತಿಮೆ ಸ್ಥಾಪಿಸಿರುವುದಕ್ಕೆ ಅನುಮತಿ ಪಡೆಯಲಾಗಿದೆಯೇ? ಅನಧಿಕೃತವಾಗಿ ಪ್ರತಿಷ್ಠಾಪಿಸಿರುವ ಪ್ರತಿಮೆಗಳ ತೆರವುಗೊಳಿಸಿದರೆ ನಾವೇ ನಾಡಪ್ರಭು ಕೆಂಪೇಗೌಡರ ಪ್ರತಿಮೆಯನ್ನು ತೆರವುಗೊಳಿಸುತ್ತೇವೆ ಎಂದು ಪಟ್ಟು ಹಿಡಿದರು. ಅಲ್ಲದೆ ಈ ವಿಚಾರವಾಗಿ ಪೊಲೀಸರೊಂದಿಗೆ ಮಾತಿನ ಚಕಮಕಿಯು ನಡೆದಿದೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಸ್ಥಳೀಯ ಒಕ್ಕಲಿಗ ಮುಖಂಡರು, ಈಗಾಗಲೇ ಪ್ರತಿಷ್ಠಾಪಿಸಿರುವ ಪ್ರತಿಮೆಯನ್ನು ತೆರವುಗೊಳಿಸಬೇಡಿ. ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮತಿ ಪಡೆದುಕೊಳ್ಳುತ್ತೇವೆ ಎಂದು ಪೊಲೀಸರಿಗೆ ಸಮಜಾಯಿಷಿ ನೀಡಿದರು.

ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ–1ರ ವಲಯಾಧಿಕಾರಿ ಮಂಜುನಾಥರೆಡ್ಡಿ, ಶಿವಕುಮಾರ್ ಅವರು ಸಹ ಧಾವಿಸಿ ಬಂದು, ಸಾರ್ವಜನಿಕ ರಸ್ತೆ, ಸರ್ಕಲ್, ಜಂಕ್ಷನ್‌ಗಳಲ್ಲಿ ಯಾವುದೇ ಗಣ್ಯ ವ್ಯಕ್ತಿಗಳ ಪ್ರತಿಮೆ ಸ್ಥಾಪಿಸಬಾರದೆಂದು ಸುಪ್ರೀಂಕೋರ್ಟ್ ಆದೇಶವಿರುವುದರಿಂದ ಅದನ್ನು ತೆರವುಗೊಳಿಸುವಂತೆ ಸೂಚಿಸಿದರಾದರೂ ಅದಕ್ಕೂ ಸಮುದಾಯದ ಯುವ ಮುಖಂಡರು ತೀವ್ರ ವಿರೋಧ ವ್ಯಕ್ತಪಡಿಸಿದಾಗ ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು.



ಆಲನಹಳ್ಳಿ ಬಳಿಯ ವೃತ್ತದಲ್ಲಿನ ನಾಡಪ್ರಭು ಕೆಂಪೇಗೌಡ ಪ್ರತಿಮೆ

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜು, ದೇವರಾಜ ಉಪವಿಭಾಗದ ಎಸಿಪಿ ಶಾಂತಮಲ್ಲಪ್ಪ ಸಹ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಸದ್ಯ ಪರಿಸ್ಥಿತಿ ತಿಳಿಯಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಸರ್ಕಲ್ ಬಳಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ.

ಮಹಿಳಾ ಸ್ವ–ಸಹಾಯ ಸಂಘಗಳಿಂದ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಫೆ.8– ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಡೇ–ನಲ್ಮ್ ಯೋಜನೆಯಡಿ ರಚಿಸಲಾದ ಮಹಿಳಾ ಸ್ವ–ಸಹಾಯ ಸಂಘಗಳಿಗೆ ಆಸ್ತಿ ತೆರಿಗೆ ಮತ್ತು ನೀರಿನ ತೆರಿಗೆಯನ್ನು ವಾರ್ಷಿಕ ಬೇಡಿಕೆಯನ್ನು ವಸೂಲಿ ಮಾಡಲು ಪಟ್ಟಣ ವ್ಯಾಪ್ತಿಯಲ್ಲಿ ಡೇ–ನಲ್ಮ್ ಯೋಜನೆಯಡಿ ನೋಂದಣಿಯಾದ ಸ್ಥಳೀಯ ಮಹಿಳಾ ಸ್ವ–ಸಹಾಯ ಗುಂಪುಗಳ ಸೇವೆಯನ್ನು ಪಡೆದ ಸದರಿ ಸ್ವಸಹಾಯ ಗುಂಪುಗಳಿಗೆ ವಸೂಲಿಯಾದ ಮೊತ್ತದಲ್ಲಿ ಶೇ.5 ರಷ್ಟು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಆಸಕ್ತ ಮಹಿಳಾ ಸ್ವಸಹಾಯ ಗುಂಪುಗಳು ಫೆ.25 ರಂದು ಸಂಜೆ 4 ಗಂಟೆಯೊಳಗೆ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ ಹೆಚ್ಚಿನ ಮಾಹಿತಿಗಾಗಿ ಶ್ರೀರಾಂಪುರ ಪಟ್ಟಣ ಪಂಚಾಯಿತಿಯ ಡೇ–ನಲ್ಮ್ ಶಾಖೆಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ಎಂದು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

STAR OF MYSORE

SPECIAL ISSUE

Star of Mysore is completing 47 years of service on 16th February 2025 and entering 48th year of publication. As in the past, this year too we will be publishing a Special Issue.

We request our advertisers and patrons to release their advertisements before 11th February to facilitate printing as per schedule.

HEAD OFFICE

0821-2496520 (5-LINES)
Ad Dept. - 0821-2496522 / 23
Email : ad@starofmysore.com
Maria G. Fernandes
Advt. Manager: 94485-25060
Joy Anthony Dove
Sr. Executive-Ad Sales
89516-68960
Prema
Sr. Executive Advertising
98805-49879
K.R. Circle Office: 0821-2431774
D.D. Urs Road Office: 0821-2428695
Kodagu Office: 97314-69871
Mandya Office: 87629-60325
Chamarajanagar: 92422-65657
Nanjangud: 98805-09200 / 99016-02226
T.N. Pura: 94483-05750
Bengaluru: 98440-46761

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಹಸಿರು ನಮ್ಮ ಉಸಿರು

ಉಪನಿರ್ದೇಶಕರ ಕಛೇರಿ
ಜಿಲ್ಲಾ ಕೇಂದ್ರ ಗ್ರಂಥಾಲಯ
4ನೇ ಮುಖ್ಯ ರಸ್ತೆ, ಈಜುಕೊಳದ ರಸ್ತೆ, ಸರಸ್ವತಿಪುರಂ, ಮೈಸೂರು–570 009
e-mail–cldclmys@gmail.com ದೂ: 2425875,2425975

"ಅಲ್ಪಾವಧಿ ಟೆಂಡರ್ ಪ್ರಕಟಣೆ"
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್)

ಉಪನಿರ್ದೇಶಕರ ಕಚೇರಿ, ಜಿಲ್ಲಾ ಕೇಂದ್ರ ಗ್ರಂಥಾಲಯ, ಮೈಸೂರು ಕಛೇರಿ ಹಾಗೂ ಕಛೇರಿ ವ್ಯಾಪ್ತಿಯ ಗ್ರಂಥಾಲಯಗಳಿಗೆ ಕೀಟನಾಶಕ ಸಿಂಪಡಣೆ ಮಾಡುವ ಬಗ್ಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ "ಇ" ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ್ನು ಸಂಪರ್ಕಿಸುವುದು. ಹಾಗೂ ಇ.ಎಂ.ಡಿ ಮತ್ತು ಇತರೆ ವಿವರಗಳಿಗಾಗಿ ಈ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು. ಟೆಂಡರ್ ಖರೀದಿಯ ಮೊತ್ತ ರೂ.3.00 ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ ದಿ: 13.02.2025 ಸಂಜೆ 5.30 ಗಂಟೆ, ಟೆಂಡರ್‌ನ ತಾಂತ್ರಿಕ್ ಬಿಡ್ ತೆರೆಯುವ ದಿ: 15.02.2025 ಬೆಳಿಗ್ಗೆ 11.30 ಗಂಟೆ.

DIPR/DDMYS/1245/KSMCA/866/2024-25 ಸಹಿ/– ಉಪನಿರ್ದೇಶಕರು(ಹೆ.ಪ್ರ)